
ಬೆಳ್ಳಿ ಮಾಲಿಕೆ



ಹಾಸನ ಜಿಲ್ಲೆಯ

# ಜನಪದ ಕಲಾವಿದರು

ಡಾ. ಹಂಪನಹಳ್ಳಿ ತಿಮ್ಮೇಗೌಡ



# ಹಾಸನ ಜಿಲ್ಲೆಯ

# ಜನಪದ ಕಲಾವಿದರು

•

ಡಾ. ಹಂಪನಹಳ್ಳಿ ತಿಮ್ಮೇಗೌಡ

•

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು-೦೨

"HASSANA JILLEYA JANAPADA KALAVIDARU"
Written by Dr. Hampanahally Thimme Gowda,
Professor of Kannada, Govt. Arts College Hassan and
Member, Karnataka Janapada and Yakshagana Academy,
Bangalore.

Published by : B. N. Paraddi, Registrar,
Karnataka Janapada and
Yakshagana Academy;
Kannada Bhavan, J. C. Road,
Bangalore -02

Pages : 14 + 158 = 172

Price : Rs. 60-00

Rights : Author

ಪ್ರಕಾಶಕರು : ಬಿ. ಎನ್. ಪರಡ್ಡಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು – ೫೬೦೦೦೨
ದೂರವಾಣಿ : ೦೮೦–೨೨೨೧೫೫೦೯

ಪರಿಶೀಲನಾ ಸಮಿತಿ :

ಶ್ರೀ ಕೆರೆಮನೆ ಶಂಭು ಹೆಗಡೆ

| | |
|---|---|
| ಶ್ರೀ ಗವೀಶ ಹಿರೇಮಠ | ಡಾ. ಹಂಪನಹಳ್ಳಿ ತಿಮ್ಮೇಗೌಡ |
| ಡಾ. ಚಿಕ್ಕಣ್ಣ ಯಣ್ಣೆಕಟ್ಟೆ | ಡಾ. ಕೆ. ಚಿನ್ನಪ್ಪಗೌಡ |
| ಶ್ರೀ ಅರಾಟೆ ಮಂಜುನಾಥ | ಡಾ. ಬಿ. ಎಸ್. ತಲ್ವಾಡಿ |

ಮುಖಪುಟ ವಿನ್ಯಾಸ, ಮುದ್ರಣ :
ಪ್ರಭು ಗ್ರಾಫಿಕ್ಸ್,
ತೋಂಟದಾರ್ಯ ಮಠದ ಎದುರು, ಸ್ಟೇಶನ್ ರೋಡ, ಗದಗ.
ಫೋ : [೦೮೩೭೨] ೨೩೮೧೮೧ ಮೊ : ೯೪೪೮೧೮೬೦೬೩, ೯೮೮೦೯೦೪೭೦೭

# ಅಧ್ಯಕ್ಷರ ನುಡಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಕಟಿಸುತ್ತಿರುವ ಕಲಾವಿದರ ಪರಿಚಯ ಪುಸ್ತಕಕ್ಕೆ ಮುನ್ನುಡಿ ರೂಪದಲ್ಲಿ ಕೆಲವು ಮಾತುಗಳನ್ನು ಇಲ್ಲಿ ದಾಖಲಿಸಲು ಅಣಿಯಾಗುತ್ತಿದ್ದೇನೆ.

ಅಕಾಡೆಮಿ ತನ್ನ ಇಪ್ಪತ್ತೈದು ವರ್ಷಗಳನ್ನು ಯಶಸ್ವಿಯಾಗಿ ದಾಟಿಬಂದು, ಬೆಳ್ಳಿಹಬ್ಬವನ್ನು ಆಚರಿಸುವ ಸಂಭ್ರಮದಲ್ಲಿದೆ. ಇಲ್ಲಿಯವರೆಗೆ ಜಾನಪದ ಕ್ಷೇತ್ರದ ಸಿದ್ಧಿ–ಸಾಧನೆಗಳನ್ನು, ಅಧ್ಯಯನದ ಮೂಲಕ ದುಡಿದು ತಾತ್ವಿಕ ಚೌಕಟ್ಟನ್ನು ರೂಪಿಸಿಕೊಟ್ಟ ವಿದ್ವಾಂಸರನ್ನು ಪರಿಚಯಿಸುವ "ಜಾನಪದ ತಲೆಮಾರು" ಹೊತ್ತಿಗೆಯ ನಾಲ್ಕು ಸಂಪುಟಗಳು ಬಂದಿರುವುದು ಸ್ತುತ್ಯ ಕಾರ್ಯವೇ ಸರಿ.

ಅದೇ ಪ್ರಕಾರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ ಜಾನಪದದ ವಿವಿಧ ಕಲಾವಿದರ ಪರಿಚಯವನ್ನು ದಾಖಲಿಸಬೇಕೆಂಬುದು ನನ್ನ ಹಂಬಲ. ಜಾನಪದ ಕಲಾಪ್ರಕಾರಗಳ ವೈವಿಧ್ಯಗಳನ್ನು ಸಹೃದಯರ ಕಣ್ಣು, ಕಿವಿ, ಮನಸ್ಸುಗಳಿಗೆ ಪ್ರತ್ಯಕ್ಷ ಬಣ್ಣಿಸುವ ಕಲಾವಿದರೂ ಅಷ್ಟೇ ಮುಖ್ಯರಾಗುತ್ತಾರೆ. ವಿದ್ವಾಂಸರ ಅಧ್ಯಯನ, ಅವಲೋಕನ, ಆಲೋಚನೆಗಳಿಗೆ ಮೂಲ ಸೆಲೆಯಾಗುವ ಇಂಥ ಕಲಾವಿದರು ಅನೇಕ ಸಲ ಪ್ರಶಸ್ತಿ, ಪುರಸ್ಕಾರ, ಗೌರವ, ಅವಕಾಶಗಳಿಂದ ವಂಚಿತರಾಗುತ್ತಾರೆ. ಇಂಥ ಕಲಾವಿದರ ಪರಿಚಯ, ವಿವರಗಳ ಸಂಗ್ರಹವಾದರೂ ಅಕಾಡೆಮಿಯಲ್ಲಿ ಲಭ್ಯವಾಗುವಂತಿದ್ದರೆ, ಅಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದು ನನ್ನ ಉದ್ದೇಶ. ಕಲಾವಿದರ ಪರ ಈ ಧೋರಣೆಯನ್ನು ಅಕಾಡೆಮಿಯ ಸರ್ವ ಸದಸ್ಯರ ಸಮ್ಮುಖದಲ್ಲಿ ಇಟ್ಟಾಗ ಎಲ್ಲರೂ ಉತ್ಸಾಹದಿಂದಲೇ ಬೆಂಬಲಿಸಿದರು. ಅದರ ಫಲವೇ ಈ "ಬೆಳ್ಳಿ ಮಾಲಿಕೆ."

ಯೋಜನೆಯ ಕಾರ್ಯಸ್ವರೂಪವನ್ನು ವ್ಯವಸ್ಥಿತವಾಗಿ ಯೋಜಿಸಿದಾಗ ಜಿಲ್ಲೆಗೊಬ್ಬೊಬ್ಬ ಲೇಖಕರನ್ನು ನಿಯೋಜಿಸಿ, ಅಕಾಡೆಮಿ ಕಾರ್ಯಪ್ರವೃತ್ತವಾಯಿತು. ಆದರೆ ಕೆಲವು ಜಿಲ್ಲೆಗಳ ಕಲಾವಿದರ ಪರಿಚಯ ಕೃತಿಗಳು ಮಾತ್ರ ಬಂದಿದ್ದು, ಅವುಗಳನ್ನು ಪ್ರಕಟಿಸುತ್ತಿದ್ದೇವೆ. ಕಲಾವಿದರ ಪರಿಚಯ ಪುಸ್ತಕಗಳನ್ನು ಹೊರತರುತ್ತಿರುವ ಸಂದರ್ಭದಲ್ಲಿ, ಈ ಮಾಲಿಕೆಗೆ ಅಕಾಡೆಮಿಯು ಪುಟಗಳ ಮಿತಿ ಹಾಕಿಕೊಳ್ಳುವುದರೊಂದಿಗೆ ಹಿರಿಯ ವಯಸ್ಸಿನ ಕಲಾವಿದರನ್ನು ಮಾತ್ರ ದಾಖಲಿಸುವ ಉದ್ದೇಶದಿಂದ ವಯಸ್ಸಿನ ಮಿತಿಯನ್ನೂ ಹಾಕಿಕೊಂಡಿತು. ಜೊತೆಗೆ ಈ ಮಿತಿಯೊಳಗಿನ ಎಲ್ಲಾ ಕಲಾವಿದರನ್ನೂ ಪರಿಚಯಿಸಲು ಸಾಧ್ಯವಾಗಿಲ್ಲ. ಇದರ ಬಗ್ಗೆ ಕ್ಷಮೆ ಇರಲಿ. ಉಳಿದ ಕಲಾವಿದರ ಪರಿಚಯ ಮುಂದೆ ಅಕಾಡೆಮಿಯಿಂದ ಆಗಲಿ ಎಂಬ ನಿರೀಕ್ಷೆ ನನ್ನದು.

ಈ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವಲ್ಲಿ ನೆರವಾದ ಎಲ್ಲರನ್ನೂ ಇಲ್ಲಿ ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ. ಅಕಾಡೆಮಿಯ ಎಲ್ಲ ಸದಸ್ಯರೂ ಉತ್ಸಾಹದಿಂದ ಪ್ರೋತ್ಸಾಹಿಸಿದ್ದಾರೆ. ಕೆಲವು ಜಿಲ್ಲೆಯ ಕಲಾವಿದರ ಮಾಹಿತಿಯನ್ನು ಲೇಖಕರು ಬರೆದುಕೊಟ್ಟಿರುತ್ತಾರೆ. ಮುದ್ರಣದ ಹೊಣೆಗಾರಿಕೆಯನ್ನು ಶ್ರೀ ಗವೀಶ ಹಿರೇಮಠ ಎಚ್ಚರದಿಂದ ನಿರ್ವಹಿಸಿದ್ದಾರೆ. ಯೋಜನೆ ಪ್ರಸ್ತಾಪದ ಹಂತದಲ್ಲಿದ್ದಾಗ ರಿಜಿಸ್ಟ್ರಾರ್ ಆಗಿದ್ದ ಶ್ರೀ ಎಂ. ಮುನಿರಾಜು ಅವರು, ಕಾರ್ಯರೂಪಕ್ಕೆ ಬರುವಾಗ ರಿಜಿಸ್ಟ್ರಾರ್ ಆಗಿರುವ ಶ್ರೀ ಬಿ. ಎನ್. ಪರಡ್ಡಿ ಅವರೂ, ಕಛೇರಿಯ ಸಿಬ್ಬಂದಿ ವರ್ಗದವರಾದ ಶ್ರೀ ಹೆಚ್. ಪ್ರಕಾಶ್, ಶ್ರೀಮತಿ ಎಂ. ನಾಗರತ್ನ, ಶ್ರೀ ಶಿವಲಿಂಗಯ್ಯ ಇವರುಗಳು ಎಲ್ಲಾ ಹಂತಗಳಲ್ಲಿಯೂ ನೆರವಾಗಿದ್ದಾರೆ. ಇವರೆಲ್ಲರಿಗೂ ಈ ಸಂದರ್ಭದಲ್ಲಿ ನನ್ನ ಕೃತಜ್ಞತೆಗಳು.

ಅಕಾಡೆಮಿಯ ಎಲ್ಲ ಪ್ರಕಟಣೆಗಳನ್ನು ಆದರದಿಂದ ಬರಮಾಡಿಕೊಂಡಂತೆ ಕಲಾವಿದರ ಪರಿಚಯ ಪುಸ್ತಕಗಳನ್ನು ಓದುಗರು ಬರಮಾಡಿಕೊಳ್ಳುತ್ತಾರೆಂಬ ಭರವಸೆ ನನ್ನದು.

ದಿನಾಂಕ : ೧೬-೧-೨೦೦೮ **ಕೆರೆಮನೆ ಶಂಭು ಹೆಗಡೆ**
ಬೆಂಗಳೂರು ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

# ಬೆಳ್ಳಿಮಾಲಿಕೆಗೆ ಬಂಗಾರದ ತೋರಣ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ 25 ವರ್ಷ ತುಂಬಿದ್ದರಿಂದ ಬೆಳ್ಳಿಹಬ್ಬ ಆಚರಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ. ಅಧ್ಯಕ್ಷರ ಸಂಕಲ್ಪ, ಸದಸ್ಯರ ಹುಮ್ಮಸ್ಸಿನ ಕಾರ್ಯತತ್ಪರತೆ ಬೆಳ್ಳಿಹಬ್ಬಕ್ಕೆ ಹೊಸ ಮೆರುಗು ತಂದಿದೆ. ಹೊರಗಡೆ ಅಕಾಡೆಮಿಯ ಕಾರ್ಯಕಲಾಪಗಳ ಸಾಧನೆ ಬಗ್ಗೆ ಮಾತನಾಡಿದ್ದು ಕೇಳಿದಾಗ ಹೆಮ್ಮೆ ಎನಿಸುತ್ತದೆ.

25 ವರ್ಷಗಳ ಹಿಂದಿನ ಪುಟಗಳನ್ನು ತಿರುಗಿಸಿದಾಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಪ್ರಥಮ ಅಧ್ಯಕ್ಷರಾಗಿ ಅನೇಕ ಸಮಸ್ಯೆಗಳ ನಡುವೆಯೂ ಸಾಧಿಸಿ, ಅಕಾಡೆಮಿಗೊಂದು ರೂಪ ಕೊಟ್ಟು ಮಹತ್ವದ ಸ್ಥಾನ ಕಲ್ಪಿಸಿಕೊಟ್ಟ ದಿ : ಶ್ರೀ ಹೆಚ್. ಎಲ್. ನಾಗೇಗೌಡ ಅವರ ಸ್ಮರಣೆ ಅಗತ್ಯವಾದುದು. ಮುಂದೆ ದಿ. ಡಾ. ಎಸ್. ಕೆ. ಕರೀಂಖಾನ್, ದಿ : ಡಾ. ಜೀ ಶಂ. ಪರಮಶಿವಯ್ಯ, ಡಾ. ಕಾಳೇಗೌಡ ನಾಗವಾರ, ಡಾ. ಎಚ್. ಜೆ. ಲಕ್ಕಪ್ಪಗೌಡ, ಡಾ. ಹಿ. ಶಿ. ರಾಮಚಂದ್ರೇಗೌಡ ಈ ವಿದ್ವಾಂಸರುಗಳ ಸಾಂದರ್ಭಿಕ ಸಾಧನೆಗಳು, ಪ್ರಕಟಣೆಗಳು, ಅಕಾಡೆಮಿಯನ್ನು ಹೊಸದಿಕ್ಕಿನತ್ತ ಬೆಳೆಸುವಲ್ಲಿ ಪ್ರೇರಕವಾಗಿವೆ. ಇವರೆಲ್ಲರ ಸಹಾಯದಿಂದ ಅಕಾಡೆಮಿ ಇಂದು ಸಶಕ್ತವಾಗಿ ಬೆಳೆದಿದೆಯೆಂದು ಭಾವಿಸುತ್ತೇನೆ ಮತ್ತು ಈ ಎಲ್ಲ ಮಹನೀಯರನ್ನು ಬೆಳ್ಳಿಹಬ್ಬದ ಆಚರಣೆಯ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

25 ವರ್ಷಗಳ ಅಕಾಡೆಮಿಯ ಸಾಧನೆಗಳ ಬಗ್ಗೆ ನಮಗೆ ತೃಪ್ತಿ ಇದೆ. ಇದುವರೆವಿಗೆ ನಾಡಿನಲ್ಲಿ, ಹೊರನಾಡಿನಲ್ಲಿ ಜನಪದ ಸಾಹಿತ್ಯ, ಕಲೆ, ಕಲಾವಿದರನ್ನು ಕುರಿತು ನಡೆಸಿದ ವಿಚಾರ ಸಂಕಿರಣಗಳು, ಚರ್ಚೆಗಳು, ಶಿಬಿರಗಳು, ಪ್ರದರ್ಶಿಸಿದ ಕಲೆಗಳು ಜಾನಪದದ ಬೆಳವಣಿಗೆಗೆ ಕಾರಣವಾಗಿವೆ. ನಾಡಿನ, ಹೊರನಾಡಿನ ವಿದ್ವಾಂಸರನ್ನು, ಕಲಾವಿದರನ್ನು

ಗುರುತಿಸಿ, ಅವರ ಸೇವೆಯನ್ನು ಪರಿಗಣಿಸಿ, ಪ್ರಶಸ್ತಿ ಪಾರಿತೋಷಕ ನೀಡಿ ಗೌರವಿಸುತ್ತಾ ಬಂದಿದೆ.

ಅಕಾಡೆಮಿಯ ಇಡೀ ಸಾಧನೆಗೆ ಹಿಂದಿನ ಅಧ್ಯಕ್ಷರು, ಸದಸ್ಯರು, ರಿಜಿಸ್ಟ್ರಾರ್ ಹಾಗೂ ಅಕಾಡೆಮಿಯ ಸಿಬ್ಬಂದಿಗಳ ಪರಿಶ್ರಮವಿದೆ. ಸರಕಾರ, ಸಂಘ–ಸಂಸ್ಥೆಗಳ ಸಹಕಾರಗಳನ್ನು ನಾವು ಮರೆಯುವಂತಿಲ್ಲ.

"ಜಾನಪದ ತಲೆಮಾರು" ಮಾಲಿಕೆಯಲ್ಲಿ ನಾಡಿನ ವಿದ್ವಾಂಸರ, ತಜ್ಞರ ಬದುಕು, ಸಾಧನೆ, ಕೊಡುಗೆಗಳನ್ನೊಳಗೊಂಡಂತೆ ಅವರ ಪರಿಚಯದ ಲೇಖನಗಳನ್ನು ಪ್ರಕಟಿಸಿ ನೂರಾರು ಜನರನ್ನು ದಾಖಲಿಸಿದೆ.

ಜೊತೆಗೆ ಜಾನಪದ ಕಲೆ ಸಾಹಿತ್ಯ ಕುರಿತು ಮೌಲಿಕ ಗ್ರಂಥಗಳನ್ನು ಹೊರತರುತ್ತಾ ಪ್ರಕಟಣೆಯ ಕಾರ್ಯದಲ್ಲಿಯೂ ಸಾಕಷ್ಟು ಕೆಲಸ ಮಾಡುತ್ತಲೇ ಬಂದಿರುವುದು ಸಮಾಧಾನದ ಸಂಗತಿಯಾಗಿದೆ.

ನಮ್ಮ ಜನಪದ ಕಲೆ ಸಂಸ್ಕೃತಿ ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಬರುತ್ತಿರುವ ಪ್ರತಿಭಾನ್ವಿತ ಕಲಾವಿದರ ಪರಿಚಯ ಪುಸ್ತಕ ಬರಬೇಕೆನ್ನುವ ಆಲೋಚನೆ ಈ ಬೆಳ್ಳಿಹಬ್ಬದ ಸಂದರ್ಭದಲ್ಲಿ ಶ್ರೇಷ್ಠ ಪ್ರತಿಭಾನ್ವಿತ ಯಕ್ಷಗಾನ ಕಲಾವಿದರು, ನಮ್ಮ ಅಕಾಡೆಮಿಯ ಅಧ್ಯಕ್ಷರೂ ಆದ ಶ್ರೀ ಕೆರೆಮನೆ ಶಂಭು ಹೆಗಡೆಯವರ ಅಧ್ಯಕ್ಷರ ಅವಧಿಯಲ್ಲಿ ಬಂದದ್ದು ಸಮಂಜಸವಾದದ್ದು. ಅಧ್ಯಕ್ಷರು ಸ್ವತಃ ಕಲಾವಿದರಾಗಿದ್ದರಿಂದಲೇ ಕಲಾವಿದರ ನೋವು ನಲಿವುಗಳಿಗೆ ಸ್ಪಂದಿಸುತ್ತಾ ಅವರಿಗಾಗಿ ಹತ್ತಾರು ಯೋಜನೆಗಳನ್ನು ರೂಪಿಸಿ, ಕಾರ್ಯಗತಗೊಳಿಸುವತ್ತ ಈಗ ಸಮಗ್ರ ನಾಡಿನ ಕಲಾವಿದರ ಪರಿಚಯ ಪುಸ್ತಕ ತರುತ್ತಿರುವುದು ಅಭಿಮಾನದ ಸಂಗತಿಯಾಗಿದೆ.

ನಾಡಿನ ಎಲ್ಲಾ ಜಿಲ್ಲೆಗಳಿಂದ ಆಸಕ್ತಿಯುಳ್ಳ ಲೇಖಕರನ್ನು ಕರೆಯಿಸಿ ಗ್ರಂಥದ ರೂಪು–ರೇಷೆಯ ಬಗ್ಗೆ, ಪುಟಗಳ ಸಂಖ್ಯೆ ಬಗ್ಗೆ ಸಭೆಯಲ್ಲಿ ತಿಳಿಸಿ, ಹಸ್ತಪ್ರತಿ ಕಳುಹಿಸಲು ಸಾಕಷ್ಟು ಸಮಯ ನೀಡಲಾಯಿತು. ಆದರೂ ಕೆಲವು ಜಿಲ್ಲೆಗಳ ಲೇಖಕರು ಕೊನೆಯವರೆಗೂ ಹಸ್ತಪ್ರತಿ ಕಳಿಸದಿದ್ದದು ನಿರಾಶೆಯನ್ನುಂಟುಮಾಡಿದೆ. ಬಂದ ಹಸ್ತಪ್ರತಿಗಳನ್ನೆಲ್ಲಾ ಪರಿಶೀಲಾ ಸಮಿತಿ ಪರಿಶೀಲಿಸಿ, ತಕ್ಷಣ ಅಕಾಡೆಮಿಯು ಮುದ್ರಣಕಾರ್ಯ ಕೈಗೆತ್ತಿಕೊಂಡು 10 ಜಿಲ್ಲಾ ಕಲಾವಿದರ ಪರಿಚಯ ಪುಸ್ತಕ ಹಾಗೂ 3 ವಿಶೇಷ ಗ್ರಂಥಗಳು ಸೇರಿದಂತೆ ಒಟ್ಟು 13 ಪುಸ್ತಕಗಳನ್ನು ಈ ಬೆಳ್ಳಿಹಬ್ಬದ ಸಂದರ್ಭದಲ್ಲಿ ಹೊರತರುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಕೊನೆಯದಾಗಿ ಕೃತಜ್ಞತೆಯ ಒಂದೆರೆಡು ಮಾತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಐ. ಎಂ. ವಿಠ್ಠಲಮೂರ್ತಿಯವರನ್ನು ಎಷ್ಟು ಸ್ಮರಿಸಿದರೂ ಕಡಿಮೆ. ಅವರು ಈ ಬೆಳ್ಳಿಹಬ್ಬದ ಕಾರ್ಯಕ್ರಮಕ್ಕೆ ಆಸಕ್ತಿ ತೋರಿಸಿ,

ಹೆಚ್ಚಿನ ಧನ ಸಹಾಯ ಮಾಡಿದ್ದರಿಂದಲೇ ಪ್ರಕಟಣೆಗಳು, ವಿಶೇಷ ಕಾರ್ಯಕ್ರಮಗಳು ಜರುಗುತ್ತಿವೆ. ಅವರಿಗೆ ಅಕಾಡೆಮಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೂ ಸಮಯಕ್ಕೆ ಸರಿಯಾಗಿ ಸಹಾಯ, ಸಹಕಾರ ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಮಾನ್ಯ ಶ್ರೀ ಮನು ಬಳಿಗಾರ ಅವರಿಗೂ ಅಕಾಡೆಮಿ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಗೊತ್ತುಪಡಿಸಿದ ಅವಧಿಯಲ್ಲಿ ತಮ್ಮ ತಮ್ಮ ಜಿಲ್ಲೆಯ ಹಿರಿಯ ಹಾಗೂ ಪ್ರತಿಭಾನ್ವಿತ ಕಲಾವಿದರ ಮಾಹಿತಿ ಸಂಗ್ರಹಿಸಿ, ಹಸ್ತಪ್ರತಿ ಸಿದ್ಧಪಡಿಸಿಕೊಟ್ಟ ಲೇಖಕರಿಗೆ, ಆಗಾಗ ಸಭೆ ಸೇರಿ ಈ ಪ್ರಕಟಣಾ ಕಾರ್ಯಕ್ಕೆ ಚಾಲನೆ ನೀಡಿ ಸಹಕರಿಸಿದ ಪ್ರಕಟಣಾ ಸಮಿತಿ ಅಧ್ಯಕ್ಷರು, ಸದಸ್ಯರಿಗೆ, ಪ್ರಕಟಣೆಯ ಜವಾಬ್ದಾರಿ ಹೊತ್ತು ಎಲ್ಲ ಪುಸ್ತಕಗಳ ವಿನ್ಯಾಸ, ಕರಡು ತಿದ್ದುವಿಕೆ, ಮುದ್ರಣ ಸಮೀಕ್ಷೆಯ ಕಾರ್ಯ ನಿರ್ವಹಿಸಿದ ಅಕಾಡೆಮಿ ಸದಸ್ಯರಾದ ಶ್ರೀ ಗವೀಶ್ ಹಿರೇಮಠ ಅವರಿಗೆ, ಕಡಿಮೆ ಅವಧಿಯಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಪ್ರಭು ಗ್ರಾಫಿಕ್ಸ್ ಮಾಲೀಕರಾದ ಶ್ರೀ ಶಾಂತವೀರ ಜಂಗಮನಿಯವರಿಗೆ ಹಾಗೂ ಅಕಾಡೆಮಿಯ ಪ್ರಕಟಣೆಗಳನ್ನು ಆಸಕ್ತಿಯಿಂದ ಬರಮಾಡಿಕೊಳ್ಳುವ ಸಹೃದಯಿಗಳಿಗೆ ಅನಂತ ಕೃತಜ್ಞತೆಗಳು.

– ಬಿ. ಎನ್. ಪರಡ್ಡಿ

ರಿಜಿಸ್ಟ್ರಾರ್,<br>
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,<br>
ಬೆಂಗಳೂರು.

# ಗೆಜ್ಜೆ ಮಾತಾಡುತಾವೆ

ಈ ಕೃತಿಯಲ್ಲಿರುವವರು ನಮ್ಮ ನಿಮ್ಮ ನಡುವೆ ಇರುವ ಮತ್ತು ಇಲ್ಲದಿರುವ ಸಾಂಸ್ಕೃತಿಕ ರಾಯಭಾರಿಗಳು. ಸಮಾಜಕ್ಕೆ ಗುರುವಾಗಿ ಶತಮಾನಗಳನ್ನು ಕಂಡವರು; ಕಾಣಿಸಿದವರು. ಅಕ್ಷರದ ಅರಿವಿಲ್ಲದಿದ್ದರೂ ವಿಶ್ವವಿದ್ಯಾನಿಲಯದಲ್ಲಿ ಕಲಿತವರಿಗಿಂತ ಹೆಚ್ಚು ಸಮರ್ಪಕವಾಗಿ ಸಾಂಸ್ಕೃತಿಕ ಜ್ಞಾನ ಸಂಪತ್ತನ್ನು ಹೊಂದಿದ್ದು ಅದನ್ನು ಪ್ರಸಾರ ಮಾಡಿದ ಅಭಿಜ್ಞರು. ಮುಂದಿನ ತಲೆಮಾರಿಗೂ ಪಸರಿಸುತ್ತಿರುವ ನಿಸ್ಸೀಮರು. ಇಂತಹ ಪ್ರಬುದ್ಧ ಜ್ಞಾನವಂತರನ್ನು ನಾಗರಿಕರಾದ ನಾವು ಮುಗ್ಧರನ್ನಾಗಿ ಮಾಡಿ, ಆಧುನಿಕತೆಯ ಅಬ್ಬರದಲ್ಲಿ ಮುದುರಿಕೊಂಡು ಮುಸುಗುಡುವಂತೆ ಮಾಡಿದ್ದೇವೆ. ಇವರನ್ನು ಗುರುತಿಸಿ ಮುಖ್ಯವಾಹಿನಿಗೆ ತಂದಲ್ಲಿ ಪರಂಪರಾಗತವಾದ ಕಲೆಯ ಜ್ಞಾನ ಸಮಾಜಕ್ಕೆ ದೊರಕುತ್ತದೆ.

ಕಲೆ ಮತ್ತು ಕಲಾವಿದ ಯಾವೊತ್ತು ಸಮಾಜದ ಸ್ವತ್ತು. ಕಲಾವಿದರು ಸಂಸ್ಕೃತಿಯ ಪ್ರತಿಬಿಂಬವಾಗಿ ಪ್ರತಿಯೊಬ್ಬರಿಗೂ ಕಾಣಲು ಸಾಧ್ಯ. ಆದ್ದರಿಂದ ಕಲಾವಿದರು ಸರ್ವದೃಷ್ಟಿಯಿಂದಲೂ ಆರೋಗ್ಯವಾಗಿದ್ದಾಗ, ಸಶಕ್ತರಾಗಿದ್ದಾಗ ಮಾತ್ರ ನಮ್ಮ ಸಂಸ್ಕೃತಿ ಯಶಸ್ವಿಯಾಗಿ ಆಧುನಿಕ ಅಬ್ಬರಗಳನ್ನೆಲ್ಲ ಮೆಟ್ಟಿ ನಿಲ್ಲಲು ಸಾಧ್ಯ. ಅಂತಹ ಶಕ್ತಿಯನ್ನು ಕಲಾವಿದರಿಗೆ ತುಂಬುವ ಜವಾಬ್ದಾರಿ ಸಮಾಜದ್ದು, ನಾಗರಿಕ ಜಗತ್ತಿನದು. ಕಲಾವಿದರು ಯಾವಾಗಲೂ ಬಳಸಿ ಬಿಸಾಡುವ ವಸ್ತುವಿನಂತಾಗಬಾರದು. ಜನಪದ ಕಲಾವಿದರು ಇಪ್ಪತ್ನಾಲ್ಕು ಕ್ಯಾರಟ್ ಅಪರಂಜಿಯಂತೆ ಇದ್ದು, ಎಚ್ಚರಿಕೆಯಿಂದ ಬಳಸುವ ವಸ್ತುವಿನಂತಾಗಬೇಕು. ಅದಿಲ್ಲದಿದ್ದರೆ ತೀಟೆ ತೀರಿಸಿಕೊಂಡ ಲೌಡಿಯಂತೆ ಆಗುತ್ತದೆ. ನಾಗರಿಕರೆನಿಸಿಕೊಂಡವರು ಸಭ್ಯ ಸಮಾಜದ ಗರತಿಯಂತಾಗುವುದು ಒಳಿತಲ್ಲವೇ? ಆಗ ಕಲೆಯೂ ಉಳಿಯುತ್ತದೆ, ಕಲಾವಿದರನ್ನು ಬದುಕಿಸಿದಂತಾಗುತ್ತದೆ.

ಹಾಸನ ಜಿಲ್ಲೆ ಹಿಂದಿನಿಂದಲೂ ಸಾಹಿತ್ಯ, ಸಂಸ್ಕೃತಿ, ಕಲೆ, ರಾಜಕೀಯ ಮುಂತಾದ ವಿಷಯಗಳಲ್ಲಿ ಯಾವೊತ್ತು ಮುಂದೆಯೆ. ಹಳಗನ್ನಡದ ಬಹುಪಾಲು ಸಾಹಿತಿಗಳು ಈ ಜಿಲ್ಲೆಯಲ್ಲಿದ್ದವರು. ಹೊಯ್ಸಳರು ಸಾಂಸ್ಕೃತಿಕವಾಗಿ ತಮ್ಮ ವೈಭವವನ್ನು ಮೆರೆದಿದ್ದು ಇಲ್ಲಿಯೆ. ರಾಜಕೀಯವಾಗಿಯೂ ಇತ್ತೀಚೆಗೆ ದೇಶದಲ್ಲಿ ತನ್ನದೇ ಆದ ಸ್ಥಾನವನ್ನು ಗುರುತಿಸಿಕೊಂಡಿದೆ. ಅಂತೆಯೆ ಜಾನಪದದಲ್ಲಿಯೂ ಹಿಂದೆ ಬಿದ್ದಿಲ್ಲ. ಇಲ್ಲಿ ಸಂಪದ್ಭರಿತವಾದ ಜನಪದ ಕಲೆ ಹಾಗೂ ಜಾನಪದ ವಿದ್ವಾಂಸರ ತಂಡಗಳೆ ಹುಟ್ಟಿಕೊಂಡು ತಮ್ಮ ಸಾಮರ್ಥ್ಯವನ್ನು ಕರ್ನಾಟಕದ ಜಾನಪದ ಕ್ಷೇತ್ರಕ್ಕೆ ತೋರ್ಪಡಿಸಿವೆ. ಇಲ್ಲಿಯ ಜನಪದ ಕಲಾವಿದರು ರಾಜ್ಯ ಹಾಗೂ ರಾಷ್ಟ ಮಟ್ಟದಲ್ಲಿ ತಮ್ಮ ಪ್ರತಿಭೆಗಳನ್ನು ತೋರಿಸಿದ್ದಾರೆ. ರಾಜ ಮಹಾರಾಜರುಗಳಿಂದ ಪ್ರಶಂಸೆಗೆ ಒಳಗಾಗಿರುವವರು ಇದ್ದಾರೆ. ವಿದ್ವಾಂಸರನ್ನೇ ತೆಗೆದುಕೊಂಡರೆ ಜಾನಪದ ಅಕಾಡೆಮಿಗೆ ಇದುವರೆವಿಗೂ ಆಗಿರುವ ಏಳು ಜನ ಅಧ್ಯಕ್ಷರುಗಳಲ್ಲಿ ಮೂರು ಜನ ಈ ಜಿಲ್ಲೆಯವರು ಎಂಬುದು ಹೆಮ್ಮೆಯ ವಿಷಯ. ಕರ್ನಟಕದ ಜಾನಪದ ಕ್ಷೇತ್ರಕ್ಕೆ ಸಂಗ್ರಹ, ಸಂಪಾದನೆ, ವೈಚಾರಿಕವಾದ ಅಧ್ಯಯನಕ್ಕೆ ಈ ಜಿಲ್ಲೆ ಕೊಟ್ಟಿರುವ ಕೊಡುಗೆ ಅಪಾರ.

ಹಾಸನ ಜಿಲ್ಲೆ ಹಲವಾರು ಜನಪದ ಕಲಾ ಪ್ರಕಾರಗಳನ್ನು ತನ್ನ ಒಡಲೊಳಗೆ ಅಡಗಿಸಿಕೊಂಡಿದೆ. ಈ ಜಿಲ್ಲೆಯಲ್ಲಿದ್ದಷ್ಟು ತಂಬೂರಿ ಕಲೆ, ಕರಪಾಲ ಕಲೆ ಮತ್ತೊಂದು ಜಿಲ್ಲೆಯಲ್ಲಿ ಇರಲಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಆದರೆ ಇಂದು ಕೇವಲ ನೆನಪಾಗಿ ಉಳಿಯುವಂತಾಗಿದೆ. ಕೋಲಾಟ ಹಳ್ಳಿಗಳ್ಳಿಗಳಲ್ಲಿದೆ. ಭಾಗವಂತಿಕೆ ಇಲ್ಲಿಯ ವಿಶೇಷ. ತೊಗಲುಗೊಂಬೆ, ಸೋಮನಕುಣಿತ, ಚೌಡಿಕೆ, ಸುಗ್ಗಿ ಕುಣಿತ, ಹೆಣ್ಣುಮಕ್ಕಳ ಸುಗ್ಗಿ, ಬಿಲ್ಲು ಮಲ್ಲು ಕುಣಿತ, ಗಾರುಡಿ ಕುಣಿತ, ಬಿಟ್ಟಿಮೇಳ, ಕರಡೆ ವಾದ್ಯ, ಕುಣಿಮಿಣಿ ವಾದ್ಯ, ಮೂಡಲಪಾಯ ಯಕ್ಷಗಾನ, ನವಿಲು ಕುಣಿತ, ಕೀಲುಕುದುರೆ ಕುಣಿತ, ತಮಟೆ ವಾದನ, ಜನಪದ ಜಾದೂಗಾರಿಕೆ, ಜನಪದ ಕಥೆಗಾರರು, ಸೋಬಾನೆ ಹಾಡುಗಾರರು, ಯಕ್ಷಗಾನ ಧಾಟಿಯ ಶನಿ ಕಥೆಗಾರರು, ಕಹಳೆವಾದನಗಾರರು, ಹರೆ ವಾದಕರು, ಮೌರಿ, ಶೃತಿ ಊದುವವರು, ಲಂಬಾಣಿ ನೃತ್ಯ, ಹಕ್ಕಿ ಪಿಕ್ಕಿಯವರ ಕುಣಿತ, ಭಜನೆ, ಮಾರಿಕುಣಿತ, ಕುಣಿಯುವ ಗುಡ್ಡರು, ಇತ್ತೀಚೆಗೆ ವೀರಗಾಸೆ ನೃತ್ಯಗಾರರು, ಕರಗ ನೃತ್ಯ ಹೀಗೆ ನೂರಾರು ಜನಪದ ಕಲೆಗಳು ಈ ಜಿಲ್ಲೆಯಲ್ಲಿವೆ. ಕೆಲವು ಉನ್ನತ ನೆಲೆಯನ್ನು ಕಂಡುಕೊಂಡಿದ್ದರೆ, ಇನ್ನು ಕೆಲವು ಕುಂಟುತ್ತಾ ಜೀವ ಉಳಿಸಿಕೊಳ್ಳಲು ಹೆಣಗಾಡುತ್ತಿರುವುದನ್ನು ಕಾಣುತ್ತೇವೆ.

ಹಾಸನ ಜಿಲ್ಲೆಯಲ್ಲಿ ಸಾವಿರಾರು ಜನಪದ ಕಲಾವಿದರಿದ್ದಾರೆ. ಅವರೆಲ್ಲರನ್ನು ಕೃತಿಯಲ್ಲಿ ತರಲು ಸಾಧ್ಯವಾಗದ ಕೆಲಸ. ಸಾಗರದಲ್ಲಿ ಸಾಸಿವೆಯಷ್ಟನ್ನು ಮಾತ್ರ ತೆಗೆವ ಕೆಲಸ ನನ್ನದು. ಅದಕ್ಕಾಗಿ ಅಕಾಡೆಮಿ ಒಂದು ಮಿತಿಯನ್ನು ಹಾಕಿಕೊಂಡಿತು. ಇದುವರೆಗೂ ಅಕಾಡೆಮಿಯಿಂದ ಪ್ರಶಸ್ತಿ ಪಡೆದಿರುವ ಕಲಾವಿದರು ಹಾಗೂ ಐವತ್ತೈದು ವರ್ಷ ದಾಟಿರುವವರನ್ನು ದಾಖಲಿಸುವುದು. ಐವತ್ತೈದು ವರ್ಷ ದಾಟಿದ ಎಲ್ಲಾ

ಕಲಾವಿದರನ್ನೂ ಕೂಡಾ ಸಾದ್ಯಂತವಾಗಿ ಗುರುತಿಸಲು ಕೂಡ ಆಗಿಲ್ಲ. ಅದು ಆಗುವ ಕೆಲಸವೂ ಅಲ್ಲ. ಕಾರಣ ಜನಪದ ಕಲಾವಿದರ ಸಂಖ್ಯೆ ಅಪರಿಮಿತವಾದುದು, ಅಗಣಿತವಾದುದು ಕೂಡ. ಆದ್ದರಿಂದ ಇಲ್ಲಿ ಕೆಲವರನ್ನು ಮಾತ್ರ ಗುರುತಿಸಲು ಸಾಧ್ಯವಾಗಿದೆ. ಉಳಿದಿರುವವರು ಮುಂದಿನ ಕೃತಿಗಳಲ್ಲಿ ಸೇರಬಹುದು. ಎಲ್ಲರನ್ನು ದಾಖಲಿಸಲು ಆಗದಿರುವುದಕ್ಕೆ ಕಲಾವಿದರಲ್ಲಿ ಕ್ಷಮೆ ಕೋರುತ್ತೇನೆ. ಕಲಾವಿದರ ಸಂಖ್ಯೆಯನ್ನು ಮಿತಿಗೊಳಿಸಿಕೊಳ್ಳಲು ಮತ್ತೊಂದು ಕಾರಣವೆಂದರೆ ಪುಸ್ತಕದ ಪುಟಸಂಖ್ಯೆ ಮಿತಿಮೀರುವಂತಿಲ್ಲ ಎಂಬುದು ಕೂಡ ಒಂದು. ಇಲ್ಲಿ ಅರವತ್ತು ವರ್ಷಕ್ಕಿಂತ ಒಳಪಟ್ಟಿರುವವರು ಕೇವಲ ಏಳು ಜನ ಮಾತ್ರ. ಉಳಿದ ೮೩ ಜನರು ೬೦ ವರ್ಷದಿಂದ ೧೧೦ ವರ್ಷದವರೆಗೂ ಇದ್ದಾರೆ. ಕಲಾವಿದರ ವಯಸ್ಸಿನ ಹಿರಿತನದ ಆಧಾರದ ಮೇಲೆ ಪರಿವಿಡಿಯನ್ನು ಸಿದ್ಧಪಡಿಸಲಾಗಿದೆ.

ಜನಪದ ಕಲಾವಿದರನ್ನು ಹುಡುಕಿಕೊಂಡು ಕ್ಷೇತ್ರ ಕಾರ್ಯಮಾಡಲು ಹೋದಾಗ ಎದುರಾದ ಅಡೆಗಡೆಗಳು ಸಾಕಷ್ಟು. ಎಷ್ಟೋ ಕಲಾವಿದರು ನೇರವಾಗಿ ಸಿಗಲಿಲ್ಲ. ಅವರ ಮನೆಯವರಿಂದ ಮಾಹಿತಿ ಸಂಗ್ರಹಿಸಿದೆ. ಇನ್ನು ಕೆಲವರು ನೇರವಾಗಿ ಸಿಕ್ಕರೂ ತಮ್ಮ ವಯಸ್ಸು ಕೂಡ ನಿರ್ದಿಷ್ಟವಾಗಿ ಗೊತ್ತಿಲ್ಲ. ತಾವು ಸಲ್ಲಿಸಿರುವ ಕಲಾಸೇವೆಯ ಬಗ್ಗೆ ಯಾವ ಮಾಹಿತಿಯನ್ನು ಇಟ್ಟುಕೊಂಡಿಲ್ಲ. ಊರುಗಳನ್ನು ಬಿಟ್ಟರೆ ಇತರ ಮಾಹಿತಿಕೊಡಲು ಅವರಿಗೆ ತೋಚುತ್ತಿರಲಿಲ್ಲ. ಕೆಲವರಿಗೆ ಕಾರ್ಯಕ್ರಮ ನೀಡಿರುವ ಊರುಗಳ ಹೆಸರುಗಳು ಕೂಡ ಜ್ಞಾಪಕದಲಿಲ್ಲ. ಕೆಲವರಂತು ತಾವು ಜಿಲ್ಲೆ, ರಾಜ್ಯ ಹಾಗು ಹೊರ ರಾಜ್ಯಗಳಲ್ಲಿ ಪ್ರದರ್ಶನ ನೀಡಿರುವ ಬಗ್ಗೆ ಪ್ರಮಾಣ ಪತ್ರಗಳು, ಭಾವಚಿತ್ರಗಳನ್ನು ಇಟ್ಟಿದ್ದಾರೆ. ಅಂತಹವರ ಸಂಖ್ಯೆ ಬಹಳ ಕಡಿಮೆ. ಕೆಲವರು ನನ್ನ ಮನೆಗೆ ಬಂದು ಮಾಹಿತಿ ನೀಡಿದರು. ಪತ್ರಿಕೆಯಲ್ಲಿ ಪ್ರಕಟಣೆಯನ್ನು ಕೊಟ್ಟಾಗ ಅಂಚೆ ಮೂಲಕ ಬಂದ ಮಾಹಿತಿ ಒಂದೇ ಒಂದು.

ಈ ಕೃತಿಯಲ್ಲಿ ಈಗಾಗಲೆ ಮೃತರಾದವರು ಹಲವರು ಇದ್ದಾರೆ. ಅವರೂ ಕೂಡ ದಾಖಲೆಯಾಗಿ ಉಳಿಯಲಿ ಎಂಬ ಕಾರಣದಿಂದ ಅಕಾಡೆಮಿಯೇ ನಿರ್ಧರಿಸಿರುವಂತೆ ದಾಖಲಿಸಲಾಗಿದೆ. ಅಕಾಡೆಮಿ ಪ್ರಾರಂಭವಾದಂದಿನಿಂದ ಇದುವರೆಗೂ ಪ್ರಶಸ್ತಿ ಪಡೆದಿರುವ ಜಿಲ್ಲೆಯ ಕಲಾವಿದರು ಇಲ್ಲಿ ದಾಖಲಾಗಿದ್ದಾರೆ. ಆದರೆ ಜನಪದ ವೈದ್ಯ ಪದ್ಧತಿಗೆ ಪ್ರಶಸ್ತಿ ಪಡೆದಿರುವ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹೋಬಳಿಯ ಅತ್ತಿಹಳ್ಳಿ ಗ್ರಾಮದ ಶ್ರೀಮತಿ ಗಿರಿಜಕ್ಕ ಹಾಗು ಹಾಸನ ನಗರದ ಶ್ರೀ ಸಿ. ಪ್ರಶಾಂತ ಬಾಗಡೆ ಅವರನ್ನು ಇಲ್ಲಿ ದಾಖಲಿಸಿಲ್ಲ. ಕಾರಣ ಇವರು ಜನಪದ ವೈಜ್ಞಾನಿಕ ಪ್ರಕಾರಕ್ಕೆ ಸೇರುತ್ತಾರೆ.

ಜಾನಪದ ಅಕಾಡೆಮಿಯ ಹತ್ತು ಹಲವಾರು ವಿಭಿನ್ನ ಚಟುವಟಿಕೆಗಳಲ್ಲಿ ಪುಸ್ತಕ ಪ್ರಕಟಣೆಯಲ್ಲಿ ಒಂದು. ನಿಕಟ ಪೂರ್ವ ಅಧ್ಯಕ್ಷರಾದ ಡಾ. ಹಿ. ಶಿ. ರಾಮಚಂದ್ರೇಗೌಡರು

ಜಾನಪದ ತಲೆಮಾರು ಎಂಬ ಮಾಲಿಕೆಯಲ್ಲಿ ಜಾನಪದ ಕ್ಷೇತ್ರದಲ್ಲಿ ಇದುವರೆವಿಗೂ ಕೆಲಸ ಮಾಡುತ್ತಾ ಬಂದಿರುವ ಜಾನಪದ ವಿದ್ವಾಂಸರ ಕೆಲಸವನ್ನು ದಾಖಲಿಸುವ ಕೆಲಸ ಮಾಡಿದರು. ಹಿಂದೆ ಮೂರು ಕೃತಿಗಳು ಪ್ರಕಟವಾಗಿದ್ದು, ಈ ಅವಧಿಯಲ್ಲಿ ನಾಲ್ಕನೆ ತಲೆಮಾರು ಪ್ರಕಟಿಸುವುದರ ಮೂಲಕ ಶೇ. ೬೦ ರಷ್ಟು ಕೆಲಸ ಆಯಿತು. ಪ್ರಸ್ತುತ ಅಧ್ಯಕ್ಷರಾಗಿರುವ ಶ್ರೀ ಕೆರೆಮನೆ ಶಂಭು ಹೆಗಡೆಯವರು ವಿದ್ವಾಂಸರಂತೆಯೇ ಜನಪದ ಕಲಾವಿದರೂ ಕೂಡ ಕೃತಿಯಲ್ಲಿ ದಾಖಲಾಗಿ ಉಳಿಯುವಂತಾಗಬೇಕೆಂದು ಪ್ರತಿ ಜಿಲ್ಲೆಗೊಂದರಂತೆ ಜನಪದ ಕಲಾವಿದರ ಸಾಧನೆಗಳನ್ನೊಳಗೊಂಡ ಪರಿಚಯ ಪುಸ್ತಕಗಳನ್ನು ತರುವ ಯೋಜನೆ ಹಾಕಿಕೊಂಡರು. ಅದರಂತೆ ಈ ಕೆಲಸ ಮುಂದುವರಿಯುತ್ತಿದೆ. ಇದೊಂದು ಆಶಾದಾಯಕ ಬೆಳವಣಿಗೆಯಾಗಿದ್ದು, ಜಾನಪದ ಅಕಾಡೆಮಿಯ ಮಹತ್ವದ ಸಾಧನೆಯೂ ಆಗಿದೆ.

ಕ್ಷೇತ್ರಕಾರ್ಯ ಮಾಡುವಾಗ ಮಾಹಿತಿ ಒದಗಿಸಿಕೊಟ್ಟ ಎಲ್ಲಾ ಕಲಾವಿದರಿಗೆ, ಹಲವು ಮಾಹಿತಿಗಳನ್ನು ಒದಗಿಸಿ ಸಹಕರಿಸಿದ ಡಾ. ಐ. ಎಂ. ಮೋಹನ್, ಶ್ರೀ ಟಿ. ಡಿ. ತಮ್ಮಣ್ಣಗೌಡ, ಶ್ರೀ ಶಿವನಗೌಡ ಪಾಟೀಲ, ಶ್ರೀ ದೊಡ್ಡಹಳ್ಳಿ ರಮೇಶ್, ಶ್ರೀ ತಿರುಪತಿಹಳ್ಳಿ ಶಿವಶಂಕರಪ್ಪ, ಶ್ರೀ ಟಿ. ಎಚ್. ಅಪ್ಪಾಜಿಗೌಡ, ಶ್ರೀ ಕೆ. ಬಿ. ಗಂಗಾಧರ ಯಡಕೆರೆ; ಈ ಕೆಲಸವನ್ನು ನನಗೆ ವಹಿಸಿ ಪ್ರೋತ್ಸಾಹಿಸಿದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಕೆರೆಮನೆ ಶಂಭು ಹೆಗಡೆಯವರಿಗೆ, ಕೃತಿಯನ್ನು ಪ್ರಕಟಿಸುತ್ತಿರುವ ರಿಜಿಸ್ಟ್ರಾರ್ ಆದ ಶ್ರೀ ಬಿ. ಎನ್ ಪರಡ್ಡಿ ಹಾಗು ಸಿಬ್ಬಂದಿ ವರ್ಗದವರು ಎಲ್ಲರಿಗೂ ನನ್ನ ವಂದನೆಗಳು.

**ಡಾ. ಹಂಪನಹಳ್ಳಿ ತಿಮ್ಮೇಗೌಡ**
ಪ್ರಾಧ್ಯಾಪಕರು
ಸ. ಕ. ಕಾಲೇಜು, ಹಾಸನ ಮತ್ತು
ಸದಸ್ಯರು, ಕ.ಜಾ.ಯ. ಅಕಾಡೆಮಿ, ಬೆಂಗಳೂರು

| | | |
|---|---|---|
| ೧. | ಸೈಯದ್ ಇಸಾಕ್ | ೧ |
| ೨. | ಮರುವನಹಳ್ಳಿ ನಂಜಪ್ಪ | ೩ |
| ೩. | ಕಾರೇಹಳ್ಳಿ ಸಿದ್ದೇಗೌಡ | ೫ |
| ೪. | ಹೊಸಕೊಪ್ಪಲ ಗೊಂಬೆರಾಮಯ್ಯ | ೭ |
| ೫. | ಚೇಳಗಾಲ ಗೊಂಬೆರಾಮಯ್ಯ | ೯ |
| ೬. | ರಾಗಿ ಮರೂರು ಜವರಯ್ಯ | ೧೧ |
| ೭. | ಎಸ್. ಕೆ. ಕರೀಂಖಾನ್ | ೧೩ |
| ೮. | ಹಿರಿಸಾವೆ ನಂಜಮ್ಮ | ೧೫ |
| ೯. | ಹೊವ್ವಿನಹಳ್ಳಿ ಹನುಮವ್ವ | ೧೭ |
| ೧೦. | ಜವರಯ್ಯ ಉ॥ಕಿವುಡಯ್ಯ | ೧೯ |
| ೧೧. | ಜಿ. ಎಸ್. ಅಪ್ಪಾಜಿಗೌಡ | ೨೧ |
| ೧೨. | ಹೊನ್ನಶೆಟ್ಟಿಹಳ್ಳಿ ಹುಚ್ಚಮ್ಮ | ೨೩ |
| ೧೩. | ಪಂಪಾಪುರ ಈರಮ್ಮ | ೨೫ |
| ೧೪. | ಸಯೀದ್ ಹುಸೇನ್ | ೨೭ |
| ೧೫. | ಸೋಬಾನೆ ಗಿಡ್ಡೇಗೌಡ | ೨೯ |
| ೧೬. | ಗೊಲ್ಲರಹಟ್ಟಿ ಸೂರಪ್ಪ | ೩೧ |
| ೧೭. | ವಾದ್ಯದ ಚಲುವಯ್ಯ | ೩೩ |
| ೧೮. | ಇಬ್ಬೀಡು ಎಸ್. ಸಗುನ ನಾಯ್ಕ | ೩೫ |
| ೧೯. | ತಂಬೂರಿ ನರಸಪ್ಪ | ೩೭ |
| ೨೦. | ಗೋಳೇನಹಳ್ಳಿ ತಿಮ್ಮಯ್ಯ | ೩೮ |
| ೨೧. | ಸಿದ್ದರಾಮಣ್ಣ | ೪೦ |
| ೨೨. | ತಂಬೂರಿ ದಾಸಪ್ಪ | ೪೨ |
| ೨೩. | ಯು. ಎ. ಪಂಪಾಶಾಸ್ತ್ರಿ | ೪೪ |
| ೨೪. | ತಂಬೂರಿ ಮರಿಯಪ್ಪ | ೪೬ |
| ೨೫. | ಕಾಳಯ್ಯ | ೪೮ |
| ೨೬. | ಗಿರಿಜಮ್ಮ | ೫೦ |
| ೨೭. | ಹೆಚ್. ಎಸ್. ಬಂಗಾರು | ೫೧ |
| ೨೮. | ಸಣ್ಣಮರಿ | ೫೩ |
| ೨೯. | ಸಿ. ಚನ್ನಪ್ಪ | ೫೪ |

| | | |
|---|---|---|
| ೩೦. | ಹೆಚ್. ಡಿ. ಸಂಜೀವಯ್ಯ | ೫೬ |
| ೩೧. | ಡಿ. ಸಿ. ಗೌಡಯ್ಯ | ೫೮ |
| ೩೨. | ಚನ್ನಮ್ಮ | ೬೦ |
| ೩೩. | ಚಿಕ್ಕ ಹನುಮಯ್ಯ | ೬೨ |
| ೩೪. | ಪೂಜಾರಿ ತಿಮ್ಮಯ್ಯ | ೬೪ |
| ೩೫. | ರುದ್ರನ ಚಿಕ್ಕನ ದ್ಯಾವಯ್ಯ | ೬೫ |
| ೩೬. | ಕೆಂಚಯ್ಯ (ಮಿಡಿಯ) | ೬೬ |
| ೩೭. | ಖುತೇಜಾಬಿ | ೬೮ |
| ೩೮. | ಕೆಂಚಪ್ಪ | ೭೦ |
| ೩೯. | ಪಟೇಲ್ ಮಂಜೇಗೌಡ | ೭೧ |
| ೪೦. | ಪಾಪಮ್ಮ | ೭೩ |
| ೪೧. | ಸತ್ಯಪ್ಪ | ೭೫ |
| ೪೨. | ಅಗಸರ ಮಾರಣ್ಣ | ೭೬ |
| ೪೩. | ಸಣ್ಣಗಿಡ್ಡಯ್ಯ | ೭೮ |
| ೪೪. | ಸಂಜೀವಯ್ಯ | ೮೦ |
| ೪೫. | ನಿಂಗಯ್ಯ | ೮೧ |
| ೪೬. | ಮಾಳಯ್ಯ | ೮೩ |
| ೪೭. | ಮಂಡಿಗೌಡ | ೮೫ |
| ೪೮. | ಜಯಮ್ಮ | ೮೬ |
| ೪೯. | ಸಿದ್ಧೇಗೌಡ | ೮೮ |
| ೫೦. | ಲಕ್ಷ್ಮಯ್ಯ | ೮೯ |
| ೫೧. | ಜಯಮ್ಮ | ೯೧ |
| ೫೨. | ಮೊಗಣ್ಣಗೌಡ | ೯೩ |
| ೫೩. | ಎಂ. ಬಿ. ಶಿವರುದ್ರಪ್ಪ | ೯೪ |
| ೫೪. | ಬಿ. ಎಲ್. ಗೋವಿಂದ ಪೈ | ೯೬ |
| ೫೫. | ವೀರಯ್ಯ | ೯೮ |
| ೫೬. | ಸೋಬಾನೆ ನಿಂಗಮ್ಮ | ೯೯ |
| ೫೭. | ಸತ್ಯಮ್ಮ | ೧೦೧ |
| ೫೮. | ಕೋಮಾರಯ್ಯ (ಮೊಗಾರಯ್ಯ) | ೧೦೩ |
| ೫೯. | ಮಲ್ಲೇಶಯ್ಯ | ೧೦೫ |
| ೬೦. | ಐ. ಡಿ. ಧರ್ಮಪ್ಪ | ೧೦೭ |
| ೬೧. | ಪುಟ್ಟ ತಾಯಮ್ಮ | ೧೦೯ |
| ೬೨. | ಸೋಬಾನೆ ಪಾಪಮ್ಮ | ೧೧೦ |

| | | |
|---|---|---|
| ೬೩. | ಗೋವಿಂದಪ್ಪ . . | ೧೧೧ |
| ೬೪. | ಪಿ. ಚನ್ನರಾಯಿ . . | ೧೧೩ |
| ೬೫. | ನಾರಾಯಣ . . | ೧೧೫ |
| ೬೬. | ವೆಂಕಟರಾಮಯ್ಯ . . | ೧೧೬ |
| ೬೭. | ಕೃಷ್ಣೇಗೌಡ . . | ೧೧೮ |
| ೬೮. | ಪುಟ್ಟಮ್ಮ . . | ೧೨೦ |
| ೬೯. | ಪುಟ್ಟಶೆಟ್ಟಿ . . | ೧೨೨ |
| ೭೦. | ರಂಗಮ್ಮ . . | ೧೨೪ |
| ೭೧. | ಎಂ. ವಿ. ಗೋವಿಂದರಾಜು . . | ೧೨೫ |
| ೭೨. | ಎಂ. ಎಲ್. ಸಿದ್ದಯ್ಯ . . | ೧೨೭ |
| ೭೩. | ಚಿದಾನಂದಸ್ವಾಮಿ . . | ೧೨೯ |
| ೭೪. | ಸಿದ್ಧಾಚಾರಿ . . | ೧೩೧ |
| ೭೫. | ಸಿದ್ದಯ್ಯ . . | ೧೩೨ |
| ೭೬. | ಬಿ. ಸಿ. ರಾಜೇಗೌಡ . . | ೧೩೩ |
| ೭೭. | ರಂಗಸ್ವಾಮಿ . . | ೧೩೪ |
| ೭೮. | ಮರಿಯಮ್ಮ . . | ೧೩೫ |
| ೭೯. | ರಂಗಯ್ಯ . . | ೧೩೭ |
| ೮೦. | ಕೃಷ್ಣಯ್ಯ . . | ೧೩೯ |
| ೮೧. | ಕಸ್ತೂರಮ್ಮ . . | ೧೪೦ |
| ೮೨. | ವೈ. ಎಚ್. ಸೋಮೇಗೌಡ . . | ೧೪೧ |
| ೮೩. | ದ್ಯಾವಯ್ಯ . . | ೧೪೩ |
| ೮೪. | ವೆಂಕಟರಾಮು . . | ೧೪೪ |
| ೮೫. | ಶೇಖರಯ್ಯ . . | ೧೪೫ |
| ೮೬. | ಲಕ್ಷ್ಮಮ್ಮ . . | ೧೪೬ |
| ೮೭. | ಮರಿಗೌಡ . . | ೧೪೭ |
| ೮೮. | ಜವರಯ್ಯ . . | ೧೪೯ |
| ೮೯. | ಪುಟ್ಟಯ್ಯ . . | ೧೫೧ |
| ೯೦. | ನಂಜಾಬೋವಿ . . | ೧೫೨ |
| ೯೧. | ಗುಂಡೂರಾಜ . . | ೧೫೪ |
| ೯೨. | ಕುಮಾರಯ್ಯ . . | ೧೫೭ |

# ಸೈಯದ್ ಇಸಾಕ್

ಹಾಸನ ನಗರದ ಶ್ರೀ ಸೈಯದ್ ಇಸಾಕ್ ತಂದೆ ಸೈಯದ್ ಇಮಾಮ್ ತಾಯಿ ಫಾತಿಮಾ. ಇವರು ಈಗಿಲ್ಲ. ಈಗ ಬದುಕಿದ್ದರೆ ಇವರಿಗೆ ಸುಮಾರು ನೂರಹತ್ತು ವರ್ಷಗಳಷ್ಟಾಗುತ್ತಿತ್ತು. ಇವರು ಯಕ್ಷಗಾನ ಮೇಳಗಳನ್ನು ಕಲಿಸುವುದರೊಂದಿಗೆ ವೇಷವನ್ನು ಕೂಡ ಹಾಕಿದವರು.

ಮೂಲತಃ ಕಡ್ಲೆಕಾಯಿ, ಕಬ್ಬಿಣದ ತುಂಡುಗಳನ್ನು ಮಾರಿಕೊಂಡು ಜೀವನ ಸಾಗಿಸುತ್ತಿದ್ದ ಶ್ರೀ ಸೈಯದ್ ಇಸಾಕ್ ಅವರು ಮುಸ್ಲೀಮರಾದರೂ, ನಿರ್ಗತಿಕರಾದರೂ ಇವರಲ್ಲಿ ಅಪಾರ ಕಲಾ ಸಂಪತ್ತಿತ್ತು. ಕಲೆಗೆ ಧರ್ಮ ಯಾವುದೇ ರೀತಿಯಲ್ಲಿ ಅಡ್ಡಿಯಾಗಲಿಲ್ಲ ಎಂದು ಹೇಳಿಕೊಳ್ಳುತ್ತಿದ್ದವರು. ಜೀವನ ದುರ್ಭರವೆನಿಸಿದಾಗ ಜೀವನದಲ್ಲಿ ಸಿಗದ ನೆಮ್ಮದಿ ಸುಖವನ್ನು ಕಲೆಯ ಮೂಲಕ ಪಡೆದುಕೊಂಡು ಯಶಸ್ವಿಯಾಗುತ್ತಿದ್ದವರು ಶ್ರೀ ಇಸಾಕ್ ಅವರು.

ಇವರು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಯಕ್ಷಗಾನ ಕಲೆಗೆ ಮನಸೋತವರು. ಹಾಸನ ಸಮೀಪ ಇರುವ ಚಿಕ್ಕಬಸವನಹಳ್ಳಿಯುವರಾದ ಭಾಗವತ ಶ್ರೀ ಸಿದ್ಧಲಿಂಗಪ್ಪನವರಿಂದ ಯಕ್ಷಗಾನವನ್ನು ಕಲಿತು ಹಾಸನ ಜಿಲ್ಲೆಯಾದ್ಯಂತ ನೂರಾರು ಯಕ್ಷಗಾನ ಪ್ರದರ್ಶನಗಳನ್ನು ನೀಡಿದ್ದಾರೆ. ಇವರು ಕಲಿಸುತ್ತಿದ್ದ ಯಕ್ಷಗಾನ ಕಥೆಗಳೆಂದರೆ ದಕ್ಷ ಬ್ರಹ್ಮ ಕಥೆ, ದುಶ್ಯಾಸನ ಕಥೆ, ಕಂಸಾಸುರನ ಕಥೆ, ಕರಿಭಂಟನ ಕಾಳಗ ಮುಂತಾದ ಪ್ರಸಂಗಗಳು. ಮೇಳಗಳನ್ನು ಕಲಿಸುವುದರ ಜೊತೆಗೆ ಸ್ವತಃ ಗಜಾಸುರ, ವೀರಭದ್ರ, ನಾರದ, ಭೀಮ, ಉದ್ಧಂಡಿ ಮುಂತಾದ ಪಾತ್ರಗಳ ವೇಷಗಳನ್ನು ಹಾಕಿ ಜನಪ್ರಿಯತೆಗಳಿಸಿದ್ದವರು. ದೈತ್ಯ ಪಾತ್ರಗಳು, ಗಂಭೀರವಾದ ಪಾತ್ರಗಳ ಜೊತೆಗೆ ಹಾಸ್ಯ ಪಾತ್ರಗಳನ್ನು ಕೂಡ ಮಾಡುತ್ತಿದ್ದವರು. ಇವರ ಅಭಿನಯಕ್ಕೆ ಮಾರು ಹೋದ ಜನರು

ಇವರನ್ನು ಯಕ್ಷಗಾನ ಇಸಾಕ್ ಎಂದೇ ಕರೆಯುತ್ತಿದ್ದರು. ಇವರಿಗೆ ಅನೇಕ ಸಂಘ ಸಂಸ್ಥೆಗಳು ಗೌರವ ನೀಡಿವೆ. ೧೯೮೮ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇವರಿಗೆ ಕಲಾವಿದರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರೊಬ್ಬ ಅಪರೂಪದ ಕಲಾವಿದನೆಂದರೆ ಅತಿಶಯೋಕ್ತಿಯಾಗಲಾರದು.

ಸೈಯದ್ ಇಸಾಯಿಕ್,
ಹೊಸ ಲೈನ್ ರಸ್ತೆ,
ಹಾಸನ.

# ಮರುವನಹಳ್ಳಿ ನಂಜಪ್ಪ

ಮೂಡಲಪಾಯ ಯಕ್ಷಗಾನದಲ್ಲಿ ಪ್ರಸಿದ್ಧ ಭಾಗವತರಾದ ನಂಜಪ್ಪನವರು ಹಾಸನ ಜಿಲ್ಲೆ ಚನ್ನರಾಯ ಪಟ್ಟಣ ತಾಲ್ಲೂಕಿನ ಬಾಗೂರು ಹೋಬಳಿಯ ಮರುವನಹಳ್ಳಿಯವರು, ಈಗ ವಯಸ್ಸು ೧೧೦ ವರ್ಷ. ಒಕ್ಕಲಿಗ ಜನಾಂಗಕ್ಕೆ ಸೇರಿದವರು. ತಂದೆ ಬಸವೇಗೌಡ. ಕೂಲಿಮಠದಲ್ಲಿ ಕೇವಲ ಮೂರನೆ ತರಗತಿಯವರೆಗೆ ಕಲಿತಿರುವ ಇವರು ಗುರುಗಳಾದ ಬಸವಾಚಾರ್ ಅವರಿಂದ ಮೂಡಲಪಾಯ ಯಕ್ಷಗಾನದ ಬಗ್ಗೆ ಆಸಕ್ತಿ ಬೆಳೆಸಿಕೊಂಡರು. ಬಸವಾಚಾರ್ ಅವರು ಮರುವನಹಳ್ಳಿಗೆ ಬಂದು ಹರಿಶ್ಚಂದ್ರ ಮೂಡಲಪಾಯ ಯಕ್ಷಗಾನವನ್ನು ಕಲಿಸಲು ಆರಂಭಿಸದಾಗ ಅವರಲ್ಲಿ ಲೋಹಿತಾಶ್ವನ ಪಾತ್ರವನ್ನು ಅಭಿನಯಿಸಿ ಊರಿನ ಎಲ್ಲಾ ಜನರಿಂದ ಸೈ ಎನಿಸಿಕೊಂಡರು. ಅನಂತರ ಇವರ ಅಭಿನಯ ಮುಂದುವರಿಯುತ್ತಾ ಸಾಗಿತು. ಕರಿಭಂಟನ ಕಾಳಗದಲ್ಲಿ ಹನುಮ ನಾಯಕನಾಗಿ ಪಂಚವಟಿ ರಾಮಾಯಣದಲ್ಲಿ ವಾಲಿಯಾಗಿ ಅಭಿನಯಿಸಿದರು. ಗಜಗೌರಿ ವ್ರತದಲ್ಲಿ ಕೃಷ್ಣ ವೇಷ ಹಾಕುತ್ತಿದ್ದರು.

ಇವರ ಅಭಿನಯ ತಮ್ಮ ಹಳ್ಳಿಗೆ ಮಾತ್ರ ಸೀಮಿತವಾಗದೆ, ಇಡೀ ಬಾಗೂರು ಹೋಬಳಿಗೆ ವಿಸ್ತರಿಸಿತ್ತು. ತಮ್ಮ ಕಾರ್ಯವ್ಯಾಪ್ತಿಯನ್ನು ಕೇವಲ ಅಭಿನಯಕ್ಕಷ್ಟೇ ಸೀಮಿತಗೊಳಿಸಿಕೊಳ್ಳದೆ ತಮ್ಮ ಗುರುಗಳಾದ ಬಸವಾಚಾರ್ ಅವರಿಂದ ಮೃದಂಗ ನುಡಿಸುವುದನ್ನು ಕಲಿತರು. ಜೊತೆಗೆ ಭಾಗವಂತಿಕೆ ಮಾಡುವುದನ್ನು ರೂಢಿಸಿಕೊಂಡು ಮೂಡಲಪಾಯ ಯಕ್ಷಗಾನ ಭಾಗವತರೆಂದೇ ಪ್ರಸಿದ್ಧರಾದರು. ಮೊದಲಿಗೆ ಇವರು ತಮ್ಮ ಹಳ್ಳಿಯಾದ ಮರುವನಹಳ್ಳಿಯಲ್ಲಿ ತ್ರಿಪುರಸಂಹಾರ ಎಂಬ ಯಕ್ಷಗಾನ ಬಯಲಾಟ ಮಾಡುವುದರೊಂದಿಗೆ ಭಾಗವಂತಿಕೆಗೆ ನಾಂದಿ ಹಾಡಿದರು. ಹೀಗೆ ಮೂಡಲಪಾಯದ ಭಾಗವತರಾಗಿ ಚನ್ನರಾಯಪಟ್ಟಣ ತಾಲ್ಲೂಕಿನ ಅನೇಕ ಹಳ್ಳಿಗಳಲ್ಲಿ ಭಾಗವಂತಿಕೆಯನ್ನು ಮಾಡಿ ಹೆಸರುಗಳಿಸಿದರು. ಜೊತೆಗೆ ಹಾಸನ ಜಿಲ್ಲೆ, ಮೈಸೂರು ಜಿಲ್ಲೆ, ಮುಂಬೈವರೆಗೂ

ಇವರ ಕಾರ್ಯಕ್ಷೇತ್ರ ವ್ಯಾಪಿಸಿತು. ಬಯಲು ಸೀಮೆಯಲ್ಲಿ ಮೂಡಲಪಾಯವನ್ನು ಪರಿಚಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ಕಲಾ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೨೦೦೧ನೇ ಸಾಲಿನ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ. ಈಗ ಬೆಂಗಳೂರಿನಲ್ಲಿ ಮಗನ ಮನೆಯಲ್ಲಿ ವಾಸವಾಗಿದ್ದಾರೆ. ಶತಾಯುಷಿ ಕಲಾವಿದರೆಂಬುದು ಹೆಮ್ಮೆಯ ವಿಷಯ.

ಮರುವನಹಳ್ಳಿ ನಂಜಪ್ಪ,
ಮರುವನಹಳ್ಳಿ,
ಬಾಗೂರು ಹೋಬಳಿ,
ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.

# ಕಾರೇಹಳ್ಳಿ ಸಿದ್ದೇಗೌಡ

ಬಯಲು ಪ್ರದೇಶದಲ್ಲಿ ಮೂಡಲಪಾಯ ಯಕ್ಷಗಾನ ಪ್ರಸಿದ್ಧಿಯಾಗಿದ್ದರೆ ಕರಾವಳಿಯಲ್ಲಿ ತೆಂಕುತಿಟ್ಟು ಬಡಗುತಿಟ್ಟು ಯಕ್ಷಗಾನಗಳೆಂದು ಪ್ರಸಿದ್ಧಿಯನ್ನು ಪಡೆದಿವೆ. ಉತ್ತರ ಕರ್ನಾಟಕದಲ್ಲಿ ಸಣ್ಣಾಟ, ದೊಡ್ಡಾಟಗಳೆಂದು ಪ್ರಸಿದ್ಧಿ. ಮೂಡಲಪಾಯ ಯಕ್ಷಗಾನವನ್ನು ಅಭಿವೃದ್ಧಿಪಡಿಸಲು ಜೀ.ಶಂ.ಪ. ಬಹಳ ಪ್ರಯತ್ನಿಸಿದರು. ಅದಕ್ಕಾಗಿ ತಿಪಟೂರು ತಾಲ್ಲೂಕು ಕೊನೆಹಳ್ಳಿಯಲ್ಲಿ ಒಂದು ಬಯಲು ರಂಗಮಂದಿರದ ನಿರ್ಮಾಣವೂ ಆಯಿತು. ಆದರೆ ಜೀ.ಶಂ.ಪ. ಸತ್ತನಂತರ ಆ ಪ್ರಯತ್ನ ಅಲ್ಲಿಗೆ ನಿಂತಿತು. ಜೀ.ಶಂ.ಪ. ಅವರು ಹಾಸನ, ತುಮಕೂರು, ಮಂಡ್ಯ ಜಿಲ್ಲೆಗಳಲ್ಲಿದ್ದ ಮೂಡಲಪಾಯ ಯಕ್ಷಗಾನದ ಭಾಗವತರು, ಪಾತ್ರಧಾರಿಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹಕೊಟ್ಟರು. ಅಂತಹ ಯಕ್ಷಗಾನ ಭಾಗವತರಲ್ಲಿ ಕಾರೇಹಳ್ಳಿ ಸಿದ್ದೇಗೌಡರು ಒಬ್ಬರು. ಇವರು ತಮ್ಮ ಆಸಕ್ತಿಯಿಂದ ಯಕ್ಷಗಾನ ಕಲೆಯನ್ನು ಉಳಿಸಿಕೊಂಡು ಬಂದರು.

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಕಾರೇಹಳ್ಳಿಯವರು ಸಿದ್ದೇಗೌಡರು. ತಂದೆ ನಿಂಗೇಗೌಡರು, ತಾಯಿ ನಿಂಗಮ್ಮ. ವಯಸ್ಸು ಇಂದಿಗೆ ನೂರು ದಾಟಿದೆ. ಒಕ್ಕಲಿಗ ಜಾತಿಗೆ ಸೇರಿದವರು. ವೃತ್ತಿ ವ್ಯವಸಾಯ, ಹವ್ಯಾಸ ಯಕ್ಷಗಾನದಲ್ಲಿ ಪಾತ್ರಧಾರಿ, ಭಾಗವತರು. ಇವರು ಅಂದಿನ ಕೂಲಿಮಠದಲ್ಲಿ ಅಲ್ಪಸ್ವಲ್ಪ ಕಲಿತವರು. ಯಕ್ಷಗಾನಗಳು ಅಂದು ಊರಿನಲ್ಲಿ ಆಗಾಗ ನಡೆಯುತ್ತಿದ್ದವು. ಆಗ ಸಿದ್ದೇಗೌಡರು ಇನ್ನೂ ಯೌವನದಲ್ಲಿದ್ದು, ಬಯಲಾಟಗಳ ಬಗೆಗೆ ಬಹಳ ಆಸಕ್ತಿ ತಳೆದರು. ಇವರಲ್ಲಿದ್ದ ಕಲಾಪ್ರತಿಭೆಯನ್ನು ಗುರುತಿಸಿದ ಅಂದು ಭಾಗವತರಾಗಿದ್ದ ವೆಂಕಟಾಚಲಯ್ಯನವರು ಸಿದ್ದೇಗೌಡರು ಅಭಿನಯಿಸಲು ಅವಕಾಶ ಕಲ್ಪಿಸಿಕೊಟ್ಟರು. ಇವರೇ ಸಿದ್ದೇಗೌಡರಿಗೆ ಗುರುಗಳು.

ಯಕ್ಷಗಾನದಲ್ಲಿ ಪಾತ್ರಧಾರಿಯಾಗಿ ತ್ರಿಪುರಸಂಹಾರ, ಗಯ ಚರಿತ್ರೆ, ರತಿ ಕಲ್ಯಾಣ, ಪ್ರಹ್ಲಾದ ಚರಿತ್ರೆ, ವಿರಾಟ ಪರ್ವ, ಹೈರಾವಣ-ಮೈರಾವಣ, ಹರಿಶ್ಚಂದ್ರ ಹೀಗೆ ಅನೇಕ ಪ್ರಸಂಗಗಳಲ್ಲಿ ಅಭಿನಯಿಸಿದ್ದಾರೆ. ಯಕ್ಷಗಾನ ಪ್ರಸಂಗಗಳಲ್ಲಿ ಪಾತ್ರಧಾರಿಯಾಗಿದ್ದಾಗ ಸಂಭಾಷಣೆಗಳನ್ನು ಬಾಯಿಪಾಠ ಮಾಡಿ ಸೊಗಸಾಗಿ ಒಪ್ಪಿಸುತ್ತಿದ್ದರು. ಗುರುಗಳಾದ ವೆಂಕಟಾಚಲಯ್ಯನವರು ಗತಿಸಿದ ನಂತರ ಸಿದ್ದೇಗೌಡರೆ ಭಾಗವತರಾಗಿ ಮುಂದುವರೆದರು.

ಸಿದ್ದೇಗೌಡರು ತಮ್ಮ ಹಳ್ಳಿಯಲ್ಲಿ ಮಾತ್ರವಲ್ಲದೆ ಅಕ್ಕಪಕ್ಕದ ಹಳ್ಳಿಗಳಲ್ಲಿಯೂ ಯಕ್ಷಗಾನ ಕಲಿಸಿದರು. ಜೊತೆಗೆ ಚಿಕ್ಕಣ್ಣ, ರಂಗಪ್ಪ ಎಂಬ ಇಬ್ಬರನ್ನು ಶಿಷ್ಯರಾಗಿ ಸ್ವೀಕರಿಸಿ ಅವರಿಗೆ ಯಕ್ಷಗಾನ ಭಾಗವಂತಿಕೆಯಲ್ಲಿ ಪ್ರವೀಣರಾಗುವಂತೆ ಮಾಡಿದ್ದರು. ಆದರೆ ರಂಗಪ್ಪ ತೀರಿಕೊಂಡರು. ಸಿದ್ದೇಗೌಡರು ಮೂರು ಜನ ಹೆಂಡತಿಯರನ್ನು ಮದುವೆಯಾದರೂ ಸಂಸಾರದಲ್ಲಿ ಅಂತಹ ಸುಖವನ್ನೇನು ಕಂಡವರಲ್ಲ. ತನ್ನ ವೃತ್ತಿಗೆ ವಿರುದ್ಧವಾಗಿ ನಡೆದುಕೊಂಡಿದ್ದರಿಂದ ತಂದೆಯಿಂದ ಆಸ್ತಿಯೂ ಕೂಡ ದಕ್ಕಲಿಲ್ಲ. ಯಕ್ಷಗಾನ ಸಾಹಿತ್ಯ ಹಾಗು ಸಂಗೀತದಲ್ಲಿ ಆಸಕ್ತಿ ಇದ್ದ ಇವರನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೩ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ.

**ಕಾರೇಹಳ್ಳಿ ಸಿದ್ದೇಗೌಡ,**<br>
**ಕಾರೇಹಳ್ಳಿ, ನುಗ್ಗೇಹಳ್ಳಿ ಅಂಚೆ,**<br>
**ನುಗ್ಗೇಹಳ್ಳಿ ಹೋಬಳಿ,**<br>
**ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.**

# ಹೊಸಕೊಪ್ಪಲ ಗೊಂಬೆರಾಮಯ್ಯ

ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲೂಕಿನ, ಬೆಳಗೊಳ ಹೋಬಳಿಯ ಹೊಸಕೊಪ್ಪಲ ಗ್ರಾಮದ ರಾಮಯ್ಯ ಗೊಂಬೆರಾಮಯ್ಯ ಎಂದೇ ಪ್ರಸಿದ್ಧರಾದವರು. ಇವರು ಸಿಳ್ಳೆಕ್ಯಾತ ಜನರಾಗಿದ್ದು, ಮರಾಠಿ ಮನೆ ಮಾತು. ಇವರು ಗೊಂಬೆಯಾಟದ ಪ್ರಸಿದ್ಧ ಕಲಾವಿದರಾಗಿದ್ದು, ಅಪಾರ ಪರಿಶ್ರಮವನ್ನು ಹೊಂದಿದವರಾಗಿದ್ದರು. ತೊಗಲುಗೊಂಬೆಯಾಟವನ್ನು ತನ್ನ ಮೂಲ ಸಂಪ್ರದಾಯದಲ್ಲಿಯೇ ಉಳಿಸಿಕೊಂಡು ಬಂದ ಅಪರೂಪದ ಕಲಾವಿದ. ಜೊತೆಗೆ ಒಳ್ಳೆಯ ಭಾಗವತರೂ ಹೌದು. ರಾಮಾಯಣ ಮಹಾಭಾರತ, ಶಿವಪುರಾಣದ ಕತೆಗಳನ್ನು ತೊಗಲುಗೊಂಬೆಯ ಪ್ರದರ್ಶನದ ಮೂಲಕ ತನ್ನ ಕೈಚಳಕವನ್ನು ಪ್ರದರ್ಶಿಸಬಲ್ಲವರಾಗಿದ್ದರು. ಕೇವಲ ಪ್ರದರ್ಶನಕ್ಕಷ್ಟೇ ಸೀಮಿತವಾಗದೆ ಗೊಂಬೆ ತಯಾರಿಕೆ ಹಾಗು ಅದಕ್ಕೆ ಬಣ್ಣ ಹಚ್ಚುವುದರಲ್ಲಿಯೂ ಕೂಡ ಹೆಸರುವಾಸಿಯಾದ ಇವರು ಈ ಕಲೆ ಜೀವಂತವಾಗಿ ಉಳಿಯುವುದಕ್ಕೆ ಸಾಕಷ್ಟ ಪರಿಶ್ರಮ ಪಟ್ಟವರು.

ಇವರ ಗೊಂಬೆಯಾಟದ ಕಲಾ ಪ್ರೌಢಿಮೆಯನ್ನು ವಿದೇಶಿಯರು ಕೂಡ ಮೆಚ್ಚಿಕೊಂಡು ದಾಖಲೆ ಮಾಡಿಕೊಂಡಿದ್ದಾರೆ. ಹಲವಾರು ವಿದ್ವಾಂಸರು ಇವರಿಂದ ಉಪಯುಕ್ತ ಮಾಹಿತಿಗಳನ್ನು ಪಡೆದುಕೊಂಡು ಅಧ್ಯಯನ ಪ್ರವೃತ್ತರಾಗಿರುವುದುಂಟು. ಈತ ರಾಮಾಯಣ ಮತ್ತು ಮಹಾಭಾರತ ಕಥೆಗಳನ್ನು ತೊಗಲುಗೊಂಬೆ ಮೇಳದಲ್ಲಿ ಪ್ರದರ್ಶಿಸುವುದಕ್ಕೆ ಕೂತರೆ ಹೊತ್ತು ಹೋದದ್ದೇ ಗೊತ್ತಾಗುತ್ತಿರಲಿಲ್ಲ. ಒಂದೇ ಕಥೆಯನ್ನು ಹಲವಾರು ರಾತ್ರಿಗಳು ಮಾಡಿರುವುದುಂಟು.

ಇವರು ತಮ್ಮ ಪ್ರದರ್ಶನಗಳನ್ನು ಮುಖ್ಯವಾಗಿ ತಮಗೆ ಬಳುವಳಿಯಾಗಿ ಬಂದ ಹಳ್ಳಿಗಳಲ್ಲಿ ತಪ್ಪದೆ ಪ್ರತಿವರ್ಷ ನಡೆಸುತ್ತಿದರು. ಜೊತೆಗೆ ಅಕಾಡೆಮಿ ಹಾಗು ಇತರ ಸಂಘ ಸಂಸ್ಥೆಗಳು, ಸರ್ಕಾರ ನಡೆಸುವ ಕಾರ್ಯಕ್ರಮಗಳಲ್ಲಿ ತಮ್ಮ ವಲ್ಲದ ಹಳ್ಳಿಯವರು ಕರೆದರೆ ಅಲ್ಲಿಯೂ ಕೂಡ ಪ್ರದರ್ಶನ ನಡೆಸುತ್ತಿದ್ದರು.

ಇವರಲ್ಲಿರುವ ಅಪಾರ ಪ್ರತಿಭೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೯ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

ಹೊಸಕೊಪ್ಪಲ ಗೊಂಬೆರಾಮಯ್ಯ,
ಹೊಸಕೊಪ್ಪಲ,
ಬೆಳಗೊಳ ಹೋಬಳಿ,
ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.

# ಚೇಳಗಾಲ ಗೊಂಬೆರಾಮಯ್ಯ

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಬಾಗೂರು ಹೋಬಳಿ, ಚೇಳಗಾಲ ಅಂಚೆಯ ರಂಗಾಪುರದ ಕುರಿಕಾವಲು ಗ್ರಾಮದವರು ಗೊಂಬೆರಾಮಯ್ಯ. ತಂದೆ ಹನುಮಂತಯ್ಯ. ಈಗ ಬದುಕಿದ್ದರೆ ಇವರಿಗೆ ನೂರು ವರ್ಷವಾಗಿರುತ್ತಿತ್ತು. ಅಜಾನುಬಾಹು ದೇಹವನ್ನು ಹೊಂದಿದ್ದ ರಾಮಯ್ಯ ಕೆಂಪು ಬಣ್ಣದ ಬಿಳಿಯ ಗಿರಿಜಾ ಮೀಸೆಯನ್ನು ಹೊಂದಿದ್ದ ಇವರು, ಗೊಂಬೆರಾಮಯ್ಯ ಎಂದು ಹೆಸರು ಮಾಡಿದ್ದವರು. ಸುಮಾರು ೭೦ ವರ್ಷಗಳಿಂದಲೂ ತೊಗಲುಗೊಂಬೆಯನ್ನು ಆಡಿಸುವುದನ್ನು, ಕುಣಿಸುವುದನ್ನು ಕಲಿತದ್ದು ತಂದೆ ಹನುಮಂತಯ್ಯ ಮತ್ತು ಅಣ್ಣ ಕಳಸಯ್ಯನವರಿಂದ. ಈತ ಹಾಸನ ಜಿಲ್ಲೆಯಾದ್ಯಂತ ಸಾವಿರಾರು ಪ್ರದರ್ಶನಗಳನ್ನು ನೀಡಿದವರು. ಇವರನ್ನು ತೊಗಲುಗೊಂಬೆ ಪ್ರದರ್ಶನದ ಬಗ್ಗೆ ಕೇಳಿದರೆ ತನ್ನ ತಲೆಯಲ್ಲಿ ಕೂದಲಿರುವಷ್ಟ ಪ್ರದರ್ಶನಗಳನ್ನು ನೀಡಿದ್ದೇನೆ ಎಂದು ಹೇಳುತ್ತಿದ್ದರಂತೆ.

ಈತ ತನ್ನ ಹದಿನೈದನೆ ವಯಸ್ಸಿನಲ್ಲೇ ಮದುವೆಯಾಗಿದ್ದವರು. ಆದರೆ ಐದು ಜನ ಹೆಂಡತಿಯರು. ಒಂಬತ್ತು ಜನ ಮಕ್ಕಳು. ತಮ್ಮ ಇಡೀ ಕುಟುಂಬವೇ ತೊಗಲುಗೊಂಬೆ ಪ್ರದರ್ಶನದಲ್ಲಿ ತೊಡಗಿರುತ್ತಿತ್ತು. ಈತ ರಾಮಾಯಣದ ಕಥೆಯನ್ನು ಒಂಬತ್ತು ರಾತ್ರಿಗಳು, ಮಹಾಭಾರತದ ಕಥೆಯನ್ನು ಹದಿನೈದು ರಾತ್ರಿಗಳು ಮಾಡುತ್ತಿದ್ದರಂತೆ. ಆದರೆ ಎಲ್ಲಾ ಕಥೆಯನ್ನು ಕಲಿತದ್ದು ಕಂಠಪಾಠದ ಮೂಲಕವೆ. ಈತನ ಮನೆ ಮಾತು ಮರಾಠಿಯಾದರೂ ಕನ್ನಡದಲ್ಲಿ ಸ್ಫುಟವಾಗಿ ಕಥೆಗಳನ್ನು ಮಾಡುತ್ತಿದ್ದರು.

ಇವರಿಗೆ ಅತ್ಯಂತ ಹೆಚ್ಚು ಹೆಸರು ತಂದು ಕೊಟ್ಟ ಕಥೆಗಳೆಂದರೆ ಶತಕಂಠ ರಾವಣ, ಕನಕ ತಾರಾ, ಕರಿಬಂಟನ ಕಾಳಗ, ಚೋರ ಕಥೆ, ಶಂಬರಾಸುರ ಕಾಳಗ,

ವಿರಾಟಪರ್ವ ಮುಂತಾದವುಗಳು. ಇವರು ತಮ್ಮ ಕಥೆಗಳಿಗೆ ಸಿನಿಮಾ ಹಾಡುಗಳನ್ನು ಸೇರಿಸಿಕೊಳ್ಳುತ್ತಿದ್ದುದು ಉಂಟು. ಅವರ ಪ್ರಕಾರ ಜನ ಏನನ್ನು ಬಯಸುತ್ತಾರೋ ಅದನ್ನು ಕೊಡುವುದೇ ನಿಜವಾದ ಕಲೆ ಎಂಬುದಾಗಿ ಹೇಳುತ್ತಿದ್ದರು. ಆದರೆ ಸಿನಿಮಾ, ಟಿ.ವಿಗಳು ಬಂದ ನಂತರ ಜನಪದ ಕಲೆಗಳಿಗೆ ಗೌರವ ಕಡಿಮೆಯಾಯಿತು ಎಂಬ ವ್ಯಥೆಯು ಅವರಲ್ಲಿತ್ತು. ಕಲೆಗಾಗಿ ತಮ್ಮನ್ನು ಸಮರ್ಪಿಸಿಕೊಂಡ ರಾಮಯ್ಯ ತಮಗೆ ಪ್ರೋತ್ಸಾಹ ನೀಡಿದ ಊರಿನ ಗೌಡರನ್ನು, ಗತವೈಭವದ ಕಾಲವನ್ನು ಮೆಲುಕು ಹಾಕುತ್ತಾ ತನ್ನ ಕಣ್ಣಂಚಲ್ಲಿ ಕಣ್ಣೀರು ತಂದುಕೊಳ್ಳುತ್ತಿದ್ದ ಅಪರೂಪದ ಕಲಾವಿದ. ಈತ ತನ್ನ ಮಕ್ಕಳಿಗೆ ಕೊಟ್ಟ ಆಸ್ತಿಯೆಂದರೆ ತನ್ನಲ್ಲಿದ್ದ ನೂರಾರು ತೊಗಲು ಗೊಂಬೆಗಳು. ಇವರಿಗೆ ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೯೬ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿದೆ.

ಗೊಂಬೆರಾಮಯ್ಯ,
ರಂಗಾಪುರದ ಕುರಿಕಾವಲು,
ಬಾಗೂರು ಹೋಬಳಿ, ಅಂಚೆ : ಚೇಳಗಾಲ,
ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.

## ರಾಗಿಮರೂರು ಜವರಯ್ಯ

ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ರಾಮನಾಥಪುರ ಹೋಬಳಿಯ ರಾಗಿಮರೂರು ಗ್ರಾಮದ ಜವರಯ್ಯ ತಂಬೂರಿ ಕಲಾವಿದರು. ತಂದೆ ನಿಂಗಯ್ಯ ತಾಯಿ ಕಾಳಮ್ಮ ಇವರು ಪರಿಶಿಷ್ಟ ವರ್ಗಕ್ಕೆ ಸೇರುವವರಾಗಿದ್ದು ಈಗಿದ್ದರೆ ಸುಮಾರು ನೂರು ವರ್ಷಗಳಾಗುತ್ತಿದ್ದವು. ಇವರು ಚಿಕ್ಕ ವಯಸ್ಸಿನಲ್ಲಿದ್ದಾಗಲೇ ತಂಬೂರಿ ಕಲೆಗೆ ಮನಸೋತು ಮೊದಲಿಗೆ ಹಿಮ್ಮೇಳ ಗಾಯಕರಾಗಿದ್ದವರು. ನಂತರ ಬಡ್ತಿ ಪಡೆದು ಮುಮ್ಮೇಳ ಗಾಯಕರಾಗಿ ಹೊರ ಹೊಮ್ಮಿದವರು.

ಇವರು ಅರಕಲಗೂಡು ತಾಲ್ಲೂಕಿನಾದ್ಯಂತ ತಮ್ಮ ಮಧುರ ಕಂಠಸಿರಿಯಿಂದ ಜನರ ಮನಸ್ಸನ್ನು ಗೆದ್ದವರು. ಜವರಯ್ಯ ಬರುತ್ತಾರೆಂದರೆ ಸಾಕು ಹಳ್ಳಿಗಳಲ್ಲಿ ಹೆಂಗಸರು ಮಕ್ಕಳು ಸುತ್ತ ನೆರೆಯುತ್ತಾ ಹಾಡು, ಹಾಡು ಎಂದು ಒತ್ತಾಯಿಸುತ್ತಿದ್ದರು. ಎಲ್ಲಾ ವಯಸ್ಸಿನವರನ್ನು ತಮ್ಮ ಹಾಡುಗಳಿಂದ ಮೋಡಿ ಮಾಡುತ್ತಿದ್ದವರು ಈತ. ತಮ್ಮ ಬದುಕಿನಲ್ಲಿ ಬಡತನವನ್ನೇ ಹಾಸಿ ಹೊದ್ದು ಮಲಗಿದವರಾಗಿದ್ದರೂ ಯಾವತ್ತೂ ತಮ್ಮ ಕಲಾಪ್ರೌಢಿಮೆಗೆ ಧಕ್ಕೆ ತಂದುಕೊಂಡವರಲ್ಲ. ಶಾರೀರಿಕವಾಗಿ ದೃಢಕಾಯರಾಗಿದ್ದ ಇವರು ಬಡತನದಲ್ಲಿ ತಮ್ಮ ದೇಹದ ಬೆಳವಣಿಗೆಗೆ ಕುಂದು ತಂದುಕೊಂಡವರಲ್ಲ. ನನ್ನ ಇಷ್ಟು ಗಟ್ಟಿಮುಟ್ಟಾಗಿ ಸಾಕಿ ಬೆಳೆಸಿದವರು ನನ್ನ ಅಭಿಮಾನಿಗಳು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಕಾರಣ ಎಲ್ಲರೊಡನೆಯೂ ಪ್ರೀತಿಯಿಂದ ಆತ್ಮೀಯರಾಗಿ ಬೆಳೆಯುತ್ತಿದ್ದರು. ಹಾಗು ಅವರು ಕೊಟ್ಟದ್ದನ್ನು ಅಷ್ಟೇ ಪ್ರೀತಿಯಿಂದ ಸ್ವೀಕರಿಸುತ್ತಿದ್ದರು.

ಜವರಯ್ಯನವರಿಗೆ ಹಾಡು ಮತ್ತು ತಂಬೂರಿಗಳು ಎರಡು ಶ್ವಾಸಕೋಶಗಳಿದ್ದಂತೆ. ಸದಾ ಶಾಂತ ರೀತಿಯಿಂದ ಇರುತ್ತಿದ್ದ ಇವರು ನಂಜುಂಡೇಶ್ವರನ ಕಥೆ, ಬಾಲನಾಗಮ್ಮನ ಕಥೆ, ಪಿರಿಯಾಪಟ್ಟಣದ ಕಾಳಗ, ಲಾಲಾ ಸೇನ ರಾಮದೇವರು,

ಬೆಟ್ಟದ ಚಾಮುಂಡಿ ಜೊತೆಗೆ ಬಿಡಿಬಿಡಿಯಾದ ನೂರಾರು ಹಾಡುಗಳನ್ನು ಅಷ್ಟೇ ಶಾಂತ ರೀತಿಯಿಂದ ಹಾಡುತ್ತಿದ್ದವರು. ಇವರ ಹಾಡಿನ ಧಾಟಿ ಆರೋಹಣ ಮತ್ತು ಅವರೋಹಣ ಎರಡನ್ನು ಹೊಂದಿರುತ್ತಿದ್ದುದು ವಿಶೇಷ.

ಇವರ ಕಲಾ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೯೭ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ. ಇವರೊಬ್ಬ ಅಪರೂಪದ ಜನಪದ ಗಾಯಕ, ಜನಪದ ಮೋಡಿಗಾರರಾಗಿದ್ದರು.

ರಾಗಿಮರೂರು ಜವರಯ್ಯ,
ರಾಗಿಮರೂರು,
ಕಸಬಾ ಹೋಬಳಿ,
ಅರಕಲಗೂಡ ತಾಲೂಕು, ಹಾಸನ ಜಿಲ್ಲೆ.

# ಎಸ್. ಕೆ. ಕರೀಂಖಾನ್

ನಮ್ಮ ಸಂಸ್ಕೃತಿಯ ಮೂಲ ಬೇರು ಜಾನಪದದಲ್ಲಿದೆ. ಜಾನಪದವು ಎಲ್ಲವನ್ನು ಒಳಗೊಂಡಿದ್ದು, ಅದರಲ್ಲಿ ಜನಪದ ಕಲೆಯು ಒಂದು. ಜನಪದ ಕಲೆಯನ್ನು ಕರಗತಮಾಡಿಕೊಂಡು ತಮ್ಮ ಜೀವನದ ಒಂದು ಅವಿಭಾಜ್ಯ ಅಂಗವಾಗಿ ರೂಢಿಸಿಕೊಂಡು ಬಂದವರು ಎಷ್ಟೋ ಮಂದಿ, ಅಂತಹವರಲ್ಲಿ ಎಸ್. ಕೆ. ಕರೀಂಖಾನ್ ಕೂಡ ಒಬ್ಬರು.

ಎಸ್. ಕೆ. ಕರೀಂಖಾನ್ ಅವರ ಹೆಸರು ಕೇಳದ ಕನ್ನಡಿಗರೇ ಇಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದು. ಪಂಡಿತ ಪಾಮರರೆನ್ನದೆ ನಾಡಿನ ಜನರೆಲ್ಲರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದವರು. ಧರ್ಮ ಸಹಿಷ್ಣುತೆಯನ್ನು ಹೊಂದಿರುವ, ಹಿಂದೂ–ಮುಸಲ್ಮಾನನೆಂಬ ಭಿನ್ನ ಬೇಧವನ್ನೆಣಿಸದ, ಸರಳ ಸಜ್ಜನ ಪ್ರಾಮಾಣಿಕ ವ್ಯಕ್ತಿ. ನಿರ್ಮಲವಾದ ಬದುಕನ್ನು ಬದುಕಿದ ಅಪ್ಪಟ ಗಾಂಧಿವಾದಿ, ಹಸನ್ಮುಖಿಯಾಗಿ ಶುಭ್ರವಾದ ಖಾದಿತೊಟ್ಟು ಜೀವನದಲ್ಲಿಯೂ ಶುಭ್ರತೆಯನ್ನು ಕಾಪಾಡಿಕೊಂಡು ಬಂದ ಮಾನವತಾವಾದಿ.

ಎಸ್. ಕೆ. ಕರೀಂಖಾನ್ ಹಾಸನ ಜಿಲ್ಲೆ ಸಕಲೇಶಪುರದಲ್ಲಿ ಹುಟ್ಟಿದವರು. ೨೦೦೬ರಲ್ಲಿ ನಿಧನರಾಗಿದ್ದು, ಆಗ ವಯಸ್ಸು ನೂರರ ಹತ್ತಿರವಾಗಿತ್ತು. ತಂದೆ ಅಬ್ದುಲ್ ರೆಹಮಾನ್ ಖಾನ್. ಆಫ್ಘಾನಿಸ್ಥಾನದ ಕಾಬೂಲ್‌ನಿಂದ ಬ್ರಿಟಿಷರ ಗುಂಡಿನಿಂದ ಏಟು ತಿಂದು ಮತ್ತು ಮನೆಕಲಹದಿಂದ ಇಲ್ಲಿಗೆ ಬಂದವರು. ಮೂಲತಃ ಯೋಧರಾಗಿದ್ದು ಇಲ್ಲಿಗೆ ಬಂದು ಯುನಾನಿ ವೈದ್ಯ ವೃತ್ತಿಯನ್ನು ಮಾಡುತ್ತಿದ್ದರು. ತಾಯಿ ಜೈನಬ್ಬೀ, ಕುಶಾಲ ನಗರದವರಾದರೂ ಇವರ ಅಜ್ಜಿ ಅರಬ್ಬೀ ದೇಶದ ಮೂಲದವರು. ಕರೀಂಖಾನ್ ಏಳು ಜನ ಗಂಡು ಮಕ್ಕಳಲ್ಲಿ ಐದನೆಯವರು. ಒಬ್ಬಳು ಸೋದರಿಯು ಉಂಟು. ತಂದೆ ಚಿಕ್ಕಂದಿನಲ್ಲಿಯೇ ವಿಧಿವಶರಾದ ಕಾರಣ ಕರೀಂಖಾನ್ ಅಣ್ಣನವರಾದ ಖಾದರ್‌ಖಾನ್ ಅವರ ಆಶ್ರಯದಲ್ಲಿ ಬೆಳೆದು ಎಂಟನೆ ತರಗತಿಗೆ ತಮ್ಮ ವಿದ್ಯಾಭ್ಯಾಸವನ್ನು ಕೊನೆಗೊಳಿಸಿದರು.

ಅಂದು ಸ್ವಾತಂತ್ರ್ಯ ಚಳುವಳಿಯ ಸಂದರ್ಭ ಗಾಂಧೀಜಿಯವರ ಆಕರ್ಷಣೆಗೆ ಒಳಗಾದ ಕರೀಂಖಾನರು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ತಂದೆಯಿಲ್ಲದೆ ನಿರ್ಗತಿಕರಾಗಿದ್ದ ಖಾನ್‌ರಿಗೆ ಈ ಚಳುವಳಿಯ ಮನೆಯಂತಾಯಿತು. ಸ್ವಾತಂತ್ರ್ಯ ಪಡೆಯಲು ನಮ್ಮ ದೇಶದ ಜನರಲ್ಲಿ ಜಾಗೃತಿ ಮೂಡಿಸಲು, ದೇಶಾಭಿಮಾನವನ್ನು ಮೂಡಿಸಲು ಜಾನಪದವೇ ಸೂಕ್ತವಾದ ಮಾರ್ಗ ಎಂದು ಅದನ್ನು ಆಯ್ಕೆಮಾಡಿಕೊಂಡರು. ನಾಡಿನ ಉದ್ದಗಲಕ್ಕೆ ಹಳ್ಳಿ ಹಳ್ಳಿಗಳಲ್ಲಿ ಸುತ್ತಿ ಕನ್ನಡ ಜನಪದ ಕಾವ್ಯಗಳ ಕಂಪನ್ನು ಅಸಾಧಾರಣವಾದ ತಮ್ಮ ವಾಗ್ಝರಿಯಿಂದ ಬಿತ್ತಿರಿಸುತ್ತಾ ಜನಸಾಗರವನ್ನು ಸೆರೆ ಹಿಡಿಯತೊಡಗಿದರು. ಇವರ ಹಾಡುಗಳನ್ನು ಜನರು ಅಸಲಿ ಚಿನ್ನದ ನಾಣ್ಯಗಳಂತೆ ಸ್ವೀಕರಿಸಿದರು. ಇವರು ಹಾಡುವ ಕಡೆಯಲ್ಲೆಲ್ಲಾ ಸಂತೆಯೇ ನೆರೆಯುತೊಡಗಿತು. ಇದು ಎಲ್ಲಾ ಚಳುವಳಿಗಳಿಗಿಂತ ಅತ್ಯಂತ ಆಕರ್ಷಕ ಮಾದರಿಯಾಯಿತು. ಇದನ್ನು ಕಂಡ ಅನೇಕ ಕಾಂಗ್ರೆಸ್ಸಿಗರು ಇವರ ನಿಕಟವರ್ತಿಗಳಾದರು. ಜೀವನಕ್ಕೆ ಒಂದು ನಿರ್ದಿಷ್ಟ ಗೊತ್ತು ಗುರಿಯಿಲ್ಲದಿದ್ದಾಗ ತಾವು ಹಾಡುತ್ತಿದ್ದ ಜನಪದ ಗೀತೆಗಳನ್ನೇ ಸಂಗ್ರಹಿಸಿ ಪ್ರಕಟಿಸಿ ಹಳ್ಳಿಹಳ್ಳಿಯಲ್ಲಿ ಮಾರಾಟ ಮಾಡಿ ಜೀವನ ಸವೆಸಿದರು.

ಕರೀಂಖಾನ್ ಕನ್ನಡ, ಉರ್ದು, ಸಂಸ್ಕೃತ ಭಾಷೆಗಳಲ್ಲಿ ಪಂಡಿತರಾಗಿದ್ದರು. ಕೇವಲ ಜನಪದ ಹಾಡುಗಾರರಾಗಿ ಉಳಿಯದೆ ನೀವಾರ, ನೀಹಾರ ಎಂಬ ಕಥಾ ಸಂಕಲನಗಳು, ಬಲಿದಾನ ಹುಸೇನ್ ಎಂಬ ಕಾದಂಬರಿಯನ್ನು, ಮಾಗಡಿ ಕೆಂಪೇಗೌಡ, ಬೆಂಗಳೂರು ಕೆಂಪೇಗೌಡ, ಶ್ರೀಕೃಷ್ಣಲೀಲಾ ಎಂಬ ನಾಟಕಗಳನ್ನು ರಚಿಸಿದ್ದಾರೆ. ಜೊತೆಗೆ ದೇವರ ನಾಮಗಳು, ಚಲನ ಚಿತ್ರಕ್ಕೆ ಗೀತೆ, ಹಾಡುಗಳು, ಸಂಭಾಷಣೆಗಳನ್ನು ಕೂಡ ರಚಿಸಿದ್ದಾರೆ.

ಇವರಿಗೆ ಹಲವಾರು ಗೌರವಗಳು ದೊರಕಿವೆ. ಜಾನಪದ ಜಂಗಮ ಎಂಬ ಬಿರುದು, ಗೌರವ ಡಾಕ್ಟರೇಟ್‌ಗಳು, ಹಾಸನ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಜಾನಪದ ಶ್ರೀ ಪ್ರಶಸ್ತಿ, ಜೀಶಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಮುಂತಾದವು ದೊರಕಿವೆ. ಎಲ್ಲಕ್ಕಿಂತ ಮಿಗಿಲಾಗಿ ಇವರ ಕಲಾ ಪ್ರೌಢಿಮೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ ಇವರನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರನ್ನಾಗಿ ಮಾಡಿತು. ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇವರು ಮಾಡಿದ ಸಾಧನೆ ಶ್ಲಾಘನೀಯ. ಗಿರಿಜನರ ಜೀವನ ಸಂಸ್ಕೃತಿಗಳ ಬಗ್ಗೆ ವೀಡಿಯೋ ಚಿತ್ರೀಕರಣ ಮಾಡಿಸಿದ್ದು ಹಾಗು ಬುಡಕಟ್ಟು ಕಲಾವಿದರನ್ನು ಗುರುತಿಸಿ ಅವರಿಗೆ ವಿಶೇಷ ಮನ್ನಣೆ ನೀಡಿದ್ದು ಅಪೂರ್ವವಾದ ಕೆಲಸವಾಗಿದೆ.

**ಎಸ್. ಕೆ. ಕರೀಂಖಾನ್,**<br>
**ಸಕಲೇಶಪುರ,**<br>
**ಹಾಸನ ಜಿಲ್ಲೆ.**

# ಹಿರಿಸಾವೆ ನಂಜಮ್ಮ

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ದಂಡಿಗನಹಳ್ಳಿ ಹೋಬಳಿಯ ಯಲಿಯೂರು ಗ್ರಾಮದಲ್ಲಿ ಜನಿಸಿದ ನಂಜಮ್ಮನವರು ಮದುವೆಯಾಗಿ ಹೋದದ್ದು ಇದೇ ತಾಲ್ಲೂಕಿನ ಹಿರಿಸಾವೆ ಗ್ರಾಮಕ್ಕೆ. ಗಂಡ ಶಿವನಂಜಪ್ಪ. ನಂಜಮ್ಮನವರು ಬದುಕಿದ್ದರೆ ಈಗ ೯೭ ವರ್ಷ ವಯಸ್ಸಾಗುತ್ತಿತ್ತು. ಆದರೆ ಇವರು ತಮ್ಮ ಅರವತ್ತೆರಡನೆಯ ವಯಸ್ಸಿನಲ್ಲಿ (೧೯೭೭ರಲ್ಲಿ) ನಿಧನರಾದರು. ನಂಜಮ್ಮನವರು ಹುಟ್ಟಿದ ಮನೆತನ ಅಡವಿಗೌಡರ ಮನೆತನ. ತುಂಬಾ ಪ್ರಸಿದ್ಧಿ ಪಡೆದಿದ್ದ ಮನೆತನ. ಇವರು ಒಕ್ಕಲಿಗ ಜನಾಂಗಕ್ಕೆ ಸೇರಿದವರು. ಚಿಕ್ಕಂದಿನಿಂದಲೇ ಜನಪದ ಹಾಡುಗಳನ್ನು ಹಾಡುವುದು, ಜನಪದ ಕಥೆಗಳನ್ನು ಹೇಳುವುದು, ಜನಪದ ವೈದ್ಯ ಪದ್ಧತಿ ಮಾಡುವುದು, ಗಾದೆ, ಒಗಟು ಹೇಳುವುದು, ಅದ್ಭುತವಾಗಿ ಬಾಡಿನ ಸಾರು ಮಾಡುವುದು ಹೀಗೆ ಜಾನಪದ ನಾನಾ ಕ್ಷೇತ್ರಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದವರು. ನಂಜಮ್ಮನವರ ಗಂಡನಾದ ಶ್ರೀ ಶಿವನಂಜಪ್ಪನವರು ಮಾಟ ಮಾಡುವುದರಲ್ಲಿ ನಿಸ್ಸೀಮರು. ಜೊತೆಗೆ ಶಾನುಭೋಗರ ರೀತಿ ಅರ್ಜಿ ಬರೆಯುತ್ತಿದ್ದು, ಪುಡಾರಿಗಿರಿಯನ್ನು ಮಾಡಿಕೊಂಡಿದ್ದರು. ನ್ಯಾಯ, ಪಂಚಾಯತಿ ಮಾಡಲು ಊರಿಂದ ಊರಿಗೆ ಹೋಗುತ್ತಿದ್ದರು.

ಶ್ರೀಮತಿ ನಂಜಮ್ಮನವರು ಎಲ್ಲಾ ರೀತಿಯ ಜನಪದ ಗೀತೆಗಳನ್ನು ಹಾಡುತ್ತಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ಹನುಮಂತನ, ರಾಮನ, ದೇವೀರಮ್ಮನ ಭಕ್ತೆಯಾಗಿದ್ದು ಇವರ ಬಗ್ಗೆ ವಿಶೇಷವಾದ ಹಾಡುಗಳನ್ನು ಹಾಡುತ್ತಿದ್ದರು. ರಾಗಿ ಬೀಸುವ ಪದಗಳನ್ನು, ಸೋಬಾನೆ ಪದಗಳನ್ನು ಹಾಡುತ್ತಿದ್ದರು. ಕಥನ ಗೀತೆಗಳನ್ನು ಹಾಡುತ್ತಿದ್ದರು. ಗಾದೆ, ಒಗಟುಗಳನ್ನು ಹುರುಳಿ ಹುರಿದಂತೆ ಹೇಳುತ್ತಿದ್ದರು. ವಿಶೇಷವಾಗಿ ಜನಪದ ಕಥೆಗಳನ್ನು ದಿನಗಟ್ಟಲೆ ಹೇಳುತ್ತಿದ್ದು ಇವರು ಹೇಳಿದ ಕಥೆಗಳನ್ನು ಡಾ. ಹಿ. ಶಿ. ರಾಮಚಂದ್ರೇ ಗೌಡರು ಸಂಗ್ರಹಿಸಿದ್ದಾರೆ. ಇವರಿಂದ ಹಾಡುಗಳನ್ನು ಹಾಡಿಸಲು

ಕಥೆಗಳನ್ನು ಹೇಳಿಸಲು ಚನ್ನರಾಯಪಟ್ಟಣ ತಾಲ್ಲೂಕಿನ ಹಾಗು ಅರಸೀಕೆರೆ ತಾಲ್ಲೂಕಿನ ಹಳ್ಳಿ ಹಳ್ಳಿಗೆ ಇವರನ್ನು ಆಹ್ವಾನಿಸುತ್ತಿದ್ದರು. ವಿಶೇಷವೆಂದರೆ ಹಬ್ಬ-ಹರಿದಿನ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಹಳ್ಳಿಯಿಂದ ಹಳ್ಳಿಗೆ ಬಾಡಿನಸಾರನ್ನು ಮಾಡಲು ಹೋಗುತ್ತಿದ್ದರು. ಜನಪದ ಅಡುಗೆ ಮಾಡುವಲ್ಲಿ ಪ್ರವೀಣೆಯಾಗಿದ್ದರು. ಊರಿನ ಹಾಗು ತಾಲ್ಲೂಕಿನ ಯಾವುದೇ ಊರಲ್ಲಿ ಕರೆದರೂ ಹೋಗಿ ಜನಪದ ಔಷಧಿಗಳನ್ನು ಕೊಡುತ್ತಿದ್ದುದುಂಟು.

ಇವರಲ್ಲಿದ್ದ ಜನಪದ ಕಲೆಯನ್ನು ಇವರ ಮಕ್ಕಳು, ಮೊಮ್ಮಕ್ಕಳೆಲ್ಲ ಕಲಿತಿದ್ದಾರೆ. ವಿಶೇಷವಾಗಿ ಇವರ ಮಗನಾದ ಡಾ. ಹಿ. ಶಿ. ರಾಮಚಂದ್ರೇಗೌಡರು ಜನಪದ ಕಥೆಗಳು, ಹಾಡುಗಳು ಹಾಗು ಜನಪದ ಔಷಧಿಗಳನ್ನು ಇವರಿಂದ ಕಲಿತುಕೊಂಡರು. ಹೆಣ್ಣಮಕ್ಕಳಾದ ಪುಟ್ಟಮ್ಮ, ಸಾವಿತ್ರಮ್ಮ, ಮೊಮ್ಮಕ್ಕಳಾದ ವೆಂಕಟೇಶ, ಸಣ್ಣ ಪುಟ್ಟಕ್ಕ ಇವರೆಲ್ಲರೂ ಜನಪದ ಕಥೆಗಳು ಹಾಗು ಹಾಡುಗಳನ್ನು ಕಲಿತು ಇಂದಿಗೂ ಹಾಡುತ್ತಾರೆ, ಕಥೆ ಹೇಳುತ್ತಾರೆ.

ಶ್ರೀಮತಿ ನಂಜಮ್ಮನವರ ಹಿರಿಮಗ ತಂದೆಯಿಂದ ಮಾಟವನ್ನು ಕಲಿತುಕೊಂಡಿದ್ದರು. ಇದನ್ನು ಹಿ.ಶಿ. ರಾಮಚಂದ್ರೇಗೌಡರು ಕೂಡ ಕಲಿತಿದ್ದರಂತೆ. ತಾಯಿಯಾದ ನಂಜಮ್ಮನವರು ಮಾಟ ಮಾಡಿದ ಮನೆ ಹಾಳಾಗುತ್ತವೆ ಮಾಡಬೇಡ ಎಂದಾಗ ಅಲ್ಲಿಂದ ನಿಲ್ಲಿಸಿದೆ ಎಂದು ಗೌಡರು ಈಗಲೂ ಹೇಳುತ್ತಾರೆ. ಆದರೆ ತಂದೆಯ ವಿದ್ಯೆಯನ್ನು ಹಿರಿಮಗನೂ ತಾಯಿಯ ವಿದ್ಯೆಯನ್ನು ಕಿರಿಮಗನೂ ಸಂಪೂರ್ಣವಾಗಿ ಕರಗತ ಮಾಡಿಕೊಂಡಿರುವುದು ಜಾನಪದ ಕ್ಷೇತ್ರಕ್ಕೆ ಒಂದು ಆಶಾದಾಯಕ ಬೆಳವಣಿಗೆಯೆ ಆಗಿದೆ.

ಇವರ ಮಕ್ಕಳು ಮಾತ್ರವಲ್ಲದೆ ಇವರಿಂದ ಬೇರೆ ಬೇರೆಯವರು ಕೂಡ ಜನಪದ ಹಾಡುಗಳು, ಕಥೆಗಳು ಹೇಳುವುದನ್ನು ಕಲಿತುಕೊಂಡಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಇವರಿಂದ ಕಲಿತ ಬಾಡಿನ ಸಾರಿನ ಕಲಿಕೆ ಇಂದಿಗೂ ಬಾಯಿ ಚಪ್ಪರಿಸುವಂತೆ ಮಾಡುತ್ತಿರುವುದನ್ನು ಕಾಣಬಹುದು. ಬಾಡಿನ ಸಾರು ಮಾಡಲು ಹಳ್ಳಿ ಹಳ್ಳಿಗೆ ಹೋಗುತ್ತಿದ್ದಾಗ ಚಿಕ್ಕವನಾಗಿದ್ದ ನಾನು ಕೂಡಾ ಹೋಗುತ್ತಿದ್ದೆ ಎಂದು ಡಾ. ಹಿ.ಶಿ. ರಾಮಚಂದ್ರೇಗೌಡರು ಇಂದಿಗೂ ನೆನಪಿಸಿಕೊಳ್ಳುತ್ತಾರೆ.

ಹಿರಿಸಾವೆ ನಂಜಮ್ಮ,<br>
ಹಿರಿಸಾವೆ,<br>
ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.

## ಹೂವಿನಹಳ್ಳಿ ಹನುಮವ್ವ

ಹಾಸನ ಜಿಲ್ಲೆ, ಹಾಸನ ತಾಲ್ಲೂಕಿನ ಹೂವಿನಹಳ್ಳಿ ಕಾವಲಿನಲ್ಲಿ ವಾಸವಾಗಿದ್ದ ಹನುಮವ್ವ ಈಗಿಲ್ಲ. ಈಗಿದ್ದರೆ ಸುಮಾರು ೯೩ ವರ್ಷಗಳಾಗುತ್ತಿದ್ದವು. ಇತ್ತೀಚೆಗೆ ತೊಂಬತ್ತು ವರ್ಷ ಸಮೀಪಿಸುತ್ತಿದ್ದಾಗ ತೀರಿಕೊಂಡರು. ಇವರ ಗಂಡ ಗೊಂಬೆರಾಮಯ್ಯ. ಹುಟ್ಟಿದ ಮನೆಯಿಂದ ತೊಗಲುಗೊಂಬೆ ಮಾಡುವುದು ಹಾಗು ಪ್ರದರ್ಶನ ಕಲೆಯನ್ನು ಕಲಿತ ಹನುಮವ್ವ ತಾನು ಮದುವೆಯಾಗಿ ಬಂದ ಮನೆಯಲ್ಲೂ ತನ್ನ ಕುಲ ಕಸುಬನ್ನು ಮುಂದುವರೆಸಿಕೊಂಡು ಬಂದವರು.

ತೊಗಲುಗೊಂಬೆಯನ್ನು ಮಾಡುವಾಗ ಗೊಂಬೆಗಳಿಗೆ ಬಣ್ಣ ತಯಾರಿಸುತ್ತಿದ್ದವರು. ಯಾವ ಗೊಂಬೆಗೆ ಯಾವ ಬಣ್ಣ ಹಚ್ಚಬೇಕೆಂಬುದು ಇವರದೇ ಆಯ್ಕೆ. ಗಂಡ ಊರೂರು ಸುತ್ತುವಾಗ ಗಂಡನ ಜೊತೆಯಲ್ಲೇ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ, ಕಡ್ಡಿಗಳನ್ನಿಡಿದು ಗೊಂಬೆ ಆಡಿಸುವುದರ ಜೊತೆಗೆ ಉಪ್ಪಂಗದ ಶೃತಿ (ಕಂಚಿನ ಗಂಗಳವನ್ನು ಮಗುಚಿ ಹಾಕಿಕೊಂಡು ಅದರ ಮೇಲೆ ಹಂಚಿ ಕಡ್ಡಿಯನ್ನು ಇಟ್ಟು ಅದರಿಂದ ನಾದ ಬರುವಂತೆ ತೀಡುತ್ತಿದ್ದುದು) ಗೆ ತನ್ನ ಕಂಚಿನ ಕಂಠದ ಶೃತಿಯನ್ನು ಸೇರಿಸುತ್ತಾ ಹಿಮ್ಮೇಳದ ಹಾಡುಗಳನ್ನು ಸೊಗಸಾಗಿ ಹಾಡುತ್ತಿದ್ದವರು. ಹಾಡಿನಲ್ಲಷ್ಟೇ ಅಲ್ಲದೆ ಮಾತುಗಾರಿಕೆಯಲ್ಲಿ ಅದ್ವಿತೀಯತೆಯ ಪಾಂಡಿತ್ಯವನ್ನು ಸಾಧಿಸಿದ್ದವರು.

ಇವರು ತಮ್ಮ ಮಗನಾದ ಗುಂಡೂರಾಜನು ಈ ಕಲೆಯಲ್ಲಿ ಪರಿಣಿತನಾಗುವಂತೆ ಪ್ರೋತ್ಸಾಹ ನೀಡುತ್ತಾ ಬೆಳೆಸಿದವರು. ಈಗ ಈತ ರಾಷ್ಟ್ರೀಯ ಮಟ್ಟದ ಕಲಾವಿದರಾಗಿ ಹೆಸರು ಮಾಡಿದ್ದಾರೆ. ತನ್ನ ಗಂಡನ ಜೊತೆ ಹಾಸನ, ಆಲೂರು, ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಕಾರ್ಯಕ್ರಮ ನೀಡುವುದರ ಮೂಲಕ ಮನೆ ಮಾತಾಗಿದ್ದವರು.

ಹನುಮವ್ವ, ತಮ್ಮ ಇಳಿವಯಸ್ಸಿನಲ್ಲೂ ತನ್ನ ಮಗನಾದ ಗುಂಡೂರಾಜನ ಜೊತೆ ಹಲವಾರು ರಾಜ್ಯಗಳಲ್ಲಿ ತೊಗಲುಗೊಂಬೆ ಪ್ರದರ್ಶನದಲ್ಲಿ ಭಾಗಿಯಾಗಿದ್ದವರು. ಈ ದೃಷ್ಟಿಯಿಂದ ಹನುಮಮ್ಮನೂ ಕೂಡ ಮಗನಂತೆ ರಾಷ್ಟ್ರೀಯ ಕಲಾವಿದೆ ಎಂದರೆ ತಪ್ಪಾಗುವುದಿಲ್ಲ.

ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ೧೯೯೩ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಕಲೆ ಕುಲಪದ್ಧತಿಯಂತೆ ತಮ್ಮ ಮಗನ ಮೂಲಕ ಇನ್ನೂ ವೈಭವೋಪೇತವಾಗಿರುವುದನ್ನು ಕಂಡರೆ ಹನುಮಮ್ಮನವರೇ ಇನ್ನೂ ಈ ಕಲೆಯ ಮೂಲಕ ಜೀವಂತವಾಗಿದ್ದಾರೆ ಎಂದೆನಿಸುತ್ತದೆ.

**ಹೂವಿನಹಳ್ಳಿ ಹನುಮವ್ವ,**
**ಹೂವಿನಹಳ್ಳಿ ಕಾವಲು, ಕುಪ್ಪಳ್ಳಿ ಅಂಚೆ,**
**ಕಸಬಾ ಹೋಬಳಿ, ತಾ : ಜಿ : ಹಾಸನ.**

## ಜವರಯ್ಯ ಉ॥ ಕಿವುಡಯ್ಯ

ಹಾಸನ ಜಿಲ್ಲೆ ಅರಕಲಗೂಡಿನವರಾದ ಜವರಯ್ಯನವರು ಕಿವುಡಯ್ಯ ಎಂದೇ ಪ್ರಸಿದ್ಧರಾದವರು. ಈಗಿನ ವಯಸ್ಸು ೯೨. ಕಲೆ ಚೌಡಿಕೆ, ಇವರು ಅನಕ್ಷರಸ್ಥರಾಗಿದ್ದು, ತನ್ನ ಇಪ್ಪತ್ತನೆಯ ವಯಸ್ಸಿನಿಂದಲೇ ಚೌಡಿಕೆ ನುಡಿಸುವುದು ಮತ್ತು ಹಾಡುವುದನ್ನು ತಮ್ಮ ಜೀವನದ ಆಪ್ತ ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ಚೌಡಿಕೆ ಕಲೆ ಉತ್ತರ ಕರ್ನಾಟಕದಲ್ಲಿ ಹೆಚ್ಚಿದ್ದು ಎಲ್ಲಮ್ಮನ ಸಂಪ್ರದಾಯದವರು ಹಾಡುವ ಪದ್ಧತಿ ಇಂದಿಗೂ ಉಳಿದುಕೊಂಡು ಬಂದಿದೆ. ಕೊಳಗದ ಆಕಾರದಲ್ಲಿರುವ ಮರದಿಂದ ಮಾಡಿದ ವಸ್ತುವಿಗೆ ಒಂದು ಬಿದಿರು ಬೊಂಬನ್ನು ಸಿಕ್ಕಿಸಿ, ಅದಕ್ಕೆ ತಂತಿಯನ್ನು ಕಟ್ಟಿ, ತಂತಿಯನ್ನು ಮೀಟುತ್ತಾ, ಹಿಂದು ಮುಂದಕ್ಕೆ ಕಾಲನ್ನು ಕುಣಿಸುತ್ತಾ ಹಾಡುವ ಕಲೆಯೇ ಚೌಡಿಕೆ. ಇವರು ಹಾಡುವ ಸಾಹಿತ್ಯ ಮಾತ್ರ ಎಲ್ಲಮ್ಮನ ಕಥೆಯನ್ನು. ಇದು ದಕ್ಷಿಣ ಕರ್ನಾಟಕದ ಹಾಸನ, ಚಿಕ್ಕಮಗಳೂರುಗಳಲ್ಲಿ ಮಾತ್ರ ಅಲ್ಲಲ್ಲಿ ಇದೆ.

ಜವರಯ್ಯ ಹಾಸನ ಜಿಲ್ಲೆ, ಮೈಸೂರು ಜಿಲ್ಲೆ ಹಾಗು ತುಮಕೂರು ಜಿಲ್ಲೆಗಳಲ್ಲಿ ಸಂಚರಿಸಿ ಅಲ್ಲೆಲ್ಲಾ ತಮ್ಮ ಸುಮಧುರ ಕಂಠದ ಗಾಯನದಿಂದ ಮತ್ತು ನಿಪುಣತೆಯಿಂದ ಚೌಡಿಕೆವಾದವನ್ನು ಮಾಡಿ ಜನರ ಮನಸ್ಸನ್ನು ಗೆದ್ದು ಸೈ ಎನಿಸಿಕೊಂಡವರು. ಬಿಡು ಗೀತೆಗಳನ್ನು ಮತ್ತು ಸುದೀರ್ಘವಾದ ಕಾವ್ಯಗಳನ್ನು ನಿರರ್ಗಳವಾಗಿ ಹಾಡುತ್ತಾರೆ. ಭಾವಕ್ಕೆ ತಕ್ಕ ಹಾಗೆ ಭಾವನೆ, ಧ್ವನಿಗಳನ್ನು ಅಳವಡಿಸಿಕೊಂಡು ಆರೋಹಣ, ಅವರೋಹಣಗಳನ್ನು ತಾಳಕ್ಕೆ ತಕ್ಕ ಹಾಗೆ ಗಾಯನ ಮಾಡುವವರು ಶ್ರೀ ಜವರಯ್ಯನವರು. ಜನಪದ ಕಲೆಗೆ ತನ್ನನ್ನು ಅರ್ಪಿಸಿಕೊಂಡ ಅಪೂರ್ವ ಗಾಯಕರಾದ ಇವರು ಹಾಸನ ಜಿಲ್ಲೆಗೆ ಚೌಡಿಕೆ ಕಲೆಯನ್ನು ಪರಿಚಯಿಸಿದ ವಿಶಿಷ್ಟ ಅನನ್ಯ ಗಾಯಕ. ಇವರು ಚೌಡಿಕೆ ಕಲೆಯನ್ನು ತಮ್ಮಷ್ಟಕ್ಕೆ ಮಾತ್ರ ಕಲಿತು ಬಿಡದೆ ತನ್ನ ಮಕ್ಕಳಲ್ಲಿಯೂ ಈ ಕಲೆಯನ್ನು, ಇತರರಿಗೂ ಚೌಡಿಕೆ ಹಾಡುಗಳನ್ನು ಕಲಿಸಿದ್ದಾರೆ.

ಇವರಲ್ಲಿರುವ ಕಲಾಪ್ರತಿಭೆಯನ್ನು ಗುರುತಿಸಿ ಸ್ಥಳೀಯವಾಗಿ ಹಲವಾರು ಸಂಘ–ಸಂಸ್ಥೆಗಳು ಗೌರವಿಸಿವೆ. ಯಕ್ಷಗಾನ ಅಕಾಡೆಮಿಯು ೧೯೯೦ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ.

ಜವರಯ್ಯ,
ಅರಕಲಗೂಡು ಕೋಟೆ,
ಹಾಸನ ಜಿಲ್ಲೆ.

## ಜಿ. ಎನ್. ಅಪ್ಪಾಜಿಗೌಡ

ದಕ್ಷಿಣ ಕರ್ನಾಟಕದಲ್ಲಿರುವ ಒಂದು ಪ್ರಮುಖ ಧಾರ್ಮಿಕ ಕಲೆ ಭಾಗವಂತಿಕೆ. ಹಾಸನ, ಮಂಡ್ಯ ತುಮಕೂರು ಜಿಲ್ಲೆಗಳಲ್ಲಿ ಈ ಕಲೆ ಇದೆ. ಇದು ವೈಷ್ಣವ ಧರ್ಮದವರ ಸಂಪ್ರದಾಯ ಕಲೆಯಾಗಿದ್ದು ವಂಶಪಾರಂಪರ್ಯವಾಗಿ ತಂದೆಯಿಂದ ಮಕ್ಕಳಿಗೆ ಹರಿದು ಬಂದಿರುವ ಕಲೆ. ದೀಪಾವಳಿಯ ಸಂದರ್ಭದಲ್ಲಿ ದಾಳಗಳನ್ನು, ಚೂರಿಪಾನುಗಳನ್ನು ಹಿಡಿದು ಊರೂರ ಮೇಲೆ ಭಾಗವಂತಿಕೆ ಹಾಡುಗಳನ್ನು ಹೇಳುತ್ತಾ ಹೊರಡುತ್ತಾರೆ. ಇದಕ್ಕೆ ದೀವಳಿಗೆ ದಂಡು ಎಂದು ಕರೆಯುತ್ತಾರೆ. ಈ ಸಂದರ್ಭದಲ್ಲಿ ರಾಮಾಯಣ, ಭಾಗವತ, ಮಹಾಭಾರತಕ್ಕೆ ಸಂಬಂಧಿಸಿದ ಹಾಡುಗಳನ್ನು ಹೇಳುತ್ತಾರೆ. ಈ ಒಕ್ಕಲು ತಿರುಪತಿ ತಿಮ್ಮಪ್ಪ, ಕಾವೇಟಿರಂಗ, ಆಂಜನೇಯ ಮುಂತಾದ ದೇವರುಗಳ ಒಕ್ಕಲುಗಳಾಗಿರುತ್ತಾರೆ. ಮಂಡ್ಯ ಜಿಲ್ಲೆಯ ಮೇಲುಕೋಟೆ ಭಾಗವತ ಸಂಪ್ರದಾಯದ ಕೇಂದ್ರಬಿಂದು ಎಂದು ಹೇಳುವುದುಂಟು. ಈ ಸಂಪ್ರದಾಯಗಳನ್ನು ಚಿಕ್ಕದೇವರಾಜನ ಆಸ್ಥಾನ ಕವಿ ತಿರುಮಲಾರ್ಯ ಜಾರಿಗೆ ತಂದ ಎಂಬ ನಂಬಿಕೆಯು ಇದೆ. ಹಾಸನ ಜಿಲ್ಲೆಯಲ್ಲಿ ಜಿನ್ನೇನಹಳ್ಳಿ ಭಾಗವಂತಿಕೆಯ ಕೇಂದ್ರ ಸ್ಥಾನ.

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಹಿರಿಸಾವೆ ಹೋಬಳಿಯ ಜಿನ್ನೇನ ಹಳ್ಳಿಯವರು ಶ್ರೀ ಜಿ. ಎನ್. ಅಪ್ಪಾಜಿಗೌಡರು. ತಂದೆ ಬಿ. ನಂಜೇಗೌಡರು. ಒಕ್ಕಲಿಗ ಜನಾಂಗಕ್ಕೆ ಸೇರಿದವರು. ವೃತ್ತಿ ವ್ಯವಸಾಯ. ಪ್ರವೃತ್ತಿ ಭಾಗವಂತಿಕೆ ಕಲಾವಿದರು. ಹೈಸ್ಕೂಲ್‌ವರೆಗೆ ಕಲಿತಿದ್ದ ಇವರು ತಮ್ಮ ತಂದೆಯಿಂದ ಚಿಕ್ಕವಯಸ್ಸಿನಲ್ಲಿಯೇ ಭಾಗವಂತಿಕೆ ಕಲೆಯನ್ನು ಕಲಿತು ಪ್ರಾವೀಣ್ಯತೆಯನ್ನು ಪಡೆದರು. ಈ ಕಲೆಯಲ್ಲಿ ಧರಿಸುತ್ತಿದ್ದ ಉಡುಪುಗಳೆಂದರೆ ಬಿಳಿ ಅಂಗಿ, ಕಚ್ಚೆ ಪಂಚೆ, ಕರೀಕೋಟು, ತಲೆಯ ಮೇಲೆ ಮೈಸೂರು ಪೇಟ. ಕೈಯಲ್ಲಿ ತಾಳಗಳು ಇವೇ ಪಕ್ಕವಾದ್ಯ.

ಇದೊಂದು ಧಾರ್ಮಿಕ ಕಲೆಯಾದರೂ ಅಪ್ಪಾಜಿಗೌಡರ ಉತ್ಸಾಹದಿಂದ ಈ ಕಲೆಯು ಮೈಸೂರು, ಬೆಂಗಳೂರು, ಮಂಗಳೂರು ಆಕಾಶವಾಣಿಗಳಲ್ಲಿ ಪ್ರಸಾರವಾಗಿದೆ. ಮೈಸೂರಿನಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿಯೂ ಈ ಕಲೆಯ ಪ್ರದರ್ಶನ ನಡೆದಿದೆ. ಅಪ್ಪಾಜಿಗೌಡರು ಮೂಡಲಪಾಯ ಯಕ್ಷಗಾನದಲ್ಲಿಯೂ ಅಭಿನಯಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇವರ ಕಲಾಸೇವೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೮ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ. ಈಗ ಇವರು ಬದುಕಿದ್ದರೆ ಸುಮಾರು ೬೦ ವರ್ಷಗಳಾಗುತ್ತಿದ್ದವು.

**ಜಿ. ಎನ್. ಅಪ್ಪಾಜಿಗೌಡ,**
**ಜಿನ್ನೇನಹಳ್ಳಿ,**
**ಹಿರಿಸಾವೆ ಅಂಚೆ, ಹೋಬಳಿ,**
**ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.**

# ಹೊನ್ನಶೆಟ್ಟಿಹಳ್ಳಿ ಹುಚ್ಚಮ್ಮ

ಜನಪದ ಸಾಹಿತ್ಯದಲ್ಲಿ ಪ್ರಮುಖ ಪ್ರಕಾರ ಗೀತೆಗಳು. ಇವು ಸಮಾಜದ ನಾನಾ ಮುಖಗಳನ್ನು ಬಿಂಬಿಸುವ ಜೊತೆಗೆ ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿ ಅನುಭವಿಸುತ್ತಿದ್ದ ಕಷ್ಟಗಳನ್ನು ಹಾಡಿನ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಅತ್ತೆ ಮನೆಯವರ ಆಣತಿಯಂತೆ ಕೆರೆಗೆ ಹಾರವಾದ ಹೆಣ್ಣಿನ ಕಥೆಯೂ ಈ ಗೀತೆಗಳಲ್ಲಿದೆ. ತೌರಿನ ವರ್ಣನೆ ಅಣ್ಣ, ಅಕ್ಕ, ತಮ್ಮ ತಂಗಿಯರ ಪ್ರೀತಿ ವಾತ್ಸಲ್ಯವೂ ಕೂಡ ಜನಪದ ಸಾಹಿತ್ಯದಲ್ಲಿದೆ. ಇಂತಹ ಹಾಡುಗಳನ್ನು ಹೆಂಗಸರು ರಾಗಿ ಬೀಸುವಾಗ ಕೃಷಿ ಕೆಲಸ ಮಾಡುವಾಗ, ಸುಗ್ಗಿಯ ಸಂದರ್ಭದಲ್ಲಿ ಹಾಡುವುದುಂಟು. ಇಡೀ ಜನಪದ ಸಾಹಿತ್ಯ ಗ್ರಾಮೀಣ ಪ್ರದೇಶದ ಮುಗ್ಧ ಅವಿದ್ಯಾವಂತ ಹೆಂಗಸರು ಹಾಡುವುದುಂಟು. ಇಂತಹ ವರ್ಗಕ್ಕೆ ಸೇರುವವರು ಶ್ರೀಮತಿ ಹುಚ್ಚಮ್ಮ.

ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಹೊನ್ನಶೆಟ್ಟಿಹಳ್ಳಿಯವರು. ಶ್ರೀಮತಿ ಹುಚ್ಚಮ್ಮ. ಇವರು ಹರಿಜನ ಜನಾಂಗಕ್ಕೆ ಸೇರಿದವರು. ಈ ಊರು ಮಾಲೆಕಲ್ಲು ತಿರುಪತಿ ಬೆಟ್ಟದ ತಪ್ಪಲಿನಲ್ಲಿರುವುದು. ಇದೊಂದು ಕುಗ್ರಾಮ. ತನ್ನ ಗಂಡನನ್ನು ಕಳೆದುಕೊಂಡು ಅದರ ಕೊರತೆಯನ್ನು ತುಂಬಿಕೊಳ್ಳಲು ಜನಪದ ಸಾಹಿತ್ಯಕ್ಕೆ ಹುಚ್ಚಮ್ಮ ಮೊರೆ ಹೋದರು. ವೃತ್ತಿ ಕೂಲಿನಾಲಿ ಮಾಡುವುದು. ಜೊತೆಗೆ ಎಮ್ಮೆ ಮೇಕೆಗಳನ್ನು ಸಾಕಿಕೊಂಡು ಗುಡಿಸಿಲಿನಲ್ಲಿ ಜೀವನ ಸಾಗಿಸಿದವರು.

ಇವರು ಹಾಡುವ ಹಾಡುಗಳೆಂದರೆ ಬದುಕಿನ ಸಂಕಷ್ಟಗಳನ್ನು ಪದರ ಪದರವಾಗಿ ಬಿಚ್ಚುವ ಅನೇಕ ಜನಪದ ಕಾವ್ಯಗಳು ಇವರ ಕಂಠದಲ್ಲಿ ಸರಾಗವಾಗಿ ಹೊರಹೊಮ್ಮುತ್ತವೆ. ಅವುಗಳೆಂದರೆ ಸಂಪನ್ನೆ, ಹೊನ್ನಮ್ಮ, ಹುಳಿಯಾರು ಕೆಂಚಮ್ಮ, ಸೋಬಾನೆ ಹಾಡುಗಳು, ದೇವರ ಪದಗಳು ಮುಂತಾದವು. ಹುಚ್ಚಮ್ಮ ಹಾಡುವ ಕಥನ ಕಾವ್ಯಗಳನ್ನು

ಡಾ. ಜೀ.ಶಂ.ಪರಮಶಿವಯ್ಯ ಸಂಗ್ರಹಿಸಿ ತಮ್ಮ 'ಜನಪದ ಖಂಡ ಕಾವ್ಯಗಳು' ಕೃತಿಯಲ್ಲಿ ಪ್ರಕಟಿಸಿದ್ದಾರೆ. ಇದರ ಮೂಲಕ ಹುಚ್ಚಮ್ಮ ನಮ್ಮೊಂದಿಗೆ ಇಂದಿಗೂ ಜೀವಂತವಾಗಿದ್ದಾರೆ. ಇವರ ಕಲಾ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೫ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ.

**ಶ್ರೀಮತಿ ಹುಚ್ಚಮ್ಮ,**
**ಹೊನ್ನಶೆಟ್ಟಿಹಳ್ಳಿ, ಮಾಲೆ ಕಲ್ಲು ತಿರುಪತಿ ಅಂಚೆ,**
**ಕಸಬಾ ಹೋಬಳಿ, ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.**

# ಹಂಪಾಪುರ ಈರಮ್ಮ

ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಹಂಪಾಪುರ ಗ್ರಾಮದ ಈರಮ್ಮ ಸುಮಾರು ೯೦ ವರ್ಷವಾಗಿದ್ದು ಈಗ ಹಣ್ಣು ಹಣ್ಣು ಮುದುಕಿ. ಇವರು ಗಾಯನಪಳ್ಳಿ ಬೋರಯ್ಯನವರ ಆಶ್ರಯದಲ್ಲಿದ್ದವರು. ಸೋಬಾನೆ ಹಾಡುಗಳನ್ನು ತಮ್ಮ ಉಸಿರಾಗಿಸಿಕೊಂಡಿರುವ ಶ್ರೀಮತಿ ಈರಮ್ಮ ತಮ್ಮ ತಾಯಿಯವರಾದ ಕೆಂಪಮ್ಮನಿಂದ ಹಾಡುಗಾರಿಕೆಯನ್ನು ಕಲಿತವರು. ತಮ್ಮ ಕಂಚಿನ ಕಂಠದ ಸಿರಿಯಿಂದ ಸುತ್ತ-ಮುತ್ತಲ ಹಳ್ಳಿಗಳಲ್ಲೆಲ್ಲಾ ಹಾಡುಗಾರಿಕೆಯಲ್ಲಿ ಪ್ರಸಿದ್ಧಿಯನ್ನು ಪಡೆದವರು. ಇವರು ಹಾಡದಿರುವ ಮದುವೆಗಳೇ ಆ ಸುತ್ತ ಮುತ್ತಲ ಹಳ್ಳಿಗಳಲ್ಲಿ ಇಲ್ಲವೆಂದೇ ಹೇಳಬಹುದು. ಇವರ ಹಾಡುಗಳಿಂದಲೇ ಮದೆವೆಯೆಂಬುದು ಅರ್ಥಪೂರ್ಣತೆ ಪಡೆದುಕೊಂಡಿದೆ ಎಂದು ಹೇಳಬಹುದು. ಅನೇಕ ವಧುವರರಿಗೆ ಸೋಬಾನೆ ಹಾಡುಗಳ ಮೂಲಕ ಶುಭವನ್ನು ಹಾರೈಸಿ ಪ್ರಖ್ಯಾತಿ ಪಡೆದಿರುವ ಇವರು ಅಪರೂಪದ ಸೋಬಾನೆ ಹಾಡುಗಾರ್ತಿ.

ಇವರು ತಮ್ಮ ಕಂಚಿನ ಕಂಠದ ಮೂಲಕ ಸಾಹಿತ್ಯ ಶ್ರೀಮಂತಿಕೆಯನ್ನು ಭಾವಪೂರ್ಣ ಪರಿಣಾಮಕಾರಿಯಾಗಿ ಮಾಡುವುದರ ಮೂಲಕ ಕೇಳುಗರನ್ನು ಸೆರೆಹಿಡಿದವರು. ಇವರು ಸುಮಾರು ಐವತ್ತಕ್ಕೂ ಹೆಚ್ಚು ಕಥನಗೀತೆಗಳನ್ನು ಹಾಗು ಹಲವಾರು ಬಿಡಿ ಗೀತೆಗಳನ್ನು ಹಾಡುವವರು. ಇವರು ಪ್ರಮುಖವಾಗಿ ಹಾಡುತ್ತಿದ್ದ ಕಥನ ಗೀತೆಗಳೆಂದರೆ ಉತ್ತರದೇವಿ ಹಾಡು, ಬಂಜೆಪದ, ಅಣ್ಣತಮ್ಮಂದಿರ ಪದ, ಅಕ್ಕತಂಗಿಯರ ಪದ, ಗುರುವಿನ ಪದ, ಬಾಲನಾಗಮ್ಮನ ಪದ ಗುಣಸಾಗರಿಪದ, ಹೇಮರಡ್ಡಿ ಮಲ್ಲಮ್ಮನ ಪದಗಳು ಮುಖ್ಯವಾದವುಗಳು. ಇವರ ಕಲಾ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೯೪ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ.

ಶ್ರೀಮತಿ ಈರಮ್ಮ, ಹಂಪಾಪುರ
ರಾಮನಾಥಪುರ ಹೋಬಳಿ, ಅರಕಲಗೂಡು ತಾಲೂಕು, ಹಾಸನ ಜಿಲ್ಲೆ.

## ಸಯೀದ್ ಹುಸೇನ್

ಸಯೀದ್ ಹುಸೇನ್ ಜನಪದ ಜಾದೂ ಕಲಾವಿದ. ಮೂಲತಃ ಕೋಲಾರ ಜಿಲ್ಲೆ ಮುಳ ಬಾಗಿಲು ತಾಲ್ಲೂಕಿನವರಾದ ಹುಸೇನ್ ನೆಲೆಸಿದ್ದು ಮಾತ್ರ ಹಾಸನದಲ್ಲಿ. ಇವರ ತಂದೆ ಸಯೀದ್ ಮೌಲಾಸಾಬ್, ತಾಯಿ ಹಿರನ್‌ಬೀ. ಇವರ ತಂದೆ ಹುಸೇನ್ ಚಿಕ್ಕವರಾಗಿದ್ದಾಗ ಹಾಸನದ ಕಡೆ ಬಂದರು. ನಂತರ ಗೊರೂರಿನಲ್ಲಿ ನೆಲೆಸಿದರು. ಅಲ್ಲಿ ಹಾವಾಡಿಸುತ್ತಾ, ನಾಟಿ ಔಷಧಿ ಕೊಡುತ್ತಾ ಜೀವನ ನಡೆಸುತ್ತಿದ್ದರು. ಆಗ ಹುಸೇನರಿಗೆ ಹತ್ತು–ಹನ್ನೆರಡು ವರ್ಷ. ಆದರೆ ತಂದೆಯವರು ಇಬ್ಬರು ಹೆಂಡಿರನ್ನು ಕಟ್ಟಿಕೊಂಡಿದ್ದು, ಸಂಸಾರದ ಕಲಹದಿಂದ ಪುನಃ ಕೋಲಾರಕ್ಕೆ ಹೋಗಬೇಕಾಗಿ ಬಂದಿತು. ಹುಸೇನ ತನ್ನ ಮದುವೆ ನಂತರ ಪುನಃ ಹಾಸನಕ್ಕೆ ಬಂದು ನೆಲೆಸಿದರು. ಇದೇ ಅವರ ಊರಾಯಿತು.

ಸಯೀದ್ ಹುಸೇನ್ ಬಹುಮುಖ ಪ್ರತಿಭೆಯ ಕಲಾವಿದ. ಈತ ತಾನೇ ತಯಾರಿಸಿದ ಪಿಟೀಲು (ಅಂದರೆ ತೆಂಗಿನ ಚಿಪ್ಪಿಗೆ ಚರ್ಮವನ್ನು ಮುಚ್ಚಿ, ಅದಕ್ಕೆ ಬಿದಿರು ಕಡ್ಡಿಯನ್ನು ಸಿಕ್ಕಿಸಿ ಅದಕ್ಕೊಂದು ತಂತಿ ಬಿಗಿದು, ಬಿದಿರು ಕಡ್ಡಿ ಬಾಗಿಸಿ ಅದಕ್ಕೆ ಕಟ್ಟಿರುವ ದಾರದಿಂದ ತಂತಿಯನ್ನ ಮೀಟಿದಾಗ ಬರುವ ನಾದ ಮಾಧುರ್ಯ ಯಾವ ಆಧುನಿಕ ವಾದ್ಯವನ್ನು ಮೀರಿಸುವಂತಿತ್ತು). ಬಾರಿಸುತ್ತಿದ್ದರೆ ಹಾದಿ ಬೀದಿಯಲ್ಲಿ ಹೋಗುತ್ತಿದ್ದ ಜನರೆಲ್ಲರೂ ಸಂತೆಯಂತೆ ನೆರೆದಿರುತ್ತಿದ್ದರು. ಹುಸೇನ್ ಅವರ ಜಾದೂ ಪ್ರದರ್ಶನ ಹೆಚ್ಚು ನಡೆಯುತ್ತಿದ್ದು ಹಾಸನದ ಅಶೋಕ ಹೋಟೆಲ್ ಮುಂಭಾಗದಲ್ಲಿ. ಅದಕ್ಕೆ ಮೊದಲು ಇವರು ಹಾಸನ ನಗರದ ಮೂಲೆ ಮೂಲೆಗಳಲ್ಲಿ ತಮ್ಮ ಪ್ರದರ್ಶನ ನೀಡುತ್ತಿದ್ದರು. ನಂತರ ಹಾಸನ ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ನಡೆಯುವ ಸಂತೆಗೆ ತಮ್ಮ ಪ್ರದರ್ಶನ ವರ್ಗವಾಯಿತು. ಆನಂತರ ಶಾಲಾ ಕಾಲೇಜುಗಳಲ್ಲಿ ತಮ್ಮ ಪ್ರದರ್ಶನ ನೀಡುವ ಮೂಲಕ ವಿದ್ಯಾರ್ಥಿಗಳ ಮನಸ್ಸನ್ನು ಸೂರೆಗೊಳ್ಳುತ್ತಿದ್ದರು. ಆದರೆ ಅವೆಲ್ಲಾ ಸ್ಥಳಗಳಿಗಿಂತ ಹೆಚ್ಚು

ಪ್ರಚಾರ ಹಾಗು ಹಣ ಗಳಿಸಲು ಅನುಕೂಲವಾದ ಸ್ಥಳವೆಂದರೆ ಅದು ಹೋಟೆಲ್ ಹಾಸನ್ ಅಶೋಕಾದಲ್ಲಿ.

ಹಾಸನ ಜಿಲ್ಲೆ ಪ್ರಮುಖ ಪ್ರವಾಸಿ ಕೇಂದ್ರವಾಗಿರುವುದರಿಂದ ಇಲ್ಲಿಗೆ ದೇಶ ವಿದೇಶಗಳ ಪ್ರವಾಸಿಗರು ಬರುತ್ತಾರೆ. ಅವರೆಲ್ಲರೂ ಹೆಚ್ಚು ಉಳಿಯುವ ಸ್ಥಳವೆಂದರೆ ಅದು ಅಶೋಕ ಹೋಟೆಲ್. ಅಲ್ಲಿ ಹುಸೇನ್ ತಮ್ಮ ಪ್ರದರ್ಶನ ನೀಡುವುದರ ಮೂಲಕ ತಮ್ಮ ಜನಪದ ಜಾದೂ ಕಲೆಯನ್ನು ದೇಶ ವಿದೇಶಿಗರಿಗೆ ತಲುಪಿಸುವುದು ಸುಲಭ ಸಾಧ್ಯವಾಯಿತು. ಹುಸೇನ್ ಅವರಿಗೆ ಕನ್ನಡ, ಮಲೆಯಾಳಂ, ತೆಲುಗು, ತಮಿಳು, ಮರಾಠಿ, ಹಿಂದಿ, ಉರ್ದು ಭಾಷೆಗಳು ಬರುತ್ತಿದ್ದವು. ಜೊತೆಗೆ ಫ್ರೆಂಚ್, ರಷ್ಯನ್, ಜರ್ಮನ್, ಇಂಗ್ಲಿಷ್ ಭಾಷೆಗಳ ಪರಿಚಯವೂ ಕೂಡ ಅಲ್ಪಸ್ವಲ್ಪ ಇದ್ದು ತಮ್ಮ ಈ ಹರುಕು ಮುರುಕು ಭಾಷೆ ಮತ್ತು ಹಾವ ಭಾವಗಳಿಂದ ವಿದೇಶಿ ಪ್ರವಾಸಿಗರನ್ನು ಸುಲಭವಾಗಿ ಆಕರ್ಷಿಸುತ್ತಿದ್ದರು. ಜೊತೆಗೆ ಹಾವಾಡಿಸುವುದು, ನಾಟಿ ಔಷಧಿಯನ್ನು ಕೊಡುವುದು ಇವರ ಸಂಗಾತಿಗಳಾಗಿದ್ದವು.

ಹುಸೇನ್ ಅವರು ಈ ಜಾದೂ ಕಲೆ ಕಲಿಯಲು ಮುಖ್ಯ ಕಾರಣಕರ್ತರೆಂದರೆ ಉಡುಪಿಯ ಕೃಷ್ಣಭಟ್ಟ ಎಂಬುವರು. ಕೃಷ್ಣಭಟ್ ಅವರು ಹುಸೇನ್ ಅವರನ್ನು ಕಲ್ಕತ್ತಾಕ್ಕೆ ಕರೆದೊಯ್ದು ಪ್ರಸಿದ್ಧ ಜಾದೂಗಾರರಾದ ಪಿ.ಸಿ. ಸರ್ಕಾರ್ ಅವರಿಂದ ಜಾದೂ ಕಲಿಸಿದರಂತೆ. ಅಲ್ಲಿಂದ ಪ್ರಾರಂಭವಾದ ಈ ಕಲೆ ಹುಸೇನ ಸಾಯುವವರೆಗೆ ನಿರಂತರವಾಗಿ ನಡೆಯಿತು. ಹುಸೇನ್ ಅವರ ಉಡುಗೆ-ತೊಡುಗೆ ಸಾಧಾರಣವಾದದ್ದೆ. ಒಂದು ಪ್ಯಾಂಟು, ಷರಟು ಧರಿಸಿ ತಲೆಗೊಂದು ಪೇಟ ಕಟ್ಟುತ್ತಿದ್ದರು. ೧೯೬೭ರಲ್ಲಿ ಉಡುಪಿಯಲ್ಲಿ ಪ್ರೊ. ಶಂಕರ್ ಅವರು ಏರ್ಪಡಿಸಿದ್ದ "ಇಂಟರ್ ನ್ಯಾಷನಲ್ ಗಿಲಿಗಿಲಿ ಮೇಳ"ದಲ್ಲಿ ಮೊದಲ ಬಹುಮಾನ ಪಡೆದ ಹುಮ್ಮಸ್ಸು ಹಾಗು ಬೇರೆಯ ಜಾದೂಗಾರರು ಧರಿಸಿದ್ದ ಸೂಟುಗಳನ್ನು ನೋಡಿ ತಾವೂ ಕೂಡ ಒಂದು ಜೊತೆ ಸಾಧಾರಣ ಸೂಟನ್ನು ಹೊಲಿಸಿಕೊಂಡು, ಅನಂತರ ಆ ದಿರಿಸಿನಲ್ಲೇ ಜಾದೂ ಪ್ರದರ್ಶನವನ್ನು ನೀಡುತ್ತಿದ್ದರು.

ಇವರ ಪ್ರದರ್ಶನ ಹಾಸನ ಜಿಲ್ಲೆಯಲ್ಲಿ ಮಾತ್ರವಲ್ಲದೆ ಚಿಕ್ಕಮಗಳೂರು, ತುಮಕೂರು, ಶಿವಮೊಗ್ಗ, ಚಿತ್ರದುರ್ಗ, ಮೈಸೂರು, ಮಂಗಳೂರು ಮತ್ತು ಹೊರನಾಡಾದ ಊಟಿಯಲ್ಲಿಯೂ ಹೋಗಿ ತಮ್ಮ ಜಾದೂ ಪ್ರದರ್ಶನವನ್ನು ನೀಡಿರುವುದುಂಟು. ಹುಸೇನ್ ಅವರು ಸರ್ವಧರ್ಮವನ್ನು ಪ್ರೀತಿಯಿಂದ ಕಾಣುತ್ತಿದ್ದರು. ಇವರು ವಾಸವಿದ್ದ ಗಾಂಧಿ ನಗರದಲ್ಲಿ ಕಟ್ಟಿರುವ ಈಶ್ವರ ದೇವಸ್ಥಾನಕ್ಕೆ ಇವರೇ ಮುಖ್ಯ ಪ್ರೇರಣೆಯೆಂದು ಸ್ಥಳೀಯರು ಇಂದಿಗೂ ಹುಸೇನ್ ಅವರನ್ನು ನೆನಪಿಸಿಕೊಳ್ಳುತ್ತಾರೆ. ಈಗ ಇವರು ಬದುಕಿದ್ದರೆ ಸುಮಾರು ೯೦ವರ್ಷಗಳಾಗುತ್ತಿದ್ದವು. ಇವರ ಜಾದೂ ಕಲೆಯುನ್ನು ಇವರ ಮಗ ಮುಂದುವರೆಸುತ್ತಿರುವುದು ಆಶಾದಾಯುಕ

ಬೆಳವಣಿಗೆಯಾಗಿದೆ. ಆದರೆ ತಂದೆಯ ಮಟ್ಟಕ್ಕೇರಲು ಸಾಧ್ಯವಾಗಿಲ್ಲ. ಹುಸೇನ್ ಅವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೯೮ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ. ಹುಸೇನ್ ಸತ್ತಿದ್ದರೂ ಅವರನ್ನು ನೋಡಿದ್ದವರಿಗೆ ಅವರ ಜಾಮೂ ಕಲೆ ಬರಿ ನೆನಪಾಗಿ ಮಾತ್ರ ಉಳಿದಿದೆ.

ಸಯೀದ್ ಹುಸೇನ್,
ಗಾಂಧಿನಗರ (ಚನ್ನಪಟ್ಟಣ ಹತ್ತಿರ),
ಹಾಸನ ಜಿಲ್ಲೆ.

# ಸೋಬಾನೆ ಗಿಡ್ಡೇಗೌಡ

ಶುಭ ಸಮಾರಂಭಗಳಾದ ಮದುವೆ, ಮುಂಜಿ, ಒಸಗೆ, ನಾಮಕರಣ ಮುಂತಾದ ಕಾರ್ಯಗಳಲ್ಲಿ ಹಾಡುವ ಹಾಡುಗಳೆ ಸೋಬಾನೆ ಪದಗಳು. ಸೋಬಾನೆ ಹೆಂಗಸರ ಕಲೆ. ಹೆಂಗಸರಿಗೆ ಮಾತ್ರ ಸೀಮಿತವಾಗಿದ್ದ ಸೋಬಾನೆಯನ್ನು ಗಂಡಸರು ಹೇಳಿದಾಗ ಆಶ್ಚರ್ಯ ಆಗುವುದು ನಿಜ. ಆಗ ಹೆಂಗಸರು 'ಗಂಡಸಿಗೇಕೆ ಗೌರಿ ಚಿಂತೆ' ಎಂದು ಕೇಳುವುದು ಕೂಡ ಸಹಜವೆ. ಇಂತಹ ಸೋಬಾನೆ ಹಾಡುಗಳನ್ನು ಕಲಿತು ಹಾಡುವುದರ ಮೂಲಕ ಸೋಬಾನೆ ಗಿಡ್ಡೇಗೌಡರೆಂದು ಹೆಸರು ವಾಸಿಯಾದವರು ಇವರು. ಇವರ ತಾಯಿ ಒಳ್ಳೆಯ ಹಾಡುಗಾರ್ತಿ. ಮದುವೆ, ಮುಂಜಿ ಮುಂತಾದ ಸಮಾರಂಭಗಳಲ್ಲಿ ಇಂಪಾಗಿ ಹಾಡುತ್ತಿದ್ದರು. ಆ ತಾಯಿಯ ಕಂಠಸಿರಿ ಮಗನಲ್ಲಿಯೂ ಉಳಿದುಕೊಂಡು ಬಂದಿತು. ತಾನು ತಾಯಿಯಂತೆಯ ಸೋಬಾನೆಯಲ್ಲಿ ಪ್ರಸಿದ್ಧಿ ಪಡೆಯ ಬೇಕೆನ್ನುವ ಹಂಬಲ ಗಿಡ್ಡೇಗೌಡರನ್ನು ಕಾಡಿತು. ಅಂತೆಯೇ ಅದರಲ್ಲಿ ಯಶಸ್ವಿಯೂ ಆದರು.

ಗಿಡ್ಡೇಗೌಡರು ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಬಸವನ ಮಠದವರು. ತಂದೆ ಕರೀಗೌಡ, ತಾಯಿ ನಂಜಮ್ಮ ವೃತ್ತಿ ವ್ಯವಸಾಯ. ಹಾಡುಗಾರಿಕೆ ಪ್ರವೃತ್ತಿ. ಮೊದಲು ಗಿಡ್ಡೇಗೌಡರು ಸೋಬಾನೆ ಹಾಡಲು ಪ್ರಾರಂಭಿಸಿದಾಗ ಹೆಂಗಸರೆಲ್ಲರು ಇವರನ್ನು ಛೇಡಿಸುತ್ತಿದ್ದುಂಟು. ತನ್ನ ತಾಯಿ ತೀರಿಕೊಂಡ ಮೇಲೆ ಗೌಡರು ತನ್ನ ತಾಯಿಯ ಕಂಠದಂತೆಯೇ ಅನುಕರಿಸಿ ಹಾಡಲು ಪ್ರಾರಂಭಿಸಿದರು. ಮೊದಲು ಟೀಕೆ ಮಾಡುತ್ತಿದ್ದ ಹೆಂಗಸರು ಇವರನ್ನು ತಮ್ಮೊಂದಿಗೆ ಹಾಡಲು ಸೇರಿಸಿಕೊಂಡರು. ಬರಬರುತ್ತಾ ಹೆಂಗಸರು ಹಿಮ್ಮೇಳದವರಾಗಿ ಇವರೇ ಮುಮ್ಮೇಳಗಾರರಾದರು.

ಇವರು ಮದುವೆ, ಹಸೆ, ಆರತಿ ಮುಂತಾದ ಕಾರ್ಯಕ್ರಮಗಳಲ್ಲಿ ಹಾಡಿದ್ದಾರೆ. ಅನೇಕ ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿಯೂ ಸಮ್ಮೇಳನಗಳಲ್ಲಿಯೂ ಹಾಡಿ

ಜನರಿಂದ ಮೆಚ್ಚಿಕೆಯನ್ನ ಪಡೆದವರು. ಹಾಸನ ಜಿಲ್ಲೆಯಲ್ಲಿ ಮಾತ್ರವಲ್ಲದೆ ಮೈಸೂರು, ಚಿಕ್ಕಬಳ್ಳಾಪುರ ಮುಂತಾದ ಕಡೆಗಳಲ್ಲೆಲ್ಲಾ ಹಾಡಿ ಹೊಗಳಿಸಿಕೊಂಡಿದ್ದಾರೆ. ಇವರಿಂದ ಹಲವಾರು ಹೆಣ್ಣು ಮಕ್ಕಳು ಸೋಬಾನೆ ಹಾಡುಗಳನ್ನು ಕಲಿತಿದ್ದಾರೆ. ಈ ಕಲೆ ಹೆಣ್ಣು-ಗಂಡು ಎಂಬ ಭೇದ ಭಾವವಿಲ್ಲದೆ ಎಲ್ಲರಲ್ಲಿಯೂ ಉಳಿದು ಬೆಳೆದುಕೊಂಡು ಬರಬೇಕೆಂಬ ಹಂಬಲ ಇವರದು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಪ್ರಾರಂಭವಾದ ವರ್ಷದಲ್ಲಿ (೧೯೮೦ ರಲ್ಲಿ) ಇವರಿಗೆ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ.

**ಗಿಡ್ಡೇಗೌಡ, ಬಸವನಪುರ,**
**ಕಸಬಾ ಹೋಬಳಿ,**
**ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.**

# ಗೊಲ್ಲರಹಟ್ಟಿ ಸೂರಪ್ಪ

ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಶಿವಪುರದ ಗೊಲ್ಲರಹಟ್ಟಿ ಸೂರಪ್ಪನವರ ಊರು. ಜನನ ೧೯೨೨ರಲ್ಲಿ. ತಂದೆ ಚಿಕ್ಕಯ್ಯ, ತಾಯಿ ಪಾಲಮ್ಮ. ಗೊಲ್ಲ ಜನಾಂಗಕ್ಕೆ ಸೇರಿದವರು. ಗೊಲ್ಲರಲ್ಲಿ ಊರುಗೊಲ್ಲರು, ಕಾಡುಗೊಲ್ಲರು ಎಂಬ ಎರಡು ವರ್ಗಗಳಲ್ಲಿದ್ದು, ಕಾಡುಗೊಲ್ಲರು ಬುಡಕಟ್ಟು ಗುಂಪಿಗೆ ಸೇರುತ್ತಾರೆ. ಇವರಲ್ಲಿ ಕಟ್ಟುನಿಟ್ಟಾದ ಸಂಪ್ರದಾಯ, ಆಚರಣೆಗಳುಂಟು. ಇವರುಗಳ ವೃತ್ತಿ ಪಶುಪಾಲನೆ, ಶ್ರೀ ಕೃಷ್ಣನ ವಂಶಸ್ಥರು ನಾವು, ಯಾದವರು ಎಂದು ತಮ್ಮನ್ನು ಕರೆದುಕೊಳ್ಳುತ್ತಾರೆ.. ಈ ಎರಡು ವರ್ಗದ ಜನರಲ್ಲಿಯೂ ಅಪಾರವಾದ ಜನಪದ ವೀರ ನಾಯಕನೆಂದರೆ ಜುಂಜಪ್ಪ. ಜುಂಜಪ್ಪನ ಬಗ್ಗೆ ಹಾಡುವ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅದೊಂದು ಮಹಾಕಾವ್ಯದಷ್ಟು ವಸ್ತುವಿರುವಂತಹದ್ದು. ಚಿತ್ರದುರ್ಗ ಜಿಲ್ಲೆಯಲ್ಲಿ ಗೊಲ್ಲರು ಅಪಾರ ಸಂಖ್ಯೆಯಲ್ಲಿರುವುದನ್ನು ಕಾಣುತ್ತೇವೆ. ಈ ಗೊಲ್ಲರು ಹಾಡುವಾಗ ಬಳಸುವ ವಾದ್ಯವೆಂದರೆ ಅದು ಬಿದಿರಿನಿಂದ ಮಾಡಿರುವ ಗಣೆ.

ಸೂರಪ್ಪ ವೃತ್ತಿಯಲ್ಲಿ ವ್ಯವಸಾಯ ಮತ್ತು ಪಶುಪಾಲನೆ. ಜೊತೆಗೆ ವಂಶಪಾರಂಪರ್ಯವಾಗಿ ಬಂದಿರುವ ಕಾವ್ಯ ಮತ್ತು ಕಥೆಗಳು. ಯಾವುದೇ ವಿದ್ಯಾಭ್ಯಾಸವಿಲ್ಲದೆ ಇದ್ದರೂ, ಯುವಕನಲ್ಲಿದ್ದ ಆಸಕ್ತಿಯನ್ನು ಕಂಡು ಇವರ ಹಟ್ಟಿಯಲ್ಲಿಯೇ ಇದ್ದ ಸೂರಪ್ಪನವರು ಇವರಿಗೆ ಹಾಡುಗಾರಿಕೆಯನ್ನು ಕಲಿಸಿದರು. ಜುಂಜಪ್ಪನ ಕಥೆಯನ್ನು ಕಲಿತ ಇವರು ಅದನ್ನು ಹಾಡುವಾಗ ವಾದ್ಯವಾದನವಾಗಿ ಗಣೆಯನ್ನು ಬಳಸುತ್ತಾರೆ. ಉಳಿದಂತೆ ಬೇರೆ ಜನಪದ ಗೀತೆಗಳನ್ನು ಹಾಡುವಾಗ ತಂಬೂರಿ, ದಮ್ಮಡಿ, ಚಿಟಿಕೆ ಮುಂತಾದವುಗಳನ್ನು ಬಳಸುತ್ತಾರೆ.

ಇವರು ಮುಖ್ಯವಾಗಿ ಹಾಡುವ ಕಥೆಗಳೆಂದರೆ ಜುಂಜಪ್ಪನ ಕಥೆ, ಬಾಲನಾಗಮ್ಮನ ಕಥೆ, ಪುಣ್ಯವಂತೆ-ಗುಣವಂತೆ ಕಥೆ, ರುದ್ರಕುಮಾರ-ಚಂದ್ರಕುಮಾರ ಕಥೆ, ಮಾಗಡಿ

ಕೆಂಪೇಗೌಡನ ಕಥೆ ಹಾಗೂ ಬಳ್ಳಾರಿಯ ತತ್ವಪದಗಳು. ಸೂರಪ್ಪನವರು ಹಾಸನ ಜಿಲ್ಲೆಯಲ್ಲಿ ಮಾತ್ರವಲ್ಲದೆ ಬೆಂಗಳೂರು, ಮೈಸೂರು, ಚಿತ್ರದುರ್ಗ, ತರೀಕೆರೆ, ಚುಂಚುನಗಿರಿ ಮುಂತಾದ ಕಡೆಗಳಲ್ಲೆಲ್ಲಾ ಹಾಡಿ ಜನಮೆಚ್ಚುಗೆಯನ್ನು ಗಳಿಸಿದ್ದಾರೆ. ಜೊತೆ ಅಕ್ಕಪಕ್ಕದ ಗ್ರಾಮದವರು ಹಬ್ಬ ಹರಿದಿನಳಗಲ್ಲಿ ಕರೆದು ಇವರಿಂದ ಹಾಡಿಸಿರುವುದುಂಟು. ಸಿನಿಮಾದಿಂದ ಈ ಕಲೆ ಉಳಿಯಬೇಕಾದರೆ ರಂಗ ಮಂದಿರಗಳು ಬೇಕು ಎಂಬುದು ಇವರ ಆಶಯ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೧ರಲ್ಲಿ ಇವರಿಗೆ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ.

**ಸೂರಪ್ಪ ಗೊಲ್ಲರ ಹಳ್ಳಿ,**<br>
**ಶಿವಪುರ ಅಂಚೆ, ಅರಸೀಕೆರೆ ತಾಲೂಕು.**<br>
**ಹಾಸನ ಜಿಲ್ಲೆ.**

## ವಾದ್ಯದ ಚೆಲುವಯ್ಯ

ಹಾಸನ ಜಿಲ್ಲೆಯಲ್ಲಿ ಚಿಟ್ಟಿಮೇಳ ಎಂದರೆ ಚೆಲುವಯ್ಯ, ಚೆಲುವಯ್ಯ ಎಂದರೆ ಚಿಟ್ಟಿಮೇಳ ಎನ್ನುವಷ್ಟರ ಮಟ್ಟಿಗೆ ಹೆಸರು ಪಡೆದಿದ್ದವರು ಚೆಲುವಯ್ಯ. ಇವರು ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಹಾರನಹಳ್ಳಿ ಗ್ರಾಮದವರು. ಹಾರನಹಳ್ಳಿ ರಾಜಕೀಯಕ್ಕೆ ಹೆಸರು ವಾಸಿಯಾಗಿರುವಂತೆ ಜನಪದ ಕಲೆಗೆ, ಶಿಲ್ಪಕಲೆಗೆ, ದೇವಾಲಯ ಹೀಗೆ ನಾನಾ ಕ್ಷೇತ್ರಗಳಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಚೆಲುವಯ್ಯ ಅವರು ಸುಮಾರು ೭೫ನೇ ವಯಸ್ಸಿನಲ್ಲಿದ್ದಾಗಲೇ ವಿಧಿವಶರಾಗಿದ್ದಾರೆ. ತಂದೆ ಚಲುವಪ್ಪ, ತಾಯಿ ರಂಗಮ್ಮ, ಹರಿಜನ ಜನಾಂಗಕ್ಕೆ ಸೇರಿದವರು. ಚೆಲುವಯ್ಯನವರು ಚಿಟ್ಟಿಮೇಳವನ್ನು ಕಲಿತದ್ದು ಮಾರಪ್ಪ, ಮರಿಯಪ್ಪ ಮತ್ತು ಮುರುಂಡಿಯ ಕುರುಬರ ಕರಡೆ ಲಕ್ಕಣ್ಣನವರಿಂದ. ಮುಂದೆ ತನ್ನ ಗುರುವನ್ನು ಮೀರಿಸುವಂತೆ ತನ್ನ ಪ್ರತಿಭಾ ಕೌಶಲ್ಯದಿಂದ ಪ್ರಸಿದ್ಧರಾದರು. ಚಿಟ್ಟಿಮೇಳದ ಕೇಂದ್ರ ವ್ಯಕ್ತಿಯೇ ಚೆಲುವಯ್ಯ.

ಚೆಲುವಯ್ಯ ಇವತ್ತು ನಮ್ಮ ಮುಂದೆ ಇಲ್ಲ. ಆದರೆ ಚೆಲುವಯ್ಯ ಬಾರಿಸುತ್ತಿದ್ದ "ಚೆಲುವಯ್ಯ ಚೆಲುವು ತಾನೆ ತಂದಾನ, ಮಾಯಾರುಪೆ ಕೋಲನ್ನ ಕೋಲೆ" ಎನ್ನುವ ಹಾಡಂತು ತಮ್ಮ ಮನದಲ್ಲಿ ಮಾಸದೆ ಉಳಿದಿದೆ ಎಂದು ಇವರ ಸಮಕಾಲೀನರು ಇಂದಿಗೂ ಸ್ಮರಿಸುತ್ತಾರೆ. ಚೆಲುವಯ್ಯ ಮೌರಿಯನ್ನು ಊದುತ್ತಿದ್ದರೆ ಜನರು ಹುಡುಗರು ದೊಡ್ಡವರು ಎನ್ನದೆ ಹುಚ್ಚೆದ್ದು ಕುಣಿಯುತ್ತಿದ್ದರಂತೆ. ಅಂತಹ ಆಕರ್ಷಕವಾದ ಜನಪದ ಹಾಡುಗಳನ್ನು ತಮ್ಮ ಮೌರಿಯಿಂದ ಊದುತ್ತಿದ್ದರಂತೆ.

ಚೆಲುವಯ್ಯನವರು ಮದುವೆ, ದೇವರ ಉತ್ಸವ ಮುಂತಾದ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿ ದೆಹಲಿ, ಮುಂಬೈ, ಮದ್ರಾಸು ಮುಂತಾದ ಹೊರನಾಡುಗಳಲ್ಲಿಯೂ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ. ಇಂದೂ ಕೂಡ ಇವರ

ಶಿಷ್ಯರು ಈ ಕಲೆಯನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಹಾರನಹಳ್ಳಿಯ ಕೀರ್ತಿ ಇಂದಿಗೂ ಚೆಲುವಯ್ಯನವರ ಕಾಲದಂತೆಯೇ ಉಳಿದುಕೊಂಡು ಬಂದಿರುವುದು ಸಂತೋಷದಾಯಕ ವಿಚಾರವಾಗಿದೆ.

ಚಿಟ್ಟಿ (ಚಿಟ್) ಮೇಳವು ಹರಿಜನರಲ್ಲಿ ಇರುವ ಒಂದು ಪ್ರಮುಖ ವಾದ್ಯ ಪ್ರಕಾರ. ಹರಳನ್ನು ಹುರಿದಾಗ ಚಿಟ್ ಎನ್ನುವ ಶಬ್ದ ಬರುತ್ತದೆ. ದಪ್ಪ ಹರಳು (ಮರ ಹರಳು) ಹುರಿದರೆ ದೊಡ್ಡ ಶಬ್ದ ಬರುತ್ತದೆ. ಸಣ್ಣ ಹರಳು (ಚಿಟ್ಟಿಹರಳು) ಹುರಿದರೆ ಸಣ್ಣದಾಗಿ ಚಿಟ್ ಎಂಬ ಶಬ್ದ ಬರುತ್ತದೆ. ಚಿಟ್ ಹರಳು ಇದ್ದ ಹಾಗೆ ಚಿಟ್ ಮೇಳ ಎಂಬ ಮಾತು ಇದೆ. ಈ ಕಲೆ ಮುಖ್ಯವಾಗಿ ಹಾಸನ ಜಿಲ್ಲೆಯಲ್ಲಿ ಅರಸೀಕೆರೆ ತಾಲ್ಲೂಕು, ಹಾಸನ ತಾಲ್ಲುಕೂಗಳಲ್ಲಿ ಪ್ರಮುಖವಾಗಿರುವುದು ತಿಳಿಯುತ್ತದೆ. ಇವರು ಜಾನಪದ ಸಮ್ಮೇಳನಗಳು, ಮೈಸೂರಿನಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನ, ರೋಟರಿ ಉತ್ಸವ ಮುಂತಾದವುಗಳಲ್ಲಿ ಭಾಗವಹಿಸಿದ್ದಾರೆ. ಈಗ ಬದುಕಿದ್ದರೆ ಇವರಿಗೆ ಸುಮಾರು ೬೭ ವರ್ಷ ವಯಸ್ಸಾಗುತ್ತಿತ್ತು. ಇವರ ಕಲಾ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೭ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ.

**ಚೆಲುವಯ್ಯ, ಹಾರನಹಳ್ಳಿ,**
**ಹಾರನಹಳ್ಳಿ ಅಂಚೆ, ಕಸಬಾ ಹೋಬಳಿ,**
**ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.**

## ಇಬ್ಬೀಡು ಎಸ್. ಸಗುನನಾಯ್ಕ

ಕರಪಾಲ ಕಲೆ ದಕ್ಷಿಣ ಕರ್ನಾಟಕದ ಪ್ರಸಿದ್ಧ ಜನಪದ ಕಲೆ. ಇದರಲ್ಲಿ ಮೂರು ಜನರು ಕಲಾವಿದರಿದ್ದು, ಒಬ್ಬ ಮುಮ್ಮೇಳಗಾರನಾಗಿ ಹಾಡು ಮತ್ತು ಮಾತುಗಳನ್ನು ಹೇಳಿದಾಗ ಹಿಮ್ಮೇಳದಲ್ಲಿ ಇಬ್ಬರು ಶಿಷ್ಯರಿದ್ದು ಅದನ್ನು ಮನರುಚ್ಚರಿಸುತ್ತಾ ಹೋಗುತ್ತಾರೆ. ವಿಶೇಷವಾಗಿ ಹಬ್ಬ ಹರಿದಿನಗಳಲ್ಲಿ ಕರಪಾಲ ಕತೆಯನ್ನು ಮಾಡಿಸುತ್ತಾರೆ. ಹಾಸನ ಜಿಲ್ಲೆಯ ಇಬ್ಬೀಡು ಒಂದು ಕಾಲಕ್ಕೆ ಕರಪಾಲ ಕಲೆಗೆ ತುಂಬಾ ಪ್ರಸಿದ್ಧಿ ಪಡೆದಿತ್ತು. ಕರಪಾಲವೆಂದರೆ ಇಬ್ಬೀಡು. ಇಬ್ಬೀಡೆಂದರೆ ಕರಪಾಲ ಎನ್ನುವಷ್ಟರ ಮಟ್ಟಿಗೆ ತನ್ನನ್ನು ಈ ಊರು ಗುರುತಿಸಿಕೊಂಡಿತ್ತು. ಹಾಸನ ಜಿಲ್ಲೆಯನ್ನು ಬಿಟ್ಟರೆ ತುಮಕೂರು ಜಿಲ್ಲೆಯಲ್ಲಿ ಈ ಕಲೆ ಪ್ರಸಿದ್ಧಿಯಾಗಿದ್ದು, ಈಗ ಅಲ್ಲಿ ಚೆನ್ನಾಗಿದೆ. ಹಾಸನ ಜಿಲ್ಲೆ ಹಿಂದೆ ಬಿದ್ದಿದೆ. ಈ ಕಲೆಯು ಇಬ್ಬೀಡಿನಲ್ಲಿ ಪ್ರಸಿದ್ಧರಾಗಲು ಸಗುನಾನಾಯ್ಕರೆ ಮುಖ್ಯ ಕಾರಣ. ಇವರು ಕರಪಾಲ ಕಲೆಯನ್ನು ಪ್ರದರ್ಶಿಸುವಾಗ ನೃತ್ಯ ಮತ್ತು ಹಾಡುಗಳು ಮನ ಮುಟ್ಟುವಂತೆ ಇರುತ್ತಿದ್ದವು. ಕಥೆ ಮಾಡುತ್ತಿದ್ದುದು ಇವರ ವೈಶಿಷ್ಟ್ಯವೂ ಆಗಿತ್ತು.

ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಮಾದಿಹಳ್ಳಿ ಹೋಬಳಿಯ ಇಬ್ಬೀಡು ಗ್ರಾಮದವರು ಸಗುನನಾಯ್ಕ ಅವರು, ವಯಸ್ಸು ೮೫ ವರ್ಷ. ನಾಯ್ಕ ಎಂದು ಕರೆಸಿಕೊಂಡರೂ ಇವರೂ ಕೂಡ ಒಕ್ಕಲಿಗರೆ. ಇವರ ಎಲ್ಲಾ ಸಂಬಂಧಗಳು ಕೂಡ ಒಕ್ಕಲಿಗರೊಂದಿಗೆ ಆಗಿವೆ. ಸಗುನನಾಯ್ಕರಿಗೆ ಈ ಕಲೆ ವಂಶಪಾರಂಪರ್ಯವಾಗಿ ಬಂದಿರುವುದಲ್ಲ. ಇಬ್ಬೀಡಿನ ಬಸವೇಗೌಡರಿಂದ ಬಾಲ್ಯದಲ್ಲಿ ಕಲಿತೆ ಎಂದು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಸುಮಾರು ೬೫ ವರ್ಷಗಳಿಂದ ಕರಪಾಲ ಕಲೆಯನ್ನು ಆಸ್ಥೆ ವಹಿಸಿ ನಡೆಸಿಕೊಂಡು ಬಂದಿದ್ದಾರೆ. ಇವರು ವೃತ್ತಿಯಲ್ಲಿ ವ್ಯವಸಾಯಗಾರರಾಗಿದ್ದು ಕರಪಾಲ ಕಲೆಯನ್ನು ಹವ್ಯಾಸವಾಗಿ ಬೆಳೆಸಿಕೊಂಡವರು. ಆದರೆ ಆರ್ಥಿಕವಾಗಿ ಅಂತಹ ಉತ್ತಮ ಸ್ಥಿತಿಯಲ್ಲೇನು ಇಲ್ಲ.

ಇವರು ಕರಪಾಲದಲ್ಲಿ ಹಾಡುವ ಕಥೆಗಳೆಂದರೆ ನೀಲಕಂಠ ರೂಪಾವತಿ ಕಥೆ, ಚಿತ್ರಶೇಖರ ಕಥೆ, ಕಾಡುಸಿದ್ಧಮ ದೇವರ ಕಥೆ, ಬಾಲನಾಗಮ್ಮನ ಕಥೆ, ಮಂತ್ರಿ ಕಲ್ಲಾಗುವ ಕಥೆ, ನಾಗಕನ್ನಿಕಾ ಕಥೆ, ಪದ್ಮಾವತಿದೇವಿಯ ಕಥೆ ಮುಖ್ಯವಾದವುಗಳು. ಇವರ ಕಲಾಪ್ರದರ್ಶನ ಹಾಸನ ಜಿಲ್ಲೆಯಾದ್ಯಂತ ನಡೆಸಿರುವುದಲ್ಲದೆ ಚಿಕ್ಕಮಗಳೂರು, ಮೈಸೂರು ಜಿಲ್ಲೆಗಳಲ್ಲಿಯೂ ಪ್ರದರ್ಶನ ನೀಡಿದ್ದಾರೆ. ಒಮ್ಮೆ ಮೈಸೂರಿನ ಅರಸರಾದ ಶ್ರೀಜಯಚಾಮರಾಜೇಂದ್ರ ಒಡೆಯರ್ ಅವರ ಆಸ್ಥಾನದಲ್ಲಿ ಕಲೆ ಪ್ರದರ್ಶಿಸುತ್ತಿದ್ದಾಗ ಒಂದುವರೆ ಗಂಟೆ ಮಾತ್ರ ಅವಕಾಶ ಸಿಕ್ಕಿತ್ತು. ಆದರೆ ಮಹಾರಾಜರು ಇವರ ಕಲೆಗಾರಿಕೆಗೆ ಮೆಚ್ಚಿ ತೃಪ್ತಿಯಾಗುವತನಕ ಕಲಾ ಪ್ರದರ್ಶನಕ್ಕೆ ಅವಕಾಶ ನೀಡಿದರಂತೆ. ಕರಪಾಲ ಕಲೆಯಲ್ಲಿ ಕೈ ಕರಣಿಗೆ ಮಾಡುವುದರಲ್ಲಿ ನಿಸ್ಸೀಮರಾಗಿದ್ದರು.

ಸಗುನನಾಯ್ಕರು ಕೇವಲ ಕರಪಾಲದಲ್ಲಿ ಮಾತ್ರವಲ್ಲದೆ ಯಕ್ಷಗಾನ, ಜನಪದ ಹಾಡುಗಾರಿಕೆ, ಜನಪದ ಕಥೆ ಹೇಳುವುದರಲ್ಲಿಯೂ ಪ್ರವೀಣರು. ಇವರು ಹೇಳಿರುವ ಜನಪದ ಕಥೆಗಳನ್ನು ಡಾ. ವೈ.ಸಿ. ಭಾನುಮತಿಯವರು ಸಂಗ್ರಹಿಸಿ "ಇಬ್ಬೀಡಿನ ಜನಪದ ಕಥೆಗಳು" ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಇವರ ಕಲೆಗಾರಿಕೆಯನ್ನು ಕಂಡು ಎಚ್. ಎಲ್. ನಾಗೇಗೌಡರು, ಹಾ. ಮಾ. ನಾಯಕರು, ಜೀ.ಶಂ. ಪರಮಶಿವಯ್ಯ ಎಲ್ಲರೂ ಇವರಿಗೆ ವಿಶೇಷ ಗೌರವಗಳನ್ನು ನೀಡಿ ಸತ್ಕರಿಸಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೬ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಸರ್ಕಾರದಿಂದ ಮಾಸಾಶನವೂ ಬರುತ್ತಿದೆ. ಜೊತೆಗೆ ಹಲವಾರು ಸಂಘ ಸಂಸ್ಥೆಗಳಿಂದಲೂ ಪ್ರಶಸ್ತಿ, ಗೌರವಗಳು ದೊರೆತಿವೆ. ಈಗ ಪಾರ್ಶ್ವವಾಯು ರೋಗದಿಂದ ನರಳುತ್ತಿದ್ದು, ಸರಿಯಾಗಿ ಮಾತನಾಡಲೂ ಕೂಡ ಆಗುತ್ತಿಲ್ಲ.

ಎಸ್. ಸಗುನನಾಯ್ಕ,
ಇಬ್ಬೀಡು,
ಇಬ್ಬೀಡು ಅಂಚೆ, ಮಾದಿಹಳ್ಳಿ ಹೋಬಳಿ,
ಬೇಲೂರು ತಾಲೂಕು, ಹಾಸನ ಜಿಲ್ಲೆ.

# ತಂಬೂರಿ ನರಸಪ್ಪ

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಬಾಗೂರು ಹೋಬಳಿಯ ಬಾಳೆಹಳ್ಳಿಯವರು ತಂಬೂರಿ ನರಸಪ್ಪ. ಇವರ ಜನನ ಸುಮಾರು ೧೯೨೨ ಎಂದು ಹೇಳಬಹುದು. ತಂಬೂರಿ ಕಲೆಯು ಒಂದು ರೀತಿಯಲ್ಲಿ ಸಾಂಸ್ಕೃತಿಕ 'ಪ್ರಸಾರವಾಹ ವಿದ್ದಂತೆ. ಮನೆಯಿಂದ ಮನೆಗೆ ಹಾಡುಗಳನ್ನು ಹಾಡುತ್ತ ಹೋಗುವ ಇವರು ಆಧ್ಯಾತ್ಮಿಕ ವಿಚಾರದ ಕಡೆಗೆ ಜನರನ್ನು ಹೆಚ್ಚು ಸೆಳೆಯುವುದುಂಟು. ಜೀವನ ತತ್ವಗಳನ್ನು ಜನರ ಮನಸ್ಸಿಗೆ ಹಿಡಿಯುವಂತೆ ಮಾಡಲು ತಂಬೂರಿಯವರು ತಮ್ಮ ಹಾಡುಗಳನ್ನು ಮಾಧ್ಯಮವನ್ನಾಗಿ ಮಾಡಿಕೊಂಡಿರುವುದು ತಿಳಿಯುತ್ತದೆ.

ಈತ ಹರಿಜನ ಜನಾಂಗಕ್ಕೆ ಸೇರಿದವರಾಗಿದ್ದು ಸುಮಾರು ಹತ್ತಕ್ಕೂ ಹೆಚ್ಚು ಕಥನ ಗೀತೆಗಳನ್ನು ಹಾಡುತ್ತಿದ್ದರು. ಇವರು ಹಾಡುತ್ತಿದ್ದ ಪ್ರಸಿದ್ಧ ಕಾವ್ಯಗಳೆಂದರೆ ಶಿವಶಂಕರ ರಾಜ, ಲೋಹಿತಕುಮಾರ, ಬಸವ ಕುಮಾರ, ಶೆಟ್ಟಿಗಾರ ತಿಮ್ಮಪ್ಪ, ತರೀಕೆರೆ ರಂಗರಾಯ ಮುಂತಾದವು. ಇವರ ಅನೇಕ ಕಾವ್ಯಗಳನ್ನು ೧೯೬೫ರಷ್ಟು ಹಿಂದೆಯೇ ಜೀ.ಶಂ. ಪರಮಶಿವಯ್ಯನವರು ಸಂಗ್ರಹಿಸಿದ್ದಾರೆ.

ನರಸಪ್ಪನವರ ಜೀವನ ಬಹಳ ಬಡತನದಲ್ಲಿ ಸಾಗಿದ್ದು, ಜೀವನೋಪಾಯಕ್ಕಾಗಿ ಭಿಕ್ಷಾಟನೆಯನ್ನು ಕೈಗೊಂಡಿದ್ದವರು. ಉಳಿದ ಸಂದರ್ಭಗಳಲ್ಲಿ ಕೂಲಿ ಮಾಡುತ್ತಾ ಜೀವನವನ್ನು ದೂಡುತ್ತಿದ್ದವರು. ಅಲ್ಪ ಸ್ವಲ್ಪ ಜಮೀನು ಇದ್ದರೂ ಅದು ಹೆಂಡತಿ ಮಕ್ಕಳನ್ನು ಸಾಕಲು ಸಾಲುತ್ತಿರಲಿಲ್ಲ. ಇವರ ಹಾಡುಗಳನ್ನು ಕೇಳಿದ ಊರಿನ ಜನರು ಅವರೇ ಉದಾರತೆಯಿಂದ ದವಸ-ಧಾನ್ಯಗಳನ್ನು ಕೊಡುತ್ತಿದ್ದರು. ಬಾಗೂರು ಹೋಬಳಿಯ ಹಲವಾರು ಹಳ್ಳಿಗಳಲ್ಲಿ ಇವರ ತಂಬೂರಿ ಜೀಗುಡುತ್ತಾ ಸಾಗುತ್ತಿದ್ದುದನ್ನು ಇಂದಿಗೂ ಆ ಹಳ್ಳಿಯ ಜನರು ಸ್ಮರಿಸಿಕೊಳ್ಳುತ್ತಾರೆ. ಇವರಿಗೆ ೧೯೮೭ನೇ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಕಲಾವಿದರ ಪ್ರಶಸ್ತಿ ದೊರಕಿದೆ.

**ನರಸಪ್ಪ, ಬಾಳೆಹಳ್ಳಿ, ಬಾಗೂರು ಹೋಬಳಿ,**
**ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.**

## ಗೊಳೇನಹಳ್ಳಿ ತಿಮ್ಮಯ್ಯ

ತಂಬೂರಿ ಲೌಕಿಕ ವೃತ್ತಿ ಗಾಯಕ ವರ್ಗಕ್ಕೆ ಸೇರುವಂತಹದ್ದು. ಹೆಚ್ಚಾಗಿ ಹರಿಜನರಲ್ಲಿ ಎಡಗೈ ವರ್ಗದವರು ಮಾತ್ರ ಈ ಪರಂಪರೆಯಲ್ಲಿ ಕಂಡು ಬರುತ್ತಾರೆ. ತಂಬೂರಿಯವರೆಲ್ಲ ಹೆಚ್ಚಾಗಿ ಬಡತನದ ಬೇಗೆಯಲ್ಲಿ ಬೆಂದು ಭಿಕ್ಷಾಟನೆಯನ್ನು ಅವಲಂಬಿಸಿರುವವರೆ ಹೆಚ್ಚು. ಇದನ್ನು ನೋಡಿದರೆ ಕಲೆಗೂ ಬಡತನಕ್ಕೂ ಅಂಟಿರುವ ನಂಟೇನೋ ಎಂದೆನಿಸುತ್ತದೆ. ತಮ್ಮ ಬದುಕಿಗಾಗಿ, ಹೊಟ್ಟೆ-ಬಟ್ಟೆಯ ಚಿಂತೆಯನ್ನು ಬೆನ್ನಿಗೆ ಕಟ್ಟಿಕೊಂಡೇ ಊರೂರು ಅಲೆಯುವ ಇವರಲ್ಲಿ ಅಪಾರವಾದ ಜನಪದ ಸಾಹಿತ್ಯ ಭಂಡಾರವೇ ತುಂಬಿ ತುಳುಕುತ್ತದೆ. ಅಂತಹ ಅಪೂರ್ವವಾದ ಸಾಹಿತ್ಯ ಭಂಡಾರವನ್ನೇ ತುಂಬಿಕೊಂಡಿರುವ ಕಲಾವಿದ ತಿಮ್ಮಯ್ಯ.

ತಿಮ್ಮಯ್ಯ ತಂಬೂರಿ ಕಲಾವಿದನಾಗಿದ್ದು, ಇವರು ಈಗ ಬದುಕಿದ್ದರೆ ಸುಮಾರು ೮೫ ವರ್ಷಗಳಾಗುತ್ತಿದ್ದವು. ಈತ ಹಾಸನ ಜಿಲ್ಲೆ ಮತ್ತು ತಾಲ್ಲೂಕಿನ, ಹಾಸನದಿಂದ ಕೇವಲ ಆರೇಳು ಮೈಲಿ ದೂರವಿರುವ ಗೊಳೇನಹಳ್ಳಿ ಗ್ರಾಮದವರು. ಇವರಿಗೆ 'ಜವಾನ' ಎಂಬ ಅಡ್ಡ ಹೆಸರಿತ್ತಂತೆ. ಇವರನ್ನು ಯಾರು ತಿಮ್ಮಯ್ಯ ಎಂದು ಕರೆಯುತ್ತಿರಲಿಲ್ಲ. ಜವಾನ ಎಂದೇ ಕರೆಯುವುದು ವಾಡಿಕೆ. ಜವಾನ ಎಂಬ ಹೆಸರು ಬರಲು ಕಾರಣ ಇವರು ಗೌಡರೊಬ್ಬರ ಮನೆಯಲ್ಲಿ ಜೀತಕ್ಕಿದ್ದರಂತೆ ಆದ್ದರಿಂದ ಇವರಿಗೆ 'ಗೌಡರ ಮನೆಯ ಜವಾನ' ಎಂದೇ ಹೆಸರು ಉಳಿದುಕೊಂಡು ಬಂದಿತು ಎಂದು ಈತನ ಮನೆಯವರು ಹೇಳುತ್ತಾರೆ.

ತಿಮ್ಮಯ್ಯನಿಗೆ ಗುರು, ಇವರದೇ ಆದ ಮಾದಿಗಕೇರಿಯಲ್ಲಿ ತಂಬೂರಿ ಗಾಯನ ಮಾಡುತ್ತಿದ್ದ ಮಲ್ಲಯ್ಯ ಎಂಬುವರು. ಮಲ್ಲಯ್ಯ ತಂಬೂರಿ ಕಥೆ ಮಾಡುತ್ತಿದ್ದು, ಊರೂರಿಗೆ ರಾತ್ರಿ ಸಮಯದಲ್ಲಿ ಕಥೆ ಮಾಡಲು ಹೋಗುವಾಗ ಬಹಳ ಚೂಟಿಯಾಗಿದ್ದ ತಿಮ್ಮಯ್ಯನನ್ನು ಗುಮ್ಮಟೆ ಬಾರಿಸುತ್ತಾ ಹಿಮ್ಮೇಳ ಹಾಡುವುದಕ್ಕಾಗಿ ಕರೆದೊಯ್ಯುತ್ತಿದ್ದರಂತೆ.

ಆನಂತರ ತಿಮ್ಮಯ್ಯನೇ ಮುಮ್ಮೇಳಗಾರನಾಗಿ ಗುರುವನ್ನು ಮೀರಿಸುವಂತಹ ಶಿಷ್ಯನಾಗಿ ಬೆಳೆದದ್ದು ವೈಶಿಷ್ಟ್ಯವೇ ಆಗಿದೆ.

ಈತ ಸಾಮಾನ್ಯವಾದ ಎತ್ತರವುಳ್ಳ, ಲವಲವಿಕೆಯಿಂದ ಸಣಕಲ ವ್ಯಕ್ತಿಯಾಗಿದ್ದರೆಂದು ಹೇಳುತ್ತಾರೆ. ತಿಮ್ಮಯ್ಯ ಬಡ ಕೃಷಿಕ. ಒಂದೆರಡು ಎಕರೆ ಹೊಲವನ್ನು ಹೊಂದಿದ್ದು, ಮುರುಕಲು ಗುಡಿಸಿಲಿನಲ್ಲಿ ವಾಸಿಸುತ್ತಿದ್ದವರು. ಕೃಷಿ ಜೊತೆಗೆ ಭಿಕ್ಷಾಟನೆಯು ಪ್ರವೃತ್ತಿಯಾಯಿತು. ತಂಬೂರಿ ಹಿಡಿದು ಹೊರಟರೆಂದರೆ ಊಟ, ತಿಂಡಿ, ಬೀಡಿ ಹಾಗು ಸೇಂದಿ ಅಂಗಡಿ ಖರ್ಚಿಗಂತು ಕೊರತೆಯಾಗುತ್ತಿರಲಿಲ್ಲವಂತೆ. ಹಣ ಕೊಡದವರು ರಾಗಿ, ಭತ್ತ, ಕಾಳುಕಡ್ಡಿ ಜೊತೆಗೆ ಹಳೆಯ ಸೀರೆ, ಪಂಚೆ, ಷರಟುಗಳನ್ನು ನೀಡುತ್ತಿದ್ದರಂತೆ. ಸುಗ್ಗಿಯ ಕಾಲದಲ್ಲಂತೂ ಭಿಕ್ಷೆ ಸುಭಿಕ್ಷೆಯಾಗುತ್ತಿತ್ತು ಎಂದು ಹೇಳುತ್ತಾರೆ. ತಿಮ್ಮಯ್ಯನಿಗೆ ಇಬ್ಬರು ಹೆಂಡರಿದ್ದು ಕೊನೆಯ ಕಾಲದಲ್ಲಿ ಕಿರಿ ಹೆಂಡತಿ ತೀರಿ ಹೋಗಿದ್ದಳು. ಹಿರಿ ಹೆಂಡತಿ ಕೂಲಿ ಕೆಲಸಮಾಡಿಕೊಂಡು ಜೀವನ ಸಾಗಿಸುತ್ತಿದ್ದಳು.

ಕಂಸಾಳೆ, ನೀಲಗಾರರಂತೆ ತಂಬೂರಿಯವರ ಕಾವ್ಯಗಳೂ ಕೂಡ ದೀರ್ಘವಾದವುಗಳೆ, ತಿಮ್ಮಯ್ಯ ದೀರ್ಘವಾದ ಸುಮಾರು ಹದಿಮೂರರಿಂದ ಹದಿನೈದು ಕಾವ್ಯಗಳನ್ನು ಹಾಡುತ್ತಿದ್ದರಂತೆ. ಅವುಗಳಲ್ಲಿ ಬಾಲನಾಗಮ್ಮ, ಗುಣಸಾಗರಿ, ಕೆರೆಹೊನ್ನಮ್ಮ, ರುದ್ರಕುಮಾರ, ಲೋಹಿತ ಕುಮಾರ, ಗಜಮೋಹಿನಿ ಮುಂತಾದವುಗಳು. ಗಜಮೋಹಿನಿ ಕಥೆಯನ್ನು ಬಿಟ್ಟು ಉಳಿದೆಲ್ಲ ಕಥೆಗಳು ಬೇರೆಡೆಯಲ್ಲೆಲ್ಲಾ ದೊರಕುತ್ತವೆ. ಆದರೆ 'ಗಜಮೋಹಿನಿ' ಕಥೆಯು ಮಾತ್ರ ಹಾಸನ ಜಿಲ್ಲೆಯನ್ನು ಬಿಟ್ಟರೆ ಬೇರೆ ಎಲ್ಲಿಯೂ ದೊರಕುವುದಿಲ್ಲ. ಈ ಗಜಮೋಹಿನಿ ಕಥೆಯೇ ಗಜಾವತಿ ಎಂಬ ಹೆಸರಿನಲ್ಲಿಯೂ ಹಾಸನ ಜಿಲ್ಲೆಯ ಬೇರೆಡೆಯಲ್ಲಿ ದೊರಕುತ್ತದೆಂದು ಜೀಶಂಪ ಅವರು ಹೇಳಿದ್ದಾರೆ. ಚನ್ನರಾಯ ಪಟ್ಟಣ ತಾಲ್ಲೂಕಿನ ಶಿವಪುರದಲ್ಲಿಯ ಕಾಡುಗೊಲ್ಲರ ಸೂರಪ್ಪ ತಂಬೂರಿ, ಗುಮಟೆ ಇಲ್ಲದೆ ಗಜಾವತಿ ಕಥೆಯನ್ನು ಹೇಳುತ್ತಿದ್ದು ಸಂಗ್ರಹಿಸಿದ್ದೇನೆ ಎಂದು ಜೀಶಂಪ ಅವರು ಹೇಳುತ್ತಾರೆ. ಆದರೆ ತಿಮ್ಮಯ್ಯ ಹೇಳಿರುವ 'ಗಜಮೋಹಿನಿ' ಕಥೆಯು ಎಲ್ಲಾ ರೀತಿಯಿಂದಲೂ ವಿಶಿಷ್ಟವಾಗಿದ್ದು ಇದನ್ನು ಡಾ. ಹಾ. ತಿ. ಕೃಷ್ಣೇಗೌಡರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ತಿಮ್ಮಯ್ಯನವರಿಗೆ ಇದ್ದ ಒಂದು ಕೊನೆ ಆಸೆ ಎಂದರೆ ತನ್ನಲ್ಲಿರುವ ಕಥಾ ಭಂಡಾರವನ್ನೆಲ್ಲ ಯಾರಿಗಾದರೂ ಧಾರೆ ಎರೆಯಬೇಕು ಎಂಬುದು. ಆದರೆ ಯಾರೂ ಇವರಿಂದ ಕಲಿಯಲು ಮುಂದಾಗಲಿಲ್ಲ. ಇವರ ಮಕ್ಕಳೂ ಕೂಡ ಯಾರೂ ಕಲಿತಿಲ್ಲ. ಹಾ. ತಿ. ಕೃಷ್ಣೇಗೌಡರು ಮಾತ್ರ ಸಂಗ್ರಹಿಸಿರುವ ನಾಲ್ಕೈದು ಕಥೆಗಳು ತಿಮ್ಮಯ್ಯನ ಜೀವಂತಿಕೆಯ ಸಾಕ್ಷಿಗಳಾಗಿ ಉಳಿದಿವೆ.

ತಿಮ್ಮಯ್ಯ, ಗೇಣನಹಳ್ಳಿ,
ಕಸಬಾ ಹೋಬಳಿ, ತಾ : ಜಿ : ಹಾಸನ.

# ಸಿದ್ದರಾಮಣ್ಣ

ಸಿದ್ದರಾಮಣ್ಣ ಮೂಲತಃ ಕೃಷಿಕರು ಪ್ರವೃತ್ತಿಯಾಗಿ ನಂದಿಧ್ವಜ ಕಲಾವಿದರು. ಇವರು ಹಾಸನ ನಗರದಲ್ಲಿ ಜನಿಸಿ ಇಲ್ಲೆ ವಾಸವಾಗಿದ್ದಾರೆ. ತಂದೆ ಸಿದ್ದಲಿಂಗೇಗೌಡ. ಇವರು ಉತ್ತಮ ವ್ಯವಸಾಯಗಾರರಾಗಿದ್ದು ವ್ಯವಸಾಯದಲ್ಲಿಯೂ ಹೆಸರು ಮಾಡಿದ್ದಾರೆ. ಜೊತೆಗೆ ರಾಜಕೀಯದ ಗೀಳನ್ನು ಅಂಟಿಸಿಕೊಂಡಿರುವ ಸಿದ್ದರಾಮಣ್ಣ ಹಾಸನದ ಮುನ್ಸಿಪಲ್ ಕೌನ್ಸಿಲರಾಗಿ, ಮುನ್ಸಿಪಲ್ ವೈಸ್ ಪ್ರೆಸಿಡೆಂಟರಾಗಿಯೂ ಕೆಲಸ ಮಾಡಿದ್ದಾರೆ. ಹಾಸನಾಂಬ ದೇವತೆಯ ಧರ್ಮದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರಿಗೆ ಈಗ ೮೪ ವರ್ಷವಾಗಿದೆ. ಲಿಂಗಾಯತ ಜನಾಂಗಕ್ಕೆ ಸೇರಿದವರು.

ಇವರು ಚಿಕ್ಕ ವಯಸ್ಸಿನಲ್ಲಿಯೇ ನಂದಿಧ್ವಜ ಕುಣಿತವನ್ನು ಕಲಿತು ಸುಮಾರು ೬೦ ವರ್ಷಗಳಿಂದಲೂ ನಿರಂತರವಾಗಿ ಈ ಕಲೆಯನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ. ಇವರ ಮಕ್ಕಳು ಓದಿ ವಿದ್ಯಾವಂತರಾಗಿ ಉತ್ತಮವಾದ ಸರ್ಕಾರಿ ಕೆಲಸಗಳಲ್ಲಿದ್ದರೂ ಈ ಕಲೆಯನ್ನು ಕಡೆಗೆಣಿಸಿದವರಲ್ಲ. ಇವರು ಈ ಕಲೆಯನ್ನು ಹೊಟ್ಟೆಪಾಡಿಗಾಗಿ ಮಾಡಿದವರಲ್ಲ. ಧಾರ್ಮಿಕವಾಗಿ ದೈವ ಭಕ್ತಿಯ ಹಿನ್ನೆಲೆಯಲ್ಲಿ ನಡಿಸಿಕೊಂಡು ಬಂದವರು. ಇವರಿಂದ ಹಲವಾರು ಮಂದಿ ನಂದಿಧ್ವಜ ಕುಣಿತವನ್ನು ಕಲಿತು ಇಂದಿಗೂ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಸಿದ್ದರಾಮಣ್ಣನವರನ್ನು ಈಗಲೂ ಕೇಳಿದರೆ ಮಂಡಿ ನೋವೊಂದು ತೊಂದರೆ ಕೊಡುತ್ತಿದೆ. ಇಲ್ಲದಿದ್ದರೆ ಈಗಲೂ ನಂದಿಧ್ವಜ ಕುಣಿಸುತ್ತಿದ್ದೆ ಎಂದು ಹೇಳುತ್ತಾರೆ. ಇವರ ಶಿಷ್ಯರಾದ ಹೆಚ್. ಡಿ. ಸಂಜೀವಯ್ಯ ಈ ಕಲೆಯಲ್ಲಿ ಪ್ರಸಿದ್ಧಿ ಪಡೆದು ಜಾನಪದ ಅಕಾಡೆಮಿಯ ಪ್ರಶಸ್ತಿಗೂ ಭಾಜನರಾಗಿದ್ದಾರೆ.

ಇವರು ಮುಖ್ಯವಾಗಿ ಹಾಸನಾಂಬ ಜಾತ್ರೆ, ಸಿದ್ಧೇಶ್ವರನ ಜಾತ್ರೆ, ಗಣಪತಿ ಉತ್ಸವಗಳಲ್ಲಿ ಕಡ್ಡಾಯವಾಗಿ ನಂದಿಧ್ವಜ ಕುಣಿಸುತ್ತಿದ್ದರು. ಜೊತೆಗೆ ಹಾಸನ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಹಾಸನ ಜಿಲ್ಲೆಯಲ್ಲಿ ನಂದಿಧ್ವಜ ಎಂದರೆ

ಸಿದ್ಧರಾಮಣ್ಣ ಎನ್ನುವಷ್ಟರ ಮಟ್ಟಿಗೆ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಹಾಸನ ಜಿಲ್ಲೆಯಲ್ಲದೆ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಇವರನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಚನ್ನರಾಯಪಟ್ಟಣದಲ್ಲಿ ನಡೆಸಿದ ಜಾನಪದ ಜಾಗೃತಿ ಸಮಾವೇಶದಲ್ಲಿ ಸನ್ಮಾನಿಸಿದೆ.

**ಸಿದ್ಧರಾಮಣ್ಣ,**
**ಉತ್ತರ ಬಡಾವಣೆ,**
**ಹಾಸನ.**

# ತಂಬೂರಿ ದಾಸಪ್ಪ

ದಕ್ಷಿಣ ಕರ್ನಾಟಕದ, ಅದರಲ್ಲೂ ಹಾಸನ ಜಿಲ್ಲೆಯಲ್ಲೇ ಅತ್ಯಂತ ಪ್ರಮುಖವಾಗಿ ಇದ್ದ ಜನಪದ ಕಲೆ ಎಂದರೆ ಅದು ತಂಬೂರಿ. ಹಾಸನ ಜಿಲ್ಲೆಯನ್ನು ಬಿಟ್ಟರೆ ತುಮಕೂರು ಮತ್ತು ಮಂಡ್ಯ ಜಿಲ್ಲೆಯಲ್ಲಿ ಅಲ್ಲಲ್ಲಿ ಕಾಣಬಹುದಾಗಿತ್ತು. ಆದರೆ ಇದೇ ರೀತಿಯ ಕಲೆಯನ್ನು ಹೋಲುವಂತಹದ್ದು ಮೈಸೂರು, ಚಾಮರಾಜನಗರ ಜಿಲ್ಲೆಯಲ್ಲಿದ್ದು ಅಲ್ಲಿ ಅದನ್ನು ನೀಲಗಾರರು ಎಂದು ಕರೆಯುತ್ತಾರೆ.

ಇಡೀ ಕರ್ನಾಟಕದಲ್ಲಿಯೇ ತಂಬೂರಿ ಕಲೆಯಲ್ಲಿ ಅತ್ಯಂತ ಹೆಚ್ಚು ಪ್ರಸಿದ್ಧಿ ಪಡೆದಿದ್ದ ದಾಸಪ್ಪ ಹಾಸನ ಜಿಲ್ಲೆ ಮತ್ತು ತಾಲ್ಲೂಕಿನ ದುದ್ದ ಹೋಬಳಿಯ ಕಬ್ಬಳಿ ಗ್ರಾಮದವರು. ಇವರ ತಂದೆ ಕರಿಯಯ್ಯ. ತಂಬೂರಿ ಎಂದರೆ ದಾಸಪ್ಪ ಎನ್ನುವಷ್ಟರ ಮಟ್ಟಿಗೆ ಚಿರಪರಿಚಿತರಾಗಿದ್ದ ದಾಸಪ್ಪನವರು ಮಟ್ಟಸವಾದ ಆಳು. ತಲೆಗೆ ಪೇಟ, ತುಂಡು ಪಂಚೆ ಹೆಗಲಿಗೊಂದು ಕರಿಕೋಟು ಧರಿಸಿ ಹೊರಟರೆಂದರೆ, ಹೋದಡೆಯಲ್ಲೆಲ್ಲಾ ಅದ್ಭುತ ಸ್ವಾಗತವೇ ಸಿಗುತ್ತಿತ್ತು. ಹಿಮ್ಮೇಳದವರಾಗಿ ಹಿರಿಮಗ ಬಸವರಾಜು ಮತ್ತು ಊರಿನವರೇ ಆದ ಮಂಜಯ್ಯ, ದೂತಯ್ಯ ಭಾಗವಹಿಸುತ್ತಿದ್ದರು. ದಾಸಪ್ಪ ಹರಿಜನ ಎಡಗೈ ಪಂಗಡಕ್ಕೆ ಸೇರಿದವರು.

ದಾಸಪ್ಪನವರು ಎಡಗೈಯಲ್ಲಿ ತಾಳಗಳ ಚಿಟಿಕೆ ಹಾಕುತ್ತಾ ತಂಬೂರಿಯನ್ನು ಎದೆಗೆ ಆನಿಸಿಕೊಂಡು ಬಲಗೈಯಲ್ಲಿ ತಂಬೂರಿಯ ತಂತಿಯಲ್ಲಿ ಮೀಟುತ್ತಿದ್ದರೆ ಅದರಿಂದ ಹೊರಹೊಮ್ಮುತ್ತಿದ್ದ ನಾದ ಮಾಧುರ್ಯಕ್ಕೆ ದೊಡ್ಡವರು, ಚಿಕ್ಕವರು, ಹೆಂಗಸರು, ಮಕ್ಕಳು ಎನ್ನದೆ ತಲೆದೂಗುತ್ತಾ ದೊಡ್ಡ ಜನ ಜಾತ್ರೆಯೇ ಸೇರುತ್ತಿತ್ತು. ಇವರು ತಮ್ಮ ಸ್ವಂತ ಊರಿನಲ್ಲಲ್ಲದೆ ಸುತ್ತಮುತ್ತಲ ಹಳ್ಳಿಗಳ ಜನರ ಅಪೇಕ್ಷೆಯ ಮೇರೆಗೆ ಕಥೆ ಮಾಡಲು ಹೋಗುತ್ತಿದ್ದುದ್ದುಂಟು. ಹಬ್ಬ-ಹರಿದಿನಗಳಲ್ಲಿ, ಹೆಣ್ಣು ಮಕ್ಕಳು ಋತುಮತಿಯರಾದಾಗ

ಇಡೀ ರಾತ್ರಿಯೆಲ್ಲಾ ತಂಬೂರಿ ಬಾರಿಸುತ್ತಾ ಹಾಡುಗಳನ್ನು ಹೇಳುತ್ತಿದ್ದುದ್ದುಂಟು. ಸತ್ತವರ ಮನೆಯಲ್ಲಿಯೂ ಆಹ್ವಾನಿಸಿ ಸತ್ತವರ ಹೆಸರುಗಳನ್ನು ಹೇಳಿಸುತ್ತಾ ಸ್ವರ್ಗ ಸೇರುವಂತೆ ಹಾಡಿಸುತ್ತಿದ್ದರು.

ದಾಸಪ್ಪ ಮೂಲತಃ ಕೃಷಿಕಾರ್ಮಿಕರಾಗಿದ್ದು, ಪ್ರವೃತ್ತಿಯಾಗಿ ತಂಬೂರಿ ಕಲೆಯನ್ನು ಕರಗತ ಮಾಡಿಕೊಂಡಿದ್ದವರು. ಇವರ ಕಲೆಗಾರಿಕೆಗೆ ಮನಸೋತು ಹೆಚ್.ಎಲ್. ನಾಗೇಗೌಡರು ಇವರನ್ನು ಎಂಟು ಸಲ ಆಹ್ವಾನಿಸಿ ಇವರಲ್ಲಿದ್ದ ತಂಬೂರಿ ಹಾಡುಗಳನ್ನು ಸಂಗ್ರಹಿಸುವುದರೊಂದಿಗೆ ಧ್ವನಿ ಮುದ್ರಣವನ್ನು ಕೂಡ ಮಾಡಿದ್ದಾರೆ. ದಾಸಪ್ಪನವರನ್ನು ವಿಶೇಷವಾಗಿ ಕಂಡು ಸತ್ಕರಿಸಿದ್ದಾರೆ. ಖ್ಯಾತ ಜಾನಪದ ವಿದ್ವಾಂಸರಾದ ಜೀ. ಶಂ. ಪರಮಶಿವಯ್ಯನವರೂ ಕೂಡ ಇವರನ್ನು ಆಹ್ವಾನಿಸಿ ಹಾಡುಗಳನ್ನು ಸಂಗ್ರಹಿಸುವುದರೊಂದಿಗೆ ಗೌರವದಿಂದ ಕಂಡಿದ್ದಾರೆ.

ದಾಸಪ್ಪನವರು ಸುಮಾರು ೧೫ ಕಾವ್ಯಗಳನ್ನು ಹಾಡುತ್ತಿದ್ದು, ಪ್ರಮುಖ ತಂಬೂರಿ ಕಾವ್ಯಗಳೆಂದರೆ ಗುರುವತ್ತರಾಯ, ಬಾಲನಾಗಮ್ಮ, ರುದ್ರಕುಮಾರ, ಲೋಹಿತಕುಮಾರ, ರೇಣುಕಾದೇವಿ ಎಲ್ಲಮ್ಮ ಮುಂತಾದವುಗಳಂತೆ. ಇವರು ಹಾಡಲು ಕುಳಿತರೆ ರಾತ್ರಿ ಹೋಗುತ್ತಿದ್ದುದೇ ಗೊತ್ತಾಗುತ್ತಿರಲಿಲ್ಲ ಎಂದು ಅಲ್ಲಿಯ ಜನ ಈಗಲೂ ಸ್ಮರಿಸುತ್ತಾರೆ. ದಾಸಪ್ಪನವರು ಆಕಾಶವಾಣಿಯಲ್ಲೂ ಹಾಡಿದ್ದಾರೆ. ಇಂದಿಗೂ ಆಕಾಶವಾಣಿ ಕೇಂದ್ರದಲ್ಲಿ ದಾಸಪ್ಪನವರ ಹಾಡುಗಳನ್ನು ಕೇಳುತ್ತಿದ್ದೇವೆ.

ಇವರು ಶಿವಮೊಗ್ಗ, ಚಿಕ್ಕಮಗಳೂರು, ಮೈಸೂರು, ಬೆಂಗಳೂರು ಜಿಲ್ಲೆಗಳಲ್ಲೆಲ್ಲಾ ತಂಬೂರಿ ನುಡಿಸುತ್ತಾ ಹಾಡಿದ್ದಾರೆ. ಹಾಸನ ಜಿಲ್ಲೆಯಲ್ಲಂತೂ ಮನೆ ಮಾತು. ಜೊತೆಗೆ ಮಹಾರಾಷ್ಟ್ರ ಹಾಗೂ ಮಧ್ಯ ಪ್ರದೇಶಗಳಿಗೂ ಹೋಗಿ ಅಲ್ಲಿಯ ಹಲವು ಸ್ಥಳಗಳಲ್ಲಿ ಹಾಡಿರುವುದುಂಟು. ದಾಸಪ್ಪನವರು ತಂಬೂರಿ ಜೊತೆಗೆ ನಾಟಕದ ಮೇಷ್ಟು ಮತ್ತು ನಾಟಕದ ಪಾತ್ರಧಾರಿಯೂ ಹೌದಂತೆ. ಈತ ೧೯೮೮ರಲ್ಲಿ ಮೃತರಾಗಿದ್ದು ಆಗ ಇವರಿಗೆ ಸುಮಾರು ೭೫ ವರ್ಷಗಳಾಗಿದ್ದವೆಂದು ಇವರ ಮಕ್ಕಳು ಹೇಳುತ್ತಾರೆ. ಇವರಿಗೆ ಐದು ಜನ ಗಂಡು ಮಕ್ಕಳಿದ್ದು ಅವರಲ್ಲಿ ಮೂರು ಜನ ಚಿಟ್ಟಿಮೇಳದ ಕಲಾವಿದರಾಗಿ ಪ್ರಸಿದ್ಧಿ ಪಡೆದಿದ್ದಾರೆ. ಒಬ್ಬ ತಂದೆಯಂತೆಯೇ ಹಾರ್ಮೋನಿಯಂ ಮೇಷ್ಟಾಗಿ ನಾಟಕ ಕಲಿಸುತ್ತಿದ್ದಾರೆ. ಆದರೆ ತಂದೆಯ ಕಲೆಯನ್ನು ಇವರಾರು ರೂಢಿಸಿಕೊಂಡಿಲ್ಲ.

ದಾಸಪ್ಪ,
ಕಬ್ಬಳ್ಳಿ, ಹಳೆಕೊಪ್ಪಲು ಅಂಚೆ,
ದುದ್ದ ಹೋಬಳಿ, ತಾ : ಜಿಲ್ಲೆ : ಹಾಸನ.

# ಯು. ಎ. ಪಂಪಾಶಾಸ್ತ್ರಿ

ಲಾವಣಿ ಸಂಪ್ರದಾಯ ಜನಪದ ಸಾಹಿತ್ಯದಲ್ಲಿ ಒಂದು ಪ್ರಮುಖ ಪ್ರಕಾರ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಜನತೆ ಲಾವಣಿ ಕಟ್ಟಿ ಹಾಡುವುದರ ಮೂಲಕ ಬ್ರಿಟಿಷರ ವಿರುದ್ಧ ರಣ ಕಹಳೆಯನ್ನು ಮೊಳಗಿಸಿದರು. ಅಲ್ಲಿಂದ ಪ್ರಾರಂಭವಾದ ಲಾವಣಿ ಸಾಹಿತ್ಯ ಹೆಚ್ಚು ಪ್ರಚಾರತೆಯನ್ನು ಪಡೆದುಕೊಳ್ಳುತ್ತಾ ನಾಡಿನ ಉದ್ದಗಲಕ್ಕೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ಕನ್ನಡ ಭಾಷೆಯಲ್ಲಿ ಮಾತ್ರವಲ್ಲ. ಇತರೆ ಭಾಷೆಗಳಲ್ಲಿಯೂ ಲಾವಣಿ ಹೆಚ್ಚು ಪ್ರಚಾರದಲ್ಲಿದೆ.

ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ಉದ್ದೂರು ಗ್ರಾಮದವರು ಪಂಪಾಶಾಸ್ತ್ರಿಗಳು. ತಂದೆನಿಂಗಶೆಟ್ಟರು ತಾಯಿ ಪುಟ್ಟಮ್ಮ. ಇವರ ಜನನ ೧೯೨೪. ಬಹಳ ಕಾಲದಿಂದಲೂ ಹಳ್ಳಿಹಳ್ಳಿಗಳಿಗೆ ತಿರುಗಾಡಿ ಲಾವಣಿಯನ್ನು ಹಾಡುವುದರ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದರು. ಹಾಡುಗಾರಿಕೆಯನ್ನೇ ತಮ್ಮ ಬದುಕಿನ ಹವ್ಯಾಸ ಮತ್ತು ನಿರ್ವಹಣೆಯನ್ನು ಮಾಡಿಕೊಂಡು ಬಂದವರು. ಇವರ ಉಡುಗೆ-ತೊಡುಗೆಯು ಕೂಡಾ ಸಾಧಾರಣ. ಎತ್ತರವಾಗಿ ತೆಳು ದೇಹವನ್ನು ಹೊಂದಿರುವ ಇವರು ಹಣೆಗೆ ವಿಭೂತಿ ಧರಿಸಿ ಬಿಳಿ ಪಂಚೆ ಮತ್ತು ಬಿಳಿ ಜುಬ್ಬವನ್ನು ಹಾಕಿಕೊಂಡು ಕೈಯಲ್ಲೊಂದು ತಾಳ ಹಿಡಿದು ಅಥವಾ ದಮ್ಮಡಿ ಹಿಡಿದು ಹಾಡಲು ನಿಂತರೆ ಸುತ್ತ ಮುತ್ತ ಜನಸಾಗರವೆ ನೆರೆಯುತ್ತಿತ್ತು. ತಮ್ಮ ಕಂಠ ಮಾಧುರ್ಯದಿಂದ ಲಾವಣಿ ಹಾಡುತ್ತಾ ನಿಂತರೆ ಹೊತ್ತು ಹೋಗುತ್ತಿದುದೇ ಗೊತ್ತಾಗುತ್ತಿರಲಿಲ್ಲವಂತೆ.

ಇವರು ಮೂಲ ಸಂಪ್ರದಾಯದ ಜನಪದ ಲಾವಣಿಗಳನ್ನು ಹಾಡುವುದರೊಂದಿಗೆ ತಾವೇ ರಚಿಸಿದಂತಹ ವಿವೇಕರತ್ನ, ಗಣೇಶ ಮಹಿಮೆ, ಕಾಲಜ್ಞಾನ, ನೂತನ ಲಾವಣಿ, ಯುಗ ಮಹಿಮೆ ಲಾವಣಿ, ಕೊಡಗಿನ ಲಾವಣಿ, ಶ್ರೀಶೈಲ ಲಾವಣಿ,

ಮಲೆ ಮಹದೇಶ್ವರ ಲಾವಣಿ ಮುಂತಾದ ಲಾವಣಿಗಳನ್ನು ಹಾಡುತ್ತಿದ್ದರು. ಇವರಿಗೆ ಹಾಡೇ ಬದುಕು, ಬದುಕೇ ಹಾಡು, ಇವರನ್ನು ಸ್ಥಳೀಯವಾಗಿ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವ ನೀಡಿವೆ. ಇವರು ಇತ್ತೀಗಷ್ಟೇ ನಿಧನ ಹೊಂದಿದ್ದಾರೆ.

ಪಂಪಾಶಾಸ್ತ್ರಿ,
ಉದ್ದೂರು, ಕಸಬಾ ಹೋಬಳಿ,
ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.

# ತಂಬೂರಿ ಮರಿಯಪ್ಪ

ಹಾಸನ ಜಿಲ್ಲೆ, ಹೊಳನರಸೀಪುರ ಪಟ್ಟಣದ ಅಂಬೇಡ್ಕರ್ ನಗರದ ಶ್ರೀ ಮರಿಯಪ್ಪನವರಿಗೆ ಸುಮಾರು ೮೦ ವರ್ಷದ ಹತ್ತಿರವಾಗಿದೆ. ಈತ ಆದಿ ದ್ರಾವಿಡ ಜನಾಂಗಕ್ಕೆ ಸೇರಿದವರಾಗಿದ್ದು, ತಂದೆ ಸಿದ್ದಯ್ಯ. ತನ್ನ ತಂದೆಯಿಂದಲೇ ಇವರಿಗೆ ತಂಬೂರಿ ಕಲೆ ಬಳುವಳಿಯಾಗಿ ಬಂದಿದೆ. ತಂಬೂರಿ ಹಾಡುಗಳನ್ನು ಹಾಡುತ್ತಾ ಭಿಕ್ಷಾಟನೆ ಮಾಡುವುದೇ ಇವರ ವೃತ್ತಿಯಾಗಿದ್ದು ಈಗ ನಡೆಯಲಾರದ ಸ್ಥಿತಿಯಲ್ಲಿದ್ದಾರೆ. ಜೊತೆಗೆ ಒಂದು ಕಾಲು ಊನವಾಗಿದ್ದು, ಅಂಗವಿಕಲರೂ ಹೌದು. ಚಿಕ್ಕಂದಿನಿಂದಲೂ ತಂದೆಯೊಂದಿಗೆ ಊರಾಡಲು ಹೋಗುತ್ತಿದ್ದ ಮರಿಯಪ್ಪನವರು ಜನಪದ ಗೀತ ಸಾಹಿತ್ಯವನ್ನು ಹಾಡುತ್ತಲೆ ಹೊಟ್ಟೆ ತುಂಬಿಸಿಕೊಂಡವರು. ನಾಲ್ಕು ತಂತಿಯ ತಂಬೂರಿ ವಾದ್ಯವನ್ನು ತನ್ನ ಕೈ ಬೆರಳುಗಳಿಂದ ನುಡಿಸುತ್ತಾ ಕುಳಿತರೆ ದುಂಬಿಯ ಝೇಂಕಾರದ ನಾದದಂತೆ ಕಿವಿಯನ್ನು ತನ್ನತ್ತ ಸೆಳೆಯುತ್ತದೆ. 'ಹುಯ್ಯಲಲ್ಲೊ ರಂಗ ಹುಯ್ಯಲಲ್ಲೋ' ಎಂದು ಹಾಡುವಾಗಲಂತು ಕೇಳುಗರನ್ನು ರೋಮಾಂಚನಗೊಳಿಸುತ್ತದೆ. ಮಟ್ಟಸವಾಗಿ ಹಾಡುತ್ತಾ ಕುಳಿತರೆ, ದನಿಯ ಏರಿಳಿತ, ತನ್ನಲ್ಲಿನ ತನ್ಮಯತೆ, ಸಾಹಿತ್ಯದ ಸೊಗಸಿನಿಂದ ಸಮಯ ಉರುಳುವುದೇ ಗೊತ್ತಾಗುವುದಿಲ್ಲ. ಜೊತೆಗೆ ಕೇಳುಗರಲ್ಲಿ ರೋಮಾಂಚನವನ್ನುಂಟುಮಾಡುತ್ತದೆ. ಬದುಕಿನಲ್ಲಿ ಹಲವಾರು ಕಷ್ಟಕಾರ್ಪಣ್ಯಗಳನ್ನು ಎದುರಿಸಿ ಕಡುಬಡತನದಲ್ಲೇ ಬದುಕುತ್ತಿರುವ ಶ್ರೀ ಮರಿಯಪ್ಪ ಜನಪದ ಸಾಹಿತ್ಯದ ಶ್ರೀಮಂತ ಕಣಜ. ತುಂಬಿದ ಕೊಡ ತುಳುಕುವುದಿಲ್ಲ ಎಂಬ ಗಾದೆ ಮಾತಿನಂತೆ ಇರುವ ಇವರು ಉತ್ಕೃಷ್ಟ ತಂಬೂರಿ ವೃತ್ತಿಗಾಯಕರು.

ಇವರು ತಂಬೂರಿಯ ಕಥನ ಕಾವ್ಯಗಳನ್ನಷ್ಟೇ ಅಲ್ಲದೆ ಹೊಗಳುವ ಪದಗಳನ್ನು, ಬಿಡಿ, ಬಿಡಿ ಹಾಡುಗಳನ್ನು ಹಾಡುತ್ತಾರೆ. ಜೊತೆಗೆ ನಕಲಿ ಪದಗಳನ್ನು ಹಾಡುತ್ತಾರೆ. ಇವರನ್ನು ಪ್ರಥಮವಾಗಿ ಜಾನಪದ ಲೋಕಕ್ಕೆ ಪರಿಚಯಿಸಿದವರು. ಎಚ್. ಎಲ್.

ನಾಗೇಗೌಡರು. ಇವರ ಎಲ್ಲಾ ಹಾಡುಗಳನ್ನು ೧೯೮೩ರಲ್ಲೇ ಧ್ವನಿ ಮುದ್ರಿಸಿಕೊಂಡಿದ್ದಾರೆ. ಇವರಿಗೆ ೧೯೯೯ರಲ್ಲಿ ದೊಡ್ಡಮನೆ ಪ್ರಶಸ್ತಿಯೂ ಕೂಡ ದೊರಕಿದೆ. ಜೊತೆಗೆ ಇವರ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೨೦೦೨ನೇ ಸಾಲಿನ ಕಲಾವಿದರಿಗೆ ನೀಡುವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ನೋಡುವುದಕ್ಕೆ ಮುಗ್ಧರಂತೆ ಕಾಣುವ ಈತ ಅದ್ಭುತ ಹಾಡುಗರ ಎಂಬುದರಲ್ಲಿ ಎರಡನೇ ಮಾತಿಲ್ಲ.

**ತಂಬೂರಿ ಮರಿಯಪ್ಪ,**
**ಅಂಬೇಡ್ಕರ ನಗರ,**
**ಹೊಳೆನರಸೀಪುರ, ಹಾಸನ ಜಿಲ್ಲೆ.**

# ಕಾಳಯ್ಯ

ಹಾಸನ, ಚಿಕ್ಕಮಗಳೂರು, ಮಂಡ್ಯ ಜಿಲ್ಲೆಗಳಲ್ಲಿ ಪ್ರಸಿದ್ಧಿ ಪಡೆದಿರುವ ತಂಬೂರಿ ಸಂಪ್ರದಾಯ, ಹಾಸನ ಜಿಲ್ಲೆಯಲ್ಲಿ ತನ್ನ ಪ್ರಾಮುಖ್ಯತೆಯ ಘಟ್ಟ ನೆಲೆಯನ್ನಾಗಿಸಿಕೊಂಡಿದೆ. ಅಂತೆಯ ಹಾಸನ ಜಿಲ್ಲೆಯಲ್ಲಿ ಹಾಸನ, ಆಲೂರು, ಚನ್ನರಾಯಪಟ್ಟಣ, ಹೊಳೆನರಸೀಪುರ ತಾಲೂಕುಗಳಲ್ಲಿ ಈ ಸಂಪ್ರದಾಯದವರು ಹೆಚ್ಚಾಗಿ ಕಂಡು ಬರುತ್ತಾರೆ. ತಂಬೂರಿಯವರು ಮುಖ್ಯವಾಗಿ ಹಾಡುವ ಕಥೆಗಳೆಂದರೆ ಮಡಿಕೇರಿ ನಿಂಗರಾಜ, ತಿಮ್ಮಪ್ಪ ದೊರೆ, ನಂಜುಂಡ ಚಾಮುಂಡಿ, ಸರ್ಜಪ್ಪನಾಯಕ, ಕುಮಾರರಾಮ, ಬಂಜೆ ಹೊನ್ನಮ್ಮ, ರುದ್ರಕುಮಾರ ಬಸವಕುಮಾರ ಮುಂತಾದ ಕಥೆಗಳಲ್ಲಿ ಕೆಲವನ್ನು ಕಾಳಯ್ಯ ಹಾಡುತ್ತಾರೆ.

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ದಂಡಿಗನಹಳ್ಳಿ ಹೋಬಳಿಯ ಬೆಟ್ಟದಪುರದವರು ಕಾಳಯ್ಯ ಇವರು ಆದಿಕರ್ನಾಟಕ ಜಾತಿಗೆ ಸೇರಿದವರು. ಇವರಿಗೆ ಸುಮಾರು ಎಂಬತ್ತು ವರ್ಷ. ಈತ ಪ್ರಸಿದ್ಧ ತಂಬೂರಿ ಗಾಯಕ, ಇವರು ತಂಬೂರಿ ಹಿಡಿದು ಹಾಡಲು ಕುಳಿತರೆ ರಾತ್ರಿ ಹೋಗಿದ್ದೆ ಗೊತ್ತಾಗುವುದಿಲ್ಲವಂತೆ. ಈತನ ಹಾಡುಗಾರಿಕೆಗೆ ಮನಸೋತ ಹಳ್ಳಿಯ ಜನರು ಮೊದಲೆ ಇಂತಿಷ್ಟು ಹಣ ಅಥವಾ ಧಾನ್ಯವನ್ನು ಕೊಟ್ಟು ಮನೆಗೆ ಕರೆಸಿ ರಾತ್ರಿಯಲ್ಲಾ ಹಾಡಿಸುತ್ತಾರೆ. ಒಂದು ರಾತ್ರಿಗೆ ಮುಗಿಯದಿದ್ದರೆ ನಾಳೆ ರಾತ್ರಿ ಇಂತಹ ಸಮಯಕ್ಕೆ ಪ್ರಾರಂಭಿಸುತ್ತೇನೆ ಎಂದು ಹೇಳಿ ಅಂದಿನ ಕಥೆಗೆ ಮುಕ್ತಾಯ ಹಾಡುವುದುಂಟು.

ಕಾಳಯ್ಯ ಅಲ್ಪಸ್ವಲ್ಪ ಭೂಮಿಯನ್ನು ಹೊಂದಿದ್ದವರು. ಕೃಷಿಕಾರ್ಮಿಕರಾಗಿ ದುಡಿಯುವುದರೊಂದಿಗೆ ತಂಬೂರಿ ಹಿಡಿದು ಹೊರಟರೆ ಸುಗ್ಗಿಯ ಕಾಲದಲ್ಲಿ ಸ್ವಲ್ಪ ಧವಸ-ಧಾನ್ಯಗಳನ್ನು ಸಂಗ್ರಹಿಸುತ್ತಿದ್ದರು. ಅಷ್ಟೇ ಅಲ್ಲದೆ ಜೋಳಿಗೆಯನ್ನು ಹೆಗಲಿಗೆ

ಹಾಕಿ ಹಳ್ಳಿಹಳ್ಳಿಗೆ ಹೊರಟರೆ ತಿಂಗಳಾನುಗಟ್ಟಳೆ ಊರಿಗೆ ಹಿಂದಿರುಗುತ್ತಿರಲಿಲ್ಲ. ಸಂಗ್ರಹಿಸಿದ ಧಾನ್ಯವನ್ನು ಅಲ್ಲೇ ಪರಿಚಿತರ ಮನೆಯಲ್ಲಿಟ್ಟು ನಂತರ ಗಾಡಿಯಲ್ಲಿ ಹೇರಿಸಿಕೊಂಡು ತರುತ್ತಿದ್ದರಂತೆ. ಕಾಳಯ್ಯ ಸೊಗಸಾದ ಹಾಡುಗಾರ. ಇವರ ಕಂಠ ಮಾಧುರ್ಯಕ್ಕೆ ಹಿರಿಯರು–ಕಿರಿಯರು ಎನ್ನದೆ ಗುಂಪು ಗುಂಪಾಗಿ ಸೇರುತ್ತಿದ್ದರು. ಇವರು ಮುಖ್ಯವಾಗಿ ಹಬ್ಬ ಹರಿದಿನಗಳ ಸಂದರ್ಭದಲ್ಲಿ ವಿಶೇಷವಾಗಿ ಹಾಡುತ್ತಿದ್ದುದುಂಟು. ಇವರು ಹಾಡುತ್ತಿದ್ದ ಹಲವಾರು ಕಥೆಗಳಲ್ಲಿ ಮುಖ್ಯವಾದ ಎರಡು ಕಥೆಗಳಾದ ಕುಮಾರರಾಮ ಮತ್ತು ಕುಸುಮ ಬಾಲೆ ಕಾವ್ಯಗಳನ್ನು ಚಂದ್ರು ಕಾಳೇನಹಳ್ಳಿಯವರು ೧೯೭೭ರಲ್ಲಿಯೇ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಚನ್ನರಾಯ ಪಟ್ಟಣ ತಾಲ್ಲೂಕಿನಲ್ಲಿ ಇವರೊಬ್ಬ ಅಪರೂಪದ ಕಲಾವಿದ.

**ಕಾಳಯ್ಯ,**
**ಬೆಟ್ಟದಪುರ, ದಂಡಿಗನಹಳ್ಳಿ ಹೋಬಳಿ,**
**ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.**

## ಗಿರಿಜಮ್ಮ

ಹಾಸನ ಜಿಲ್ಲೆ ಚನ್ನರಾಯಪಟ್ಟಣದ ಬಿ.ಎಂ. ರಸ್ತೆಯ ನಿವಾಸಿಯಾದ ಗಿರಿಜಮ್ಮನವರು ಜನಪದ ಹಾಡುಗಾರ್ತಿ. ತಂದೆ ಮಾಳಿಗಪ್ಪ, ತಾಯಿ ನಂಜಮ್ಮ, ಪರಿಶಿಷ್ಟ ಜಾತಿಗೆ ಸೇರಿದವರು. ಇವರಿಗೆ ೭೮ ವರ್ಷವಾಗಿದೆ. ೭ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವ ಇವರು ವೀರಪ್ಪ ಎಂಬವರಿಂದ ಜನಪದ ಹಾಡುಗಳನ್ನು ಕಲಿತೆ ಎಂದು ಹೇಳುತ್ತಾರೆ. ಮದುವೆಯ ನಂತರ ಗಂಡ ನಂಜಪ್ಪನವರು ನನ್ನ ಕಲೆಗೆ ಪ್ರೋತ್ಸಾಹ ನೀಡಿದರು ಎಂದು ನೆನೆಯುತ್ತಾರೆ. ಇವರು ಜನಪದ ಬಿಡಿಗೀತೆಗಳು, ಸೋಬಾನೆ ಹಾಡುಗಳು ಹಾಗು ಲಾವಣಿ, ಕಥನ ಗೀತೆಗಳನ್ನು ಕೂಡ ಹಾಡುತ್ತಾರೆ. ವೃತ್ತಿಯಲ್ಲಿ ಗೃಹಿಣಿ, ಪ್ರವೃತ್ತಿಯಲ್ಲಿ ಕಲೆಗಾರ್ತಿ.

ಇವರು ಸ್ವಾತಂತ್ರ್ಯ ಸಂಗ್ರಾಮದ ದಿನಗಳಲ್ಲಿ ಗಾಂಧೀಜಿ ಮತ್ತು ನೆಹರೂರವರು ಚನ್ನರಾಯಪಟ್ಟಣಕ್ಕೆ ಬಂದಿದ್ದಾಗ, ಅವರಿಂದ ಪ್ರಭಾವಿತರಾಗಿ ಹಳ್ಳಿ ಹಳ್ಳಿ ತಿರುಗಿ ಜನಪದ ಲಾವಣಿಗಳ ಮೂಲಕ ಜನ ಜಾಗೃತಿ ಉಂಟು ಮಾಡಿದ್ದಾರೆ. ಮದುವೆ, ನಾಮಕರಣ, ಹಬ್ಬ–ಹರಿದಿನಗಳಲ್ಲಿ, ಹುಣ್ಣಿಮೆ ಕಾರ್ಯಕ್ರಮಗಳಲ್ಲಿ, ಗಣೇಶೋತ್ಸವ ಮುಂತಾದ ಶುಭ ಸಂದರ್ಭಗಳಲ್ಲೆಲ್ಲಾ ಜನಪದ ಹಾಡುಗಳನ್ನು ಹೇಳಿದ್ದಾರೆ. ಈಗ 'ಹಿಮದರ್ಶಿನಿ ಕಲಾವೃಂದ' ಎಂಬ ಕಲಾ ಸಂಘವನ್ನು ಕಟ್ಟಿ ಹಲವಾರು ಯುವ ಪ್ರತಿಭೆಗಳಿಗೆ ಮಾರ್ಗದರ್ಶನ ನೀಡುತ್ತಾ ಜನಪದ ಹಾಡುಗಳನ್ನು ಕಲಿಸುತ್ತಾ ಮುಂದಿನ ಪೀಳಿಗೆಗೆ ಈ ಕಲೆಯನ್ನು ಉಳಿಸಿ ಬೆಳೆಸಲು ಸತತ ಪ್ರಯತ್ನ ಮಾಡುತ್ತಿದ್ದಾರೆ. ಇವರಿಗೆ ಚನ್ನರಾಯಪಟ್ಟಣದಲ್ಲಿ ಸನ್ಮಾನಿಸಿ ಗೌರವಿಸಲಾಗಿದೆ.

ಗಿರಿಜಮ್ಮ
ಬಿ.ಎಂ. ರಸ್ತೆ,
ಚನ್ನರಾಯಪಟ್ಟಣ, ಹಾಸನ ಜಿಲ್ಲೆ.

## ಹೆಚ್. ಎಸ್. ಬಂಗಾರು

ಕೀಲು ಕುದುರೆ ಬಂಗಾರು ಎಂದೇ ಪ್ರಸಿದ್ಧಿ ಪಡೆದಿರುವ ಇವರು ಜಟ್ಟಿಮನೆತನಕ್ಕೆ ಸೇರಿದವರು. ಹಾಸನ ನಗರದ ವಲ್ಲಭಾಯಿ ರಸ್ತೆಯಲ್ಲಿ ವಾಸವಾಗಿರುವ ಬಂಗಾರು ಅವರಿಗೆ ಈಗ ೭೮ ವರ್ಷ (೩೧-೫-೧೯೩೦), ತಂದೆ ಸಂಜೀವ ಜಟ್ಟಪ್ಪ, ತಾಯಿ ಸಾವಿತ್ರಮ್ಮ. ಬಾಲ್ಯದಲ್ಲಿ ಮಹಾತ್ಮ ಗಾಂಧೀಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸ್ಕೂಲಿಗೆ ತಿಲಾಂಜಲಿ ಇಟ್ಟರು. ಚಳುವಳಿಯ ಜೊತೆಜೊತೆಗೆ ಜನಪದ ಗೀತೆಗಳನ್ನು ಹಾಡುತ್ತಾ ಊರೂರು ತಿರುಗಿದರು. ಚಳುವಳಿಯ ಅಂಗವಾಗಿ ಕೀಲು ಕುದುರೆ ಕುಣಿಸುತ್ತಿದ್ದುದನ್ನು ಕಂಡು, ಆ ಕಲೆಗೆ ಮರುಳಾಗಿ ಬಂಗಾರು ಅವರು ಕೀಲು ಕುದುರೆ ಕುಣಿತವನ್ನು ತಮಿಳುನಾಡಿಗೆ ಹೋಗಿ ಕಲಿತುಕೊಂಡು ಬಂದರು.

ಕೀಲು ಕುದುರೆ ಕಲೆಯಲ್ಲಿ ಅಪ್ರತಿಮ ಸಾಧನೆ ಮಾಡಿದ ಇವರು ೨೪ ಜನರ ತಂಡವನ್ನು ಕಟ್ಟಿಕೊಂಡು ಮುನ್ನಡೆಸಿಕೊಂಡು ಬಂದಿದ್ದಾರೆ. ಹಾಸನ ಜಿಲ್ಲೆಯಾದ್ಯಂತ ಜಾತ್ರೆ, ಗಣಪತಿ ಉತ್ಸವ, ಹಬ್ಬ-ಹರಿದಿನ ಮುಂತಾದ ಸಂದರ್ಭಗಳಲ್ಲಿ ಕೀಲು ಕುದುರೆ ಪ್ರದರ್ಶನವಿಲ್ಲದೆ ಯಾವ ಕಾರ್ಯಕ್ರಮಗಳೂ ನಡೆಯುತ್ತಿರಲಿಲ್ಲವಂತೆ. ಕೀಲುಕುದುರೆ ಪ್ರದರ್ಶನದಲ್ಲಿ ಬಂಗಾರು ಅವರು ಹೆಣ್ಣು, ಗಂಡಿನ ಎರಡೂ ಪಾತ್ರಗಳನ್ನು ಹಾಕುತ್ತಿದ್ದರು. ಇವರ ಆಕರ್ಷಕವಾದ ಕುಣಿತವನ್ನು ಕಂಡವರು ಮದುವೆ ಸಮಾರಂಭಗಳಿಗಳೂ ಕರೆಸುತ್ತಿದ್ದುದುಂಟು, ರಾಜಕಾರಣಿಗಳ ಮೆರವಣಿಗೆಯಲ್ಲಂತೂ ಇವರದೇ ಪ್ರಮುಖ ತಂಡ.

ಬಂಗಾರು ಅವರು ತಮಿಳುನಾಡಿನಲ್ಲಿ ಕೀಲುಕುದುರೆ ಕುಣಿತವನ್ನು ಮಾತ್ರವಲ್ಲದೆ ಕೀಲು ಕುದುರೆಗಳನ್ನು ತಯಾರು ಮಾಡುವುದನ್ನು ಕಲಿತರು. ಆ ಕೀಲುಕುದುರೆಗಳಿಗೆ ತಕ್ಕಹಾಗೆ ವಿನ್ಯಾಸ ಗೊಳಿಸುತ್ತಾ ಅವುಗಳಿಗೆ ಬಣ್ಣವನ್ನು ಅತಿರಂಜನೀಯವಾಗುವಂತೆ

ಬಳಿಯುತ್ತಿದ್ದರು. ಕೀಲು ಕುದುರೆ ಕಟ್ಟಿಕೊಂಡು ಕುಣಿಯುವಾಗ ಕಾಲಿಗೆ ಮರಗಾಲುಗಳನ್ನು ಕಟ್ಟಿಕೊಳ್ಳುತ್ತಿದ್ದರು. ವೇಷ ಭೂಷಣವನ್ನು ಪಾತ್ರಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸುವುದೂ ಕೂಡ ಬಂಗಾರು ಅವರದೇ ಆಗಿರುತ್ತಿತ್ತು.

ಸುಮಾರು ೫೫ ವರ್ಷಗಳಿಂದ ತಂಡಕಟ್ಟಿಕೊಂಡು ಈ ಕಲೆಯನ್ನು ಪ್ರದರ್ಶಿಸುತ್ತಾ ಬಂದಿರುವ ಬಂಗಾರು ಈಗ ಹಣ್ಣಾಗಿದ್ದಾರೆ. ಇವರು ಕಟ್ಟಿಬೆಳೆಸಿದ ತಂಡವೂ ಕೂಡ ಈಗ ಉಳಿದಿಲ್ಲ. ಆದರೆ ಇವರು ತರಬೇತಿ ನೀಡಿದ್ದ ತಿಪಟೂರು ತಾಲ್ಲೂಕಿನಲ್ಲಿ ಈಗಲೂ ತಂಡ ಕಲಾಪ್ರದರ್ಶನದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಕಾಣಬಹುದು. ಬಂಗಾರು ಅವರು ಹಾಸನ ಜಿಲ್ಲೆಯಲ್ಲಿ ಮಾತ್ರವಲ್ಲದೆ ಮಡಿಕೇರಿ, ಮೈಸೂರು, ಮಂಗಳೂರು, ಚಿಕ್ಕಮಗಳೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರದರ್ಶನ ನೀಡಿ ಸೈ ಎನಿಸಿಕೊಂಡಿದ್ದಾರೆ.

ಇವರು ಮೂಲತಃ ಟೈಲರಿಂಗ್ ಕೆಲಸ ಮಾಡುತ್ತಿದ್ದು, ಪ್ರವೃತ್ತಿಯಾಗಿ ಕೀಲುಕುದುರೆ ನರ್ತನವನ್ನು ನಡೆಸುತ್ತಾ ಬಂದವರು. ಈಗ ತಿರುಗಾಡಲು ಕಷ್ಟವಾಗಿದ್ದು ಲಾಟರಿ ಟಿಕೇಟ್ ಮಾರಾಟ ಮಾಡುತ್ತಿದ್ದರು. ಅದೂ ಇಲ್ಲದೆ ಮನೆಯಲ್ಲಿಯೇ ಇದ್ದಾರೆ. ಇವರ ಮಕ್ಕಳೂ ಕೂಡ ಬಡತನದಲ್ಲಿಯೇ ಬೇಯುತ್ತಿದ್ದಾರೆ. ಇವರಿಗೆ ಸ್ಥಳೀಯವಾಗಿ ಹಲವಾರು ಗೌರವಗಳು ಸಂದಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಕೀಲುಕುದುರೆ ತಯಾರಿಕೆಗೆ ೨೦೦೬ರಲ್ಲಿ ಕಲಾ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿದೆ. ಇಂದಿಗೂ ಹಾಸನದಲ್ಲಿ ಕೀಲುಕುದುರೆ ಎಂದರೆ ಬಂಗಾರು ಎನ್ನುವಷ್ಟರ ಮಟ್ಟಿಗೆ ಇವರ ಖ್ಯಾತಿ ಉಳಿದುಕೊಂಡಿದೆ.

ಹೆಚ್. ಎಸ್. ಬಂಗಾರು,
ವಲಭಾಯಿ ರಸ್ತೆ,
ಹಾಸನ.

## ಸಣ್ಣಮರಿ

ಶ್ರೀ ಸಣ್ಣಮರಿ ಆದಿಕರ್ನಾಟಕ ಜಾತಿಗೆ ಸೇರಿದ ಹೆಸರಾಂತ ಕಹಳೆವಾದಕ. ಇವರು ಹಾಸನ ಜಿಲ್ಲೆ, ಬೇಲೂರು ತಾಲ್ಲೂಕಿನ ಕಸಬಾ ಹೋಬಳಿಯ ಐರವಳ್ಳಿ ಗ್ರಾಮದವರು. ತಂದೆ ಮರಿಯಯ್ಯ. ಇವರು ಸುಮಾರು ಎಪ್ಪತ್ತು ವರ್ಷ ಬದುಕಿದ್ದು, ೧೯೯೧ರಲ್ಲಿ ಮೃತರಾಗಿದ್ದಾರೆ. ವೃತ್ತಿಯಲ್ಲಿ ಕೃಷಿ ಕಾರ್ಮಿಕರಾಗಿದ್ದು, ಕಹಳೆ ಊದುವುದನ್ನು ಹವ್ಯಾಸಿ ಕಲೆಯಾಗಿ ರೂಢಿಸಿಕೊಂಡಿದ್ದವರು. ಸುಮಾರು ಆರು ಅಡಿ ಎತ್ತರದ ಸಪೂರ ಶರೀರದ ಗಡುಸಿನ ದೇಹ. ಸದಾ ಮೇಲುಕೋಟು ಮತ್ತು ಮೊಣಕಾಲಿನ ವರೆಗೆ ಬಿಳಿ ಪಂಚೆಯನ್ನು ಕಟ್ಟುತ್ತಿದ್ದರು ಹಾಗು ತಲೆಗೆ ಕೆಂಪುಪೇಟ ಧರಿಸುತ್ತಿದ್ದರು. ಸಣ್ಣಮರಿಯವರು ಇಡೀ ಆ ಪ್ರಾಂತದಲ್ಲಿ ಆಗಿನ ಕಾಲಕ್ಕೆ ಕಹಳೆವಾದನಕ್ಕೆ ತುಂಬಾ ಹೆಸರು ವಾಸಿಯಾಗಿದ್ದರು. ಶುಭ-ಅಶುಭ ಎರಡೂ ಕಾರ್ಯಗಳಲ್ಲಿಯೂ ಗುಂಪುವಾದ್ಯದಲ್ಲಿ ಇವರ ಕಹಳೆವಾದನ ಪ್ರಮುಖವಾಗಿರುತ್ತಿತ್ತು. ಆ ಕಾಲದ ಹಿರಿಯರು ಕಹಳೆನಾದವನ್ನು ಕೇಳಿ (ನೋಡದೆಯೆ) ಇದು ನಮ್ಮ ಸಣ್ಣಮರಿ ಕಹಳೆಯೇ ಎಂದು ಗುರುತಿಸುವಷ್ಟು ಪ್ರಖ್ಯಾತರಾಗಿದ್ದವರು. ಐರವಳ್ಳಿಯ ಸುತ್ತ ಮುತ್ತಲಿನ ಹತ್ತಾರು ಹಳ್ಳಿಗಳಲ್ಲಿ ಇವರ ಕಹಳೆವಾದನಕ್ಕೆ ಬಹಳ ಬೇಡಿಕೆ ಇತ್ತಂತೆ.

ಸಣ್ಣಮರಿ ಕಹಳೆಯನ್ನು ಮೇಲಕ್ಕೆತ್ತಿ ಊದಲು ಪ್ರಾರಂಭಿಸಿದರೆ ಅದರ ಶಬ್ದ ಆಕಾಶಕ್ಕೆ ಮುಟ್ಟಿ ಅಲ್ಲಿರುವ ಶಿವಪಾರ್ವತಿಯರನ್ನು, ಮಲಗಿರುವ ವೈಕುಂಠದ ವಿಷ್ಣುವನ್ನು ಎಚ್ಚರಿಸುತ್ತಿತ್ತೆಂದು ಹಳ್ಳಿಯ ಜನರು ಇಂದಿಗೂ ಮಾತಾಡಿಕೊಳ್ಳುತ್ತಾರೆ. ಇವರಿಗೆ ಎರಡು ಗಂಡು ಹಾಗು ಮೂರು ಹೆಣ್ಣು ಮಕ್ಕಳು. ಮೊದಲನೆಯ ಮಗ ಶ್ರೀ ರಂಗಯ್ಯ. ತನ್ನ ತಂದೆಯ ಕಲೆಯನ್ನು ಕರಗತ ಮಾಡಿಕೊಳ್ಳಲು ಪ್ರಯತ್ನಿಸಿದರೂ ಅದು ಸಾಧ್ಯವಾಗಿಲ್ಲ. ಸಣ್ಣಮರಿಯವರ ಹೆಂಡತಿಯೂ ಕೂಡ ತನ್ನ ಗಂಡನ ಕಲೆ ಉಳಿಯಬೇಕೆಂದು ಈಗಲೂ ಕೊರಗುತ್ತಾರೆ. ಆದರೆ ಈಗ ಆ ಸುತ್ತಮುತ್ತಲ ಪ್ರಾಂತ್ಯದಲ್ಲಿ ಕಹಳೆಯವಾದನ ಬರೀ ನೆನಪಾಗಿ ಮಾತ್ರ ಉಳಿದಿದೆ ಎಂದು ಅಲ್ಲಿಯ ಜನರು ಸ್ಮರಿಸುತ್ತಾರೆ.

**ಸಣ್ಣಮರಿ, ಐರವಳ್ಳಿ, ಕಸಬಾ ಹೋಬಳಿ, ಬೇಲೂರು ತಾಲೂಕು, ಹಾಸನ ಜಿಲ್ಲೆ.**

## ಸಿ. ಚನ್ನಪ್ಪ

ಇವರು ಹಾಸನ ಜಿಲ್ಲೆ, ಬೇಲೂರು ತಾಲ್ಲೂಕಿನ ಇಬ್ಬೀಡು ಕಾಲೋನಿಯಲ್ಲಿ ವಾಸಿಸುತ್ತಿದ್ದಾರೆ. ಇವರು' ಹರಿಜನ ಜಾತಿಗೆ ಸೇರಿದವರು. ಇವರ ತಂದೆ ಚೆನ್ನಿಗಯ್ಯ ತಾಯಿ ರಂಗಮ್ಮ. ಈಗ ಇವರಿಗೆ ೭೭ ವರ್ಷವಾಗಿದೆ. ವ್ಯವಸಾಯ ವೃತ್ತಿಯೊಂದಿಗೆ ಕರಪಾಲ ಮೇಳವನ್ನು ಕೂಡ ತಮ್ಮ ವೃತ್ತಿಯನ್ನಾಗಿ ರೂಢಿಸಿಕೊಂಡವರು. ಕರಪಾಲ ಕಲೆ ತುಮಕೂರು, ಹಾಸನ, ಚಿಕ್ಕಮಗಳೂರುಗಳಲ್ಲಿದ್ದು, ಕರಪಾಲ ಎಂದರೆ ಇಬ್ಬೀಡು ಕರಪಾಲ ಎಂದು ಹೇಳಿಸಿಕೊಳ್ಳುವಂತೆ ಈ ಕಲೆಯನ್ನು ಬೆಳೆಸಿದವರು ಇಬ್ಬೀಡಿನವರು. ಈ ಊರಲ್ಲಿ ಮೊದಲಿಗೆ ಬಸವೇಗೌಡ ಎಂಬುವರು ಉತ್ತರದಿಂದ ಬಂದ ಗುರುವಿನಿಂದ ಕಲಿತರಂತೆ. ನಂತರ ಮೊಗಣ್ಣಗೌಡರು, ತಿರುಮಲಯ್ಯ ಇವರ ಜೊತೆಗಿದ್ದ ಚನ್ನಪ್ಪ ಮುಂದೆ ಸ್ವತಂತ್ರ ತಂಡವನ್ನು ಕಟ್ಟಿ ಬೆಳೆಸಿದವರು. ಇವರು ಅವಿದ್ಯಾವಂತರಾದರೂ ತಾವು ರೂಢಿಸಿಕೊಂಡ ಈ ಕಲೆಯನ್ನು ವಿಶ್ವವಿದ್ಯಾಲಯಗಳಲ್ಲಿ ವಿಶೇಷ ಉಪನ್ಯಾಸ ನೀಡುವ ಮಟ್ಟಕ್ಕೆ ಬೆಳೆದಿರುವುದು ವಿಶೇಷ. ಮೈಸೂರು ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದಲ್ಲಿ ಅತಿಥಿ ಕಲಾ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿರುವ ಹಿರಿಮೆ ಇವರದಾಗಿದೆ. ತಾವು ಕಲಿತ ಕರಪಾಲ ಕಲೆಯನ್ನು ನೂರಾರು ಯುವಕರಿಗೆ ಕಲಿಸಿರುವ ಚನ್ನಪ್ಪನವರು ಮೃದಂಗ, ಗುಮ್ಮಟೆ, ಹಾರ್ಮೋನಿಯಂ ವಾದ್ಯಗಳನ್ನು ಕೂಡ ನುಡಿಸಬಲ್ಲರು.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿರುವ ಹಲವಾರು ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ವಿವಿಧ ಸಂದರ್ಭಗಳಲ್ಲಿ ಏರ್ಪಡಿಸಿರುವ ಹಲವಾರು ಜನಪದ ಕಲಾ ಮೇಳಗಳಲ್ಲಿ ಕಲಾವಿದರಾಗಿ ಭಾಗವಹಿಸಿದ್ದಾರೆ. ಕರ್ನಾಟಕದ ಪ್ರತಿಷ್ಠಿತ ಸಾಂಸ್ಕೃತಿಕ, ಧಾರ್ಮಿಕ ಕೇಂದ್ರಗಳಲ್ಲಿ ನಡೆದಿರುವ ಉತ್ಸವಗಳಲ್ಲಿ ಕಲಾ ಪ್ರದರ್ಶನ ನೀಡಿದ್ದಾರೆ. ಇವರು

ಕಲಾ ಪ್ರದರ್ಶನ ನೀಡಿರುವ ಪ್ರಮುಖ ಸ್ಥಳಗಳೆಂದರೆ ಧರ್ಮಸ್ಥಳ, ಸುಬ್ರಹ್ಮಣ್ಯ, ಶ್ರವಣ ಬೆಳಗೊಳ, ಬೇಲೂರು, ಹಳೇಬೀಡು, ಚಿಕ್ಕಮಗಳೂರು, ಹಾಸನ ಮುಂತಾದವು. ಇವರು ಪ್ರಮುಖವಾಗಿ ಮಹಾದಾಂತ, ಕಾಡುಸಿದ್ದಮ್ಮ, ನೀಲಕಂಠ ರೂಪಾವತಿ, ರಾಜಾವಿಕ್ರಮ, ಸತ್ಯವ್ರತ ಮುಂತಾದ ಕಥೆಗಳನ್ನು ನಡೆಸಿಕೊಡುತ್ತಾರೆ. ವಯಸ್ಸಾದರೂ ಕೂಡ ಹಲ್ಲಿಲ್ಲದಿದ್ದರೂ ಬೋಡುಗಳಲ್ಲಿ ಚಪ್ಪರಿಸುತ್ತಾ ಇಂದಿಗೂ ಯುವಕರನ್ನು ಕಟ್ಟಿಕೊಂಡು ಕರಪಾಲ ಮೇಳವನ್ನು ನಡೆಸುತ್ತಾ ಬಂದಿರುವುದು ವಿಶೇಷವಾಗಿದೆ. ಇವರಿಗೆ ೨೦೦೪ ನೇ ಸಾಲಿನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಕಲಾವಿದರ ಪ್ರಶಸ್ತಿ ದೊರಕಿದೆ. ಜೊತೆಗೆ ಹಲವಾರು ಸಂಘ–ಸಂಸ್ಥೆಗಳು ಗೌರವಿಸಿವೆ. ೨೦೦೪ರಲ್ಲಿ ಹಾಸನದಲ್ಲಿ ಜಾನಪದ ಅಕಾಡೆಮಿ ನಡೆಸಿದ ಗೀತಗಾಯನ ಕಮ್ಮಟದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ.

---

ಸಿ. ಚನ್ನಪ್ಪ,
ಇಬ್ಬೀಡು, ಮಾದಿಹಳ್ಳಿ ಹೋಬಳಿ,
ಬೇಲೂರು ತಾಲೂಕು, ಹಾಸನ ಜಿಲ್ಲೆ.

# ಹೆಚ್. ಡಿ. ಸಂಜೀವಯ್ಯ

ಹಾಸನ ನಗರದ ಮೂಲ ನಿವಾಸಿಯಾದ ಹೆಚ್. ಡಿ. ಸಂಜೀವಯ್ಯನವರ ತಂದೆ ಹೆಚ್.ಡಿ. ದೊಡ್ಡಯ್ಯ. ತಾಯಿ ರಂಗಮ್ಮ ಇವರಿಗೆ ಈಗ ೭೬ ವರ್ಷ. ಮೂಲತಃ ಕೃಷಿ ಕಸುಬುದಾರರಾದ ಇವರು ಸುಮಾರು ೫೫ ವರ್ಷಗಳಿಂದ ನಂದಿಧ್ವಜ ಕುಣಿಸುತ್ತಾ ಬಂದಿದ್ದಾರೆ. ಇವರಿಗೆ ಗುರು ಸಿದ್ದರಾಮಣ್ಣ, ಇಂದಿಗೂ ಈ ಕಲೆಯನ್ನು ಬಿಡದೆ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಒಕ್ಕಲಿಗರಾಗಿ ಈ ಕಲೆಯನ್ನು ರೂಢಿಸಿಕೊಂಡಿರುವುದು ವಿಶೇಷ.

ಎಲ್ಲಿ ಗಣಪತಿ ಉತ್ಸವ, ದೇವರ ಉತ್ಸವ, ರಥೋತ್ಸವಗಳು ಇರುತ್ತವೆಯೊ ಅಲ್ಲೆಲ್ಲಾ ಸಂಜೀವಯ್ಯನವರ ನಂದೀಧ್ವಜ ಕುಣಿತ ಇದ್ದೇ ಇರುತ್ತದೆ. ಹಾಸನದ ಸಿದ್ದೇಶ್ವರ ಜಾತ್ರೆಯ ರಥೋತ್ಸವದಲ್ಲಂತೂ ಯಾವ ವರ್ಷವೂ ತಪ್ಪದೆ ಇವರ ಪ್ರದರ್ಶನ ಇರುತ್ತದೆ. ಚಿಕ್ಕಂದಿನಲ್ಲಿ ಗುರುವಿನಿಂದ ದೀಕ್ಷೆ ಪಡೆದಿರುವ ಇವರು ಈ ಕಲೆಯ ಕಾಯಕವನ್ನು ಯಾವತ್ತು ನಿಲ್ಲಿಸಿದವರಲ್ಲ. ಹಾಸನ ಜಿಲ್ಲೆಯಲ್ಲಿ ಮಾತ್ರವಲ್ಲದೆ ಚಿಕ್ಕಮಗಳೂರು, ಕೊಡಗು, ಮೈಸೂರು, ದಕ್ಷಿಣ ಕನ್ನಡದ ಧರ್ಮಸ್ಥಳ ಮುಂತಾದ ಕಡೆಗಳಲ್ಲಿ ನಡೆದಿರುವ ಕಲಾ ಮೇಳಗಳು, ದೇವರ ಉತ್ಸವಗಳಲ್ಲಿ ಭಾಗವಹಿಸಿದ್ದಾರೆ.

ಇವರು ಹಾಸದಲ್ಲಿರುವ ಪ್ರಸಿದ್ಧ ದೇವತೆಯಾದ ಹಾಸನಾಂಬ ದೇವಸ್ಥಾನದ ಧರ್ಮದರ್ಶಿಯಾಗಿ ಇಂದಿಗೂ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಪಿ.ಎಲ್.ಡಿ. ಬ್ಯಾಂಕಿನ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ. ಈ ಯಾವುದೇ ಹುದ್ದೆಗಳಲ್ಲಿದ್ದರೂ ಇವರ ಕಲಾ ಸೇವೆಗೆ ಯಾವೊತ್ತು ಅಡ್ಡಿಯಾಗಿಲ್ಲ. ಇಂದಿಗೂ ಕೂಡ ಯುವಕರನ್ನು ಸಂಘಟಿಸುತ್ತಾ, ಯುವ ತಂಡಗಳಿಗೆ ಈ ಕಲೆಯನ್ನು ಪ್ರೋತ್ಸಾಹದಾಯಕ ರೀತಿಯಲ್ಲಿ ಕಲಿತು, ಪ್ರದರ್ಶನ ಮಾಡುವಂತೆ ಹುರಿದುಂಬಿಸುತ್ತಿದ್ದಾರೆ. ಹಲವಾರು ತಂಡಗಳನ್ನು ಬೆಳೆಸಿದ್ದಾರೆ.

ಇವರ ಕಲಾ ಸೇವೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು ಸನ್ಮಾನ ನೀಡಿ ಗೌರವಿಸಿವೆ. ೨೦೦೩ ನೇ ಸಾಲಿನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಇವರಿಗೆ ಜ್ಞಾನ-ವಿಜ್ಞಾನ ಪ್ರಶಸ್ತಿ ನೀಡಿ ಗೌರವಿಸಿದೆ. ಇವರೊಬ್ಬ ಅಪರೂಪದ ಕಲಾವಿದ.

ಹೆಚ್. ಡಿ. ಸಂಜೀವಯ್ಯ,
ಶಾಂತಿನಗರ ಬಡಾವಣೆ,
ಹಾಸನ.

# ಡಿ. ಸಿ. ಗೌಡಯ್ಯ

ಡಿ. ಸಿ. ಗೌಡಯ್ಯ ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ದೊಡ್ಡಕುಂಚೇವು ಗ್ರಾಮದವರು. ಸುಮಾರು ೭೫ ವರ್ಷ. ತಂದೆ ಪಟೇಲ್ ಕೆ. ಎಲ್. ಚಿಕ್ಕೇಗೌಡರು. ಒಕ್ಕಲಿಗ ಜನಾಂಗಕ್ಕೆ ಸೇರಿದವರಾಗಿದ್ದು ಮೂಲತಃ ಕೃಷಿಕ ಕುಟುಂಬದವರು. ಕೃಷಿ ಕೆಲಸದ ಜೊತೆ ಜೊತೆಯಲ್ಲಿ ಜನಪದ ಹಾಡುಗಳನ್ನು ಹಾಡುವ ಹವ್ಯಾಸವನ್ನು ಬೆಳೆಸಿಕೊಂಡವರು.

ಚಿಕ್ಕಂದಿನಿಂದಲೇ ಜಾನಪದದ ಬಗ್ಗೆ ಗೀಳು ಅಂಟಿಸಿಕೊಂಡು ಬಂದ ಇವರು ಜನಪದ ಗೀತೆಗಳ ಜೊತೆಗೆ ಭಾವಗೀತೆ, ಭಕ್ತಿಗೀತೆಗಳನ್ನು ಕೂಡ ಜೊತೆ ಜೊತೆಯಲ್ಲೇ ಹಾಡುವ ಅಭ್ಯಾಸವನ್ನು ಮಾಡಿದರು. ಶಾಸ್ತ್ರೀಯ ಸಂಗೀತದ ಗಂಧವೂ ಕೂಡ ಸ್ವಲ್ಪ ಇದೆ. ನಾಟಕದಲ್ಲಿ ಅಭಿನಯಿಸುವ ಗೀಳು ಕೂಡ ಇದೆ.

ಇವರು ಸ್ವಾತಂತ್ರ್ಯ ಪೂರ್ವದಿಂದಲೂ ಕಲಾವಿದ. ಚಿಕ್ಕ ಹುಡುಗನಾಗಿದ್ದಾಗ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಅಲ್ಲಲ್ಲಿ ಸಭೆ ಸಮಾರಂಭಗಳಲ್ಲಿ ಜನಪದ ಗೀತೆಗಳನ್ನು ಹಾಡುತ್ತಿದ್ದರಂತೆ. ಆದರೆ ಅದೇ ಹವ್ಯಾಸ ಮುಂದುವರೆದುಕೊಂಡು ಬಂದು ಅನಂತರವೂ ಯಾವುದೇ ಸಾರ್ವಜನಿಕ ಸಭೆಗಳಾಗಲಿ, ರಾಜಕೀಯ ಸಭೆಗಳಲ್ಲಾಗಲಿ ಸ್ವ ಇಚ್ಛೆಯಿಂದ ಜನಪದ ಗೀತೆಗಳನ್ನು ನಿರರ್ಗಳವಾಗಿ ಹಾಡುತ್ತಾ ಬಂದರು. ಸಾರ್ವಜನಿಕವಾಗಿಯೂ ಉತ್ತಮ ಪ್ರತಿಕ್ರಿಯೆ ದೊರೆಯಿತು. ಇವರ ಹಾಡುಗಾರಿಕೆ ಹಲವು ರಾಜಕಾರಣಿಗಳನ್ನು ಬೆಳೆಸಲು ಸಹಾಯಕವಾಯಿತೆಂದು ಅವರೇ ಹೇಳುತ್ತಾರೆ. ಹಾಸನ ಜಿಲ್ಲೆಯಾದ್ಯಂತ ಕಾರ್ಯಕ್ರಮಗಳನ್ನು ನೀಡುವ ಮೂಲಕ ಚಿರಪರಿಚಿತರಾಗಿರುವ ಗೌಡಯ್ಯನವರು ಎಲ್ಲರ ಮನದಲ್ಲೂ ಶಾಶ್ವತವಾಗಿ ನೆಲೆಸಿದ್ದಾರೆ.

ಇವರು ಹಾಡುವುದರ ಜೊತೆಗೆ ಬರವಣಿಗೆಯನ್ನು ರೂಢಿಸಿಕೊಂಡಿದ್ದಾರೆ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ, ಶ್ರೀ ಬಾಹುಬಲಿ, ಶ್ರೀ ಮಂಜುನಾಥಸ್ವಾಮಿ ಬಗ್ಗೆ ಭಕ್ತಿ ಗೀತೆಗಳನ್ನು ರಚಿಸಿ ಹಾಡಿದ್ದಾರೆ. ಇವರಿಗೆ ಸ್ಥಳೀಯವಾಗಿ ಹಲವಾರು ಗೌರವಗಳು ಸಂದಿವೆ. ೨೦೦೪ರಲ್ಲಿ ಹಾಸನದಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ವತಿಯಿಂದ ನಡೆದ ಗೀತಗಾಯನ ಕಮ್ಮಟದಲ್ಲಿ ಸನ್ಮಾನಿಸಿದೆ. ಇತ್ತೀಚೆಗೆ ಕರ್ನಾಟಕ ಸರ್ಕಾರದಿಂದ ಜನಪದ ಕಲಾವಿದರ ಮಾಸಾಶನವೂ ಮಂಜೂರಾಗಿದೆ.

ಡಿ. ಸಿ. ಗೌಡಯ್ಯ
ದೊಡ್ಡ ಕುಂಚೇವು, ಹಳೆಕೋಟೆ ಹೋಬಳಿ,
ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.

## ಚನ್ನಮ್ಮ

ಸೋಬಾನೆ ಹಾಡುಗಾರ್ತಿ ಚನ್ನಮ್ಮ ಹಾಸನ ಜಿಲ್ಲೆ ಹಾಗು ತಾಲ್ಲೂಕು, ಮದ್ದಹೋಬಳಿಯ ಹಂಪನಹಳ್ಳಿ ಗ್ರಾಮದವರು. ೭೪ ವರ್ಷ. ಗಂಡ ಮೂಡಲಗಿರಿಗೌಡ, ಚನ್ನಮ್ಮನವರ ತೌರುಮನೆ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ತೊಪ್ಪನಹಳ್ಳಿ. ತಂದೆ ಚೆನ್ನೇಗೌಡ, ತಾಯಿ ಕರಿಯಮ್ಮ. ಚಿಕ್ಕ ವಯಸ್ಸಿನಲ್ಲಿಯೇ ಹಾಸನ ಜಿಲ್ಲೆಗೆ ಮದುವೆಯಾಗಿ ಬಂದ ಚನ್ನಮ್ಮನನ್ನು ಮಂಡ್ಯದಮ್ಮನೆಂದೇ ಊರಿನವರೆಲ್ಲರೂ ಕರೆಯುತ್ತಾರೆ.

ಚಿಕ್ಕವಯಸ್ಸಿನಿಂದಲೇ ತಾಯಿ ಮತ್ತು ಸುತ್ತ ಮುತ್ತಲವರಿಂದ ಕಲಿತ ಸೋಬಾನೆ ಹಾಡುಗಳನ್ನು ರಾಗವಾಗಿ ಹಾಡುತ್ತಾರೆ. ಊರಿನಲ್ಲಿ ಯಾರದೋ ಮದುವೆ, ಒಸಗೆ, ಗುಡ್ಲುಶಾಸ್ತ್ರ, ಕರುವಿನ ಮದುವೆ ಮುಂತಾದ ಸಂದರ್ಭಗಳಲ್ಲೆಲ್ಲಾ ಇವರಿಲ್ಲದಿದ್ದರೆ ಕಾರ್ಯಗಳು ನಡೆಯುವುದೇ ಇಲ್ಲವೆನ್ನುವಷ್ಟರ ಮಟ್ಟಿಗೆ ಇವರ ಹಾಡುಗಾರಿಕೆ ಅಷ್ಟು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಜೊತೆಗೆ ಇಡೀ ಊರಿಗೆ ಹಿರಿಯವರಾಗಿದ್ದು ಸುಮಾರು ೭೫ ವರ್ಷ ವಯಸ್ಸಾಗಿದ್ದು, ಊರಿನಲ್ಲಿ ಯಾವುದೇ ಕೆಲಸವಾದರೂ ಮುಂದಿರುತ್ತಾರೆ. ಇವರ ಜೊತೆಯಲ್ಲಿ ಮುಮ್ಮೇಳವಾಗಿ ಮೊಗಮ್ಮ, ಹಿಮ್ಮೇಳಗಾರರಾಗಿ ಸಾಕಮ್ಮ ಅವ್ವಯಕ್ಕ ಇರುತ್ತಾರೆ. ಈಗ ಮೊಗಮ್ಮನಿಗೆ ತುಂಬಾ ವಯಸ್ಸಾಗಿ ತಿರುಗಾಡಲು ಆಗುವುದಿಲ್ಲ. ಇವರ ಜಾಗದಲ್ಲಿ ಮತ್ತೊಬ್ಬರು ಹಾಡುವುದುಂಟು.

ಚನ್ನಮ್ಮನವರು ಮದುವೆಯ ಸಂದರ್ಭದಲ್ಲಿ ಹಸೆಯ ಹಾಡುಗಳು ಹಾಗು ಅರುಣೆ ಬರೆಯುವಾಗ ಹಾಡುವ ಹಾಡುಗಳು ತುಂಬಾ ಸೊಗಸಾಗಿರುತ್ತವೆ. ಬೀಗರ ಜರೆಯುವ ಹಾಡುಗಳು ಮತ್ತು ಕೆರೆ ಒಳಶಾಸ್ತ್ರದ ಹಾಡುಗಳನ್ನು ಹಾಡುತ್ತಾರೆ. ಕೃಷಿ ಕೆಲಸ ಮಾಡುವಾಗಲೂ ಸಂದರ್ಭಕ್ಕನುಸಾರವಾಗಿ ಹಾಡುತ್ತಾರೆ.

ಇವರು ತಮ್ಮ ತೌರಮನೆ ದೇವರಾದ ಮುತ್ತುರಾಯಸ್ವಾಮಿ ಮತ್ತು ಪಟ್ಲದಮ್ಮನ ಬಗ್ಗೆ ವಿಶೇಷವಾಗಿರುವ ಹಾಡುಗಳನ್ನು ಹಾಡುತ್ತಾರೆ. ಜೊತೆಗೆ ಲಕ್ಷ್ಮಿದೇವಿ, ಮಳಲಿಯಮ್ಮ, ಬೇಲೂರು ಚೆನ್ನಿಗರಾಯ, ಹಂಪನಹಳ್ಳಿರಾಯ, ದೊಡ್ಡಮ್ಮ, ಚಿಕ್ಕಮ್ಮ ಮುಂತಾದ ದೇವರುಗಳ ಹಾಡುಗಳನ್ನು ಹಾಡುವುದುಂಟು. ಇಷ್ಟೇ ಅಲ್ಲದೆ ಮದುವೆಯ ಸಂದರ್ಭದಲ್ಲಿ ನಡೆಯುವ ಶಾಸ್ತ್ರಗಳನ್ನು ಮುಂದೆ ನಿಂತು ವಿಶೇಷವಾಗಿ ನಡೆಸಿಕೊಡುತ್ತಾರೆ. ಜನಪದ ಅಡುಗೆ ಮಾಡುವುದರಲ್ಲಿಯೂ ತುಂಬಾ ಪ್ರಸಿದ್ಧಿ ಪಡೆದಿದ್ದಾರೆ.

ಚನ್ನಮ್ಮ,
ಹಂಪನಹಳ್ಳಿ, ಹೆರಗು ಅಂಚೆ,
ದುದ್ದ ಹೋಬಳಿ, ತಾ : ಜಿ : ಹಾಸನ.

## ಚಿಕ್ಕ ಹನುಮಯ್ಯ

ತಮಟೆ ವಾದ್ಯ ಜನಪದ ಕಲೆಗಳಲ್ಲೆಲ್ಲಾ ಅತ್ಯಂತ ಪ್ರಭಾವಿ ವಾದ್ಯ. ಇದು ಅತ್ಯಂತ ಆಕರ್ಷಕವಾಗಿದ್ದು ಇತರೆ ಕಲಾ ಪ್ರಕಾರಗಳು ಇದರ ಮುಂದೆ ಸಪ್ಪೆ ಎನಿಸುವುದುಂಟು. ಈ ತಮಟೆ ವಾದನ ಸಮೂಹದಲ್ಲಿಯೂ ಸೇರುತ್ತದೆ. ಒಂಟಿಯಾಗಿಯೂ ಬಾರಿಸುವುದುಂಟು. ಸಮೂಹದಲ್ಲಿ ಇದರ ಅನನ್ಯತೆಯನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಆದರೆ ಏಕಾಂಗಿಯಾಗಿ ಬಾರಿಸಿದಾಗ ನಿಜಕ್ಕೂ ಇದರ ವೈವಿಧ್ಯಮಯವಾದ ಗತ್ತು ಗಮ್ಮತ್ತುಗಳನ್ನು ತಿಳಿಯಲು ಸಾಧ್ಯವಾಗುತ್ತದೆ.

ಚಿಕ್ಕ ಹನುಮಯ್ಯ ತಮಟೆ ಕಲಾವಿದ. ಈತ ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು ಕಸಬಾ ಹೋಬಳಿಯ ಹೆಂಜಗೋಡನಹಳ್ಳಿಯವರು. ಇವರಿಗೆ ೭೩ ವರ್ಷಗಳಾಗಿದ್ದು ಕೇವಲ ಎರಡು ತಿಂಗಳ ಹಿಂದೆ ನಿಧನರಾಗಿದ್ದಾರೆ. ಇವರೊಬ್ಬ ಅಪರೂಪದ ಕಲಾವಿದ. ತಮಟೆಯನ್ನು ತನ್ನ ಎದೆಗೆ ಆನಿಸಿ ಎಡಗೈಯಲ್ಲೊಂದು ಬಿದಿರು ಕಡ್ಡಿ, ಬಲಗೈಯಲ್ಲೊಂದು ಕಡ್ಡಿ ಹಿಡಿದು ಸೊಂಟಕ್ಕೆ ಬಟ್ಟೆಕಟ್ಟಿಕೊಂಡು ಸೊಂಟವನ್ನು ಬಾಗಿಸಿ ತಲೆಯನ್ನು ಹಿಂದಕ್ಕೂ ಮುಂದಕ್ಕೂ ಆಡಿಸುತ್ತಾ ತಮಟೆಯನ್ನು ಬಾರಿಸುತ್ತಿದ್ದರೆ, ನೋಡುತ್ತಿದ್ದವರು ನಿಬ್ಬೆರಗಾಗಿ ನಿಂತು ನೋಡುತ್ತಿದ್ದರು. ತಮಟೆಯನ್ನು ಹೀಗೂ ಬಡಿಯಲು ಸಾಧ್ಯವೇ ಎಂದು ಆಶ್ಚರ್ಯವಾಗುತ್ತಿತ್ತು.

ಇವರು ದಲಿತ ಜನಾಂಗಕ್ಕೆ ಸೇರಿದವರಾಗಿದ್ದು, ಚಿಕ್ಕಂದಿನಿಂದಲೇ ಈ ಕಲೆಯನ್ನು ಕರಗತ ಮಾಡಿಕೊಂಡವರು. ತಮಟೆಯನ್ನು ಸುಮಾರು ಹತ್ತು ಹನ್ನೆರಡು ವರಸೆಗಳಲ್ಲಿ ಬಡಿಯುತ್ತಿದ್ದರು. ಒಂದೊಂದು ವರಸೆಯೂ ಕೂಡ ನೋಡುಗರ, ಕೇಳುಗರ ಮನಸ್ಸನ್ನು ಸೂರೆಗೊಳ್ಳುತ್ತಿತ್ತು. ವೃತ್ತಿಯಲ್ಲಿ ಕೂಲಿಕಾರರು ಹಾಗು ಅಲ್ಪ ಸ್ವಲ್ಪ ಭೂಮಿಯನ್ನು ಹೊಂದಿದ್ದರೂ ಅದು ಅರೆ ಹೊಟ್ಟೆಗೂ ಸಾಲುತ್ತಿರಲಿಲ್ಲ. ತಮಟೆ ಬಾರಿಸುವುದನ್ನೇ

ಪ್ರಮುಖ ವೃತ್ತಿಯಾಗಿ ಪರಿಗಣಿಸಿದ್ದ ಇವರು ಯಾವುದೇ ಸಭೆ, ಸಮಾರಂಭಗಳು ಮೆರವಣಿಗೆಯಲ್ಲಿ ಸ್ವ ಇಚ್ಛೆಯಿಂದ ಭಾಗವಹಿಸುತ್ತಿದ್ದರು. ಇದೇ ಅವರ ಜೀವನಕ್ಕೆ ಖುಷಿಕೊಡುತ್ತಿತ್ತು. ಇವರಿಗೆ ಕರ್ನಾಟಕ ಸರ್ಕಾರದಿಂದ ಮಾಸಾಶನ ದೊರಕುತ್ತಿತ್ತು. ಇವರಿಗೆ ಮೂರು ಜನ ಮಕ್ಕಳಿದ್ದು ಇವರೆಲ್ಲರೂ ಕೂಡ ಅಪ್ಪನ ಕಲಾ ವೃತ್ತಿಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಇವರ ಮಕ್ಕಳು ಮುಂದೆ ಅಪ್ಪನನ್ನು ಮೀರಿಸುವಂತಹ ಕಲಾ ಪ್ರತಿಭೆಯನ್ನು ಹೊಂದಿದ್ದಾರೆ.

ಚಿಕ್ಕ ಹನುಮಯ್ಯ,
ಹೆಂಜಗೋಡನಹಳ್ಳಿ, ಕಸಬಾ ಹೋಬಳಿ
ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.

## ಪೂಜಾರಿ ತಿಮ್ಮಯ್ಯ

ಪೂಜಾರಿ ತಿಮ್ಮಯ್ಯನವರು ಹಾಸನ ಜಿಲ್ಲೆ ಚನ್ನರಾಯಪಟ್ಟಣ ನಗರದ ತಂಗ್ಯಮ್ಮ ಬಡಾವಣೆಯ ನಿವಾಸಿ. ವಯಸ್ಸು ೭೨ ವರ್ಷ. ತಂದೆ ಅರುಣೆ ಜವರಯ್ಯ, ತಾಯಿ ನರಸಮ್ಮ. ಪರಿಶಿಷ್ಟ ಜಾತಿಗೆ ಸೇರಿದವರು. ಕೇವಲ ೩ನೇ ತರಗತಿಯವರೆಗೆ ಕಲಿತಿರುವ ಇವರು ತಮಟೆ, ಹರೆ, ಕೊಂಬು-ಕಹಳೆಯ ಕಲಾವಿದರು. ವೃತ್ತಿಯಲ್ಲಿ ವ್ಯವಸಾಯ, ಪೂಜಾರಿಕೆ ಕೆಲಸವನ್ನು ನಿರ್ವಹಿಸುವ ಇವರು ಪ್ರವೃತ್ತಿಯಾಗಿ ಜನಪದ ಕಲಾವಿದರು.

ತಮ್ಮ ಪೂರ್ವಜರಿಂದ ಜನಪದ ಕಲೆಗಳನ್ನು ಕಲಿತಿರುವ ಇವರು ತಮಟೆ ಬಾರಿಸುವುದರಲ್ಲಿ ಅದ್ಭುತ ಕಲಾವಿದರು. ಹರೆ ಬಾರಿಸುವುದು ಕೂಡ ವಿಶೇಷವೇ ಆಗಿರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಕಹಳೆಯನ್ನು ಕೈಯಲ್ಲಿಡಿದು ಬಾಯಿಂದ ಊದಲು ನಿಂತರೆಂದರೆ ಸುತ್ತ ಮುತ್ತಲ ಹಳ್ಳಿಗಳಿಗೆಲ್ಲ ಇವರ ಕಹಳೆನಾದ ಕೇಳಿಸುತ್ತದೆ. ಇವರ ಕಹಳೆ ಶಬ್ದ ಕೇಳಿದವರು ಇದು ಪೂಜಾರಿ ತಿಮ್ಮಯ್ಯನವರ ಕಹಳೆಯೆ ಎಂದು ಗುರುತಿಸುವಷ್ಟರ ಮಟ್ಟಿಗೆ ಇವರು ಕಹಳೆ ಪ್ರವೀಣರು.

ಇವರು ದೇವರ ಉತ್ಸವಗಳು, ಗಣಪತಿ ಮೆರವಣಿಗೆ, ಹಬ್ಬ-ಹರಿದಿನಗಳು, ಮದುವೆ ಮುಂತಾದ ಕಾರ್ಯಕ್ರಮಗಳಲ್ಲಿ ತಮ್ಮ ಪ್ರದರ್ಶನವನ್ನು ಮೆರೆದಿದ್ದಾರೆ. ಬೆಂಗಳೂರು, ಹಾಸನ, ಅರಸೀಕೆರೆ ಮುಂತಾದ ಊರುಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಇವರನ್ನು ಚನ್ನರಾಯ ಪಟ್ಟಣದ ಕರ್ನಾಟಕ ಸಂಘದವರು ಮತ್ತು ರಾಷ್ಟ್ರೀಯ ಹಬ್ಬಗಳ ಸಮಿತಿಯಿಂದ ೨೦೦೩-೦೪ರಲ್ಲಿ ಸನ್ಮಾನಿಸಿ ಗೌರವಿಸಿದ್ದಾರೆ. ಇವರೊಬ್ಬ ಸಭ್ಯಕಲಾವಿದರು. ಅಷ್ಟೇ ಸೌಜನ್ಯರು. ಸರಳತೆಯೇ ಇವರ ಮುಖ್ಯ ಗುಣವಾಗಿದೆ.

**ಪೂಜಾರಿತಿ ತಿಮ್ಮಯ್ಯ**
**ತಂಗ್ಯಮ್ಮ ಬಡಾವಣೆ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.**

# ರುದ್ರನ ಚಿಕ್ಕನ ದ್ಯಾವಯ್ಯ

ಹಾಸನ ಜಿಲ್ಲೆಯ ಅರಕಲಗೂಡಿನವರಾದ ಶ್ರೀ ರುದ್ರನ ಚಿಕ್ಕನ ದ್ಯಾವಯ್ಯ ಹಾಡುಗಾರಿಕೆಯಲ್ಲಿ ಪ್ರಸಿದ್ಧಿ ಪಡೆದವರು. ಸುಮಾರು ೭೨ ವರ್ಷ ವಯಸ್ಸಿನ ಇವರು ಹರಿಜನ ಜಾತಿಗೆ ಸೇರಿದವರು. ಸುಮಾರು ೫೦ ವರ್ಷಗಳಿಂದ ವಿವಿಧ ಜನಪದ ಗೀತೆಗಳನ್ನು ರಂಗ ಗೀತೆಗಳನ್ನು ಹಾಡುತ್ತಾ ಅರಕಲಗೂಡು ತಾಲ್ಲೂಕಿನ ಜನರ ಮನಸ್ಸನ್ನು ಸೂರೆಗೊಂಡಿದ್ದಾರೆ. ಜೊತೆಗೆ ತಂಬೂರಿ ಕಲಾವಿದರೂ ಹೌದು. ತಂಬೂರಿ ನುಡಿಸುತ್ತಾ ಹಾಡುತ್ತಾ ಕುಳಿತರೆ ದಿನಗಟ್ಟಲೆ ಹಾಡುವ ಉತ್ಸಾಹವಿದೆ. ಇಳಿವಯಸ್ಸಿನಲ್ಲಿಯೂ ಉತ್ಸಾಹದ ಚಿಲುಮೆ ಬತ್ತಿಲ್ಲ. ಇವರು ತಂಬೂರಿ ಹಾಡುವಾಗ ಹೇಳುವ ಉಪಕಥೆಗಳಂತು ಜನಮನದಲ್ಲಿ ಶಾಶ್ವತವಾಗಿ ಉಳಿಯುವಂತಹವು. ಹಾಸ್ಯದ ಹೊನಲನ್ನು ಹರಿಸುವ ಇವರು ಬಲು ಹಾಸ್ಯಗಾರರೂ ಹೌದು. ಇಡೀ ರಾತ್ರಿಯೆಲ್ಲ ಜನರು ಕಣ್ಣು ಮುಚ್ಚದಂತೆ ತಂಬೂರಿ ಮೇಳವನ್ನು ನಡೆಸುವ ಕಲೆಗಾರಿಕೆ ಇವರಲ್ಲಿದೆ.

ಈತ ಕಥನ ಕಾವ್ಯಗಳನ್ನು ಮಾತ್ರವಲ್ಲದೆ ರಂಗದ ಹಾಡುಗಳು, ಕೋಲಾಟದ ಹಾಡುಗಳು, ಭಜನೆ ಹಾಡುಗಳು ಹಾಗು ಇತರೆ ಜನಪದ ಬಿಡಿ ಗೀತೆಗಳನ್ನು ಹಾಡುವುದುಂಟು. ಇವರು ಹಾಡುವ ಪ್ರಮುಖ ಕಥನ ಗೀತೆಗಳೆಂದರೆ ಅರ್ಜುನ ಜೋಗಿ ಹಾಡು, ಬಾಲನಾಗಮ್ಮನ ಕಥೆ, ಪಿರಿಯಾಪಟ್ಟಣದ ಕಾಳಗ ಮುಂತಾದವುಗಳು.

ಈತ ಅನಕ್ಷರಸ್ಥರಾದರೂ ಅಪಾರ ಸಾಹಿತ್ಯ ಭಂಡಾರವನ್ನು ಹೊಂದಿರುವ ಒಬ್ಬ ಶ್ರೇಷ್ಠ ಹಾಡುಗಾರ. ಅನೇಕ ಕಾವ್ಯಗಳ ಆಗರವೇ ಇವರಲ್ಲಿ ಅಡಗಿದೆ. ಇವರ ಕಲಾ ಶ್ರೇಷ್ಠತೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೯೦ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ. ಇವರನ್ನು ಹಲವಾರು ಸಂಘ ಸಂಸ್ಥೆಗಳು ಹಾಗು ಹಳ್ಳಿಯ ಜನ ಗೌರವ ನೀಡಿ ಸನ್ಮಾನಿಸಿದ್ದಾರೆ.

ರುದ್ರನ ಚಿಕ್ಕನ ದ್ಯಾವಯ್ಯ
ಅರಕಲಗೂಡು ಪೇಟೆ, ಹಾಸನ ಜಿಲ್ಲೆ.

# ಕೆಂಚಯ್ಯ (ಮಿಡಿಯ)

ಶ್ರೀ ಕೆಂಚಯ್ಯ ಉ॥ ಮಿಡಿಯ ಎಂದೇ ಖ್ಯಾತಿ ಪಡೆದಿರುವ ಈತ ಆದಿ ದ್ರಾವಿಡ ಜನಾಂಗಕ್ಕೆ ಸೇರಿದವರು. ಹಾಸನ ಜಿಲ್ಲೆ ಬೇಲೂರು ತಾಲ್ಲೂಕು. ಕಸಬಾ ಹೋಬಳಿ ಐರವಳ್ಳಿ ಗ್ರಾಮದವರಾದ ಇವರು ಇಡೀ ಆ ಸುತ್ತ ಮುತ್ತಲ ಪ್ರಾಂತ್ಯಕ್ಕೆ ಹೆಸರಾಂತ ಹಲಗೆ (ತಮಟೆ) ವಾದಕ. ತಂದೆ ದೊಡ್ಡಯ್ಯ ವೃತ್ತಿಯಲ್ಲಿ ಕೃಷಿಕಾರ್ಮಿಕ. ಪ್ರವೃತ್ತಿಯಲ್ಲಿ ಹಲಗೆ ವಾದಕರು. ಇವರಿಗೆ ಈಗ ಸುಮಾರು ೭೦ ವರ್ಷವಿರಬಹುದು. ನಿಶಕ್ತರಾಗಿರುವ ಕಾರಣ ಕಳೆದ ಐದಾರು ವರ್ಷಗಳಿಂದ ತಮ್ಮ ಪ್ರವೃತ್ತಿಯನ್ನು ನಿಲ್ಲಿಸಿದ್ದಾರೆ. ಇವರಿಗೆ ಮೂರು ಗಂಡು ಮಕ್ಕಳು ಹಾಗು ಎರಡು ಹೆಣ್ಣು ಮಕ್ಕಳು. ಇವರ ಎಲ್ಲಾ ಗಂಡು ಮಕ್ಕಳು ತಮ್ಮ ತಂದೆಯ ವಾದನವನ್ನು ಬಾರಿಸುವುದನ್ನು ಕಲಿತಿರುವುದಾದರೂ ಮೊದಲ ಮಗ ಶ್ರೀ ಶೇಖರಯ್ಯ ಮಾತ್ರ ಇವರ ಮಟ್ಟಕ್ಕೇರಿ ಆ ಸುತ್ತ ಮುತ್ತಲ ಪ್ರಾಂತ್ಯಕ್ಕೆಲ್ಲ ಖ್ಯಾತರಾಗಿದ್ದಾರೆ. ಇವರ ಪತ್ನಿ ಎಲ್ಲಮ್ಮನವರು ಎರಡು ವರ್ಷಗಳ ಹಿಂದೆ ಮೃತರಾಗಿದ್ದಾರೆ. ಪತ್ನಿಯ ನೆನಪು ಕೆಂಚಯ್ಯನವರನ್ನು ಮಾತ್ರ ಕಾಡಿಸುತ್ತಿದೆ. ತನ್ನ ಕಲೆಗೆ ಹೆಂಡತಿ ಸಹಾಯ ಮಾಡುತ್ತಿದ್ದುದನ್ನು ಇಂದಿಗೂ ಇವರು ಸ್ಮರಿಸುತ್ತಾರೆ.

ಶ್ರೀ ಕೆಂಚಯ್ಯನವರ ಹಲಗೆ ವಾದನದ ಶಬ್ದಕ್ಕೆ ಹೆಜ್ಜೆಹಾಕದವರೆ ಇಲ್ಲವೆನ್ನಬಹುದು. ಸುಮಾರು ಐದೂವರೆ ಅಡಿ ಎತ್ತರದ ಹಲ್ಲಾಳಾದ ಇವರು ತಮಟೆಯನ್ನು ತಾವೆ ತಯಾರು ಮಾಡುತ್ತಿದ್ದರು. ಅದಕ್ಕೆ ಬೇಕಾದ ಚರ್ಮವನ್ನು ಹದ ಮಾಡುವುದರಲ್ಲಿ ಕೆಂಚಯ್ಯ ನಿಸ್ಸೀಮ. ಹದ ಮಾಡುವುದು ಸ್ವಲ್ಪ ಹೆಚ್ಚು ಕಡಿಮೆಯಾದರೂ ಕೆಂಚಯ್ಯ ಒಪ್ಪುತ್ತಿರಲಿಲ್ಲ. ತಮಟೆಯನ್ನು ಮಾಡಿದ ಮೇಲೆ ಅದಕ್ಕೆ ಹಗ್ಗವನ್ನು ಬಿಗಿದು ಕಟ್ಟುವುದೇ ಅವರ ಕೈಚಳಕ. ಆ ಬಿಗಿ ಕಟ್ಟೇ ಒಂದು ರೀತಿಯ ನಾದವನ್ನು ಕೊಡುತ್ತಿತ್ತು. ಇನ್ನು ಚರ್ಮದ ಹಲಗೆಯನ್ನು ಚನ್ನಾಗಿ ಬತ್ತದ ಹುಲ್ಲಿನ ಬೆಂಕಿಯಿಂದ ಕಾಯಿಸಿ ಬಾರಿಸಲು ಪ್ರಾರಂಭಿಸಿದರೆ ಅಕ್ಕ ಪಕ್ಕದ ಪಡ್ಡೆ ಹುಡುಗರು ತಮಗರಿವಿಲ್ಲದಂತೆಯೇ ಕುಣಿಯಲು

(ನರ್ತಿಸಲು) ಪ್ರಾರಂಭಿಸುತ್ತಿದ್ದರು. ಬೇಲೂರು ತಾಲ್ಲೂಕಿನ ಅಗಸರಹಳ್ಳಿ (ಐರವಳ್ಳಿಯ ಪಕ್ಕದ ಗ್ರಾಮ)ಯಲ್ಲಿ ಶ್ರೀ ಅಗಸ್ತೇಶ್ವರ ದೇವರ ದೇವಸ್ಥಾನವಿದೆ. ಈ ದೇವಸ್ಥಾನದ ಜಾತ್ರೆ ಉತ್ಸವ ಇತ್ಯಾದಿಗಳನ್ನು ಸುತ್ತಲಿನ ಏಳು ಹಳ್ಳಿಗಳು ಸೇರಿ ಆಚರಿಸುತ್ತಾರೆ. ಈ ಆಚರಣೆಯ ಮುಖ್ಯವಾದ್ಯಗಳಲ್ಲಿ ಶ್ರೀ ಕೆಂಚಯ್ಯನವರ ಹಲಗೆಯೇ ಪ್ರಧಾನವಾಗಿರುತ್ತಿತ್ತು. ಇವರು ತಮ್ಮ ಅಡ್ಡ ಹೆಸರು "ಮಿಡಿಯ" ಎಂದೇ ಪ್ರಸಿದ್ಧಿ ಪಡೆದಿದ್ದಾರೆ. ಇವರನ್ನು ಕೆಂಚಯ್ಯ ಎಂದು ಯಾರೂ ಕರೆಯುವುದಿಲ್ಲ. ಕೆಂಚಯ್ಯ ಎಂದರೆ ಗೊತ್ತಾಗುವುದಿಲ್ಲ. ಮಿಡಿಯ ಎಂದರೆ ಮಾತ್ರ ಎಲ್ಲರಿಗೂ ಗೊತ್ತಾಗುತ್ತದೆ.

ತಮಟೆ ಎರಡೂ ಕೈಗಳಿಂದ ಬಾರಿಸುವ ವಾದನವಾಗಿದ್ದು ಸುಮಾರು ಒಂದೂವರೆಯಿಂದ ಎರಡು ಅಡಿ ಸುತ್ತಳತೆಯ ಈ ಚರ್ಮದ ವಾದನವನ್ನು ಎದೆಗೆ ಆನಿಸಿ ಎಡಗೈಯಲ್ಲಿ ಸಣ್ಣ ಬಿದಿರಿನ ಕಡ್ಡಿ (ಇದಕ್ಕೆ ಮಿಡಿ ಎನ್ನುವರು) ಹಾಗು ಬಲಗೈಯಲ್ಲಿ ದೊಡ್ಡ ನುಣುಪಾದ ಬಿದಿರಿನ ಮತ್ತೊಂದು ದಪ್ಪಕಡ್ಡಿ ಹಿಡಿದು ಬಾರಿಸಬೇಕು. ಎಡಗೈಯಲ್ಲಿ ಬಾರಿಸುವ ಮಿಡಿಯ ನೈಪುಣ್ಯತೆಯೇ ಬಹು ಮುಖ್ಯ. ಇದರಲ್ಲಿ ಶ್ರೀ ಕೆಂಚಯ್ಯ ಉ॥ ಮಿಡಿಯ ಅವರು ಬಹು ನೈಪುಣ್ಯತೆ ಪಡೆದವರು. ಹಾಗಾಗಿಯೇ ಇವರಿಗೆ ಮಿಡಿಯ ಎಂಬ ಅಡ್ಡ ಹೆಸರು ಬರಲು ಕಾರಣವಾಗಿದೆ. ಒಟ್ಟಿನಲ್ಲಿ ಇವರೊಬ್ಬ ಅಪರೂಪದ ಕಲಾವಿದ ಎನ್ನಬಹುದು.

ಕೆಂಚಯ್ಯ
ಐರವಳ್ಳಿ, ಕಸಬಾ ಹೋಬಳಿ,
ಬೇಲೂರು ತಾಲೂಕು, ಹಾಸನ ಜಿಲ್ಲೆ.

## ಖತೀಜಾಬಿ

ಮುಸ್ಲಿಂ ಹಿನ್ನೆಲೆಯ ಜನಪದ ಕಥೆಗಳನ್ನು ಹೇಳುವ ಸುಮಾರು ೭೦ ವರ್ಷ ವಯಸ್ಸಿನ ಅದ್ಭುತ ಕಥೆಗಾರ್ತಿ ಖತೀಜಾಬಿ. ಇವರು ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ಹಂಚೂರು ಗ್ರಾಮದವರು. ತಂದೆ ಗೌಸ್‌ಖಾನ್ ತಾಯಿ ಸಕೀನಾಬಿ. ಗೌಸ್‌ಖಾನ್ ಪಟೇಲರಾಗಿದ್ದು ಸುತ್ತಮುತ್ತಲ ಹಳ್ಳಿಗಳಿಗೆಲ್ಲ ನ್ಯಾಯ ಹೇಳುವ ಮೂಲಕ ನ್ಯಾಯದ ಸಾಬರಾಗಿ ಚಿರಪರಿಚಿತರಾದವರು. ಇವರ ಮಗಳಾದ ಖತೀಜಾಬಿ ಕೂಡ ನ್ಯಾಯ, ನೀತಿ, ಧರ್ಮದಿಂದ ಬದುಕುತ್ತಿರುವ ವಯೋವೃದ್ಧೆ. ಸುಸಂಸ್ಕೃತವಾದ ಬದುಕನ್ನು ಬದುಕುತ್ತಿರುವವರು. ಇವರ ಮನೆತನ ಮೂಲತಃ ಕೃಷಿಕ ವರ್ಗಕ್ಕೆ ಸೇರಿದ್ದು, ಪ್ರವೃತ್ತಿಯಾಗಿ ಬೀಡಿಕಟ್ಟುವ ಕೆಲಸ.

ಖತೀಜಾಬಿಯವರನ್ನು ಇವರ ಊರ ಸಮೀಪವೇ ಇರುವ ಶಟ್ಟಿಹಳ್ಳಿಗೆ ಮದುವೆ ಮಾಡಿಕೊಟ್ಟಿತ್ತು. ಇವರ ಗಂಡ ಟೈಲರ್ ಕೆಲಸ ಮಾಡುತ್ತಿದ್ದರು. ಇವರು ಬೀಡಿ ಕಟ್ಟುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದರು. ಖತೀಜಾಬಿಯವರು ಚಿಕ್ಕ ವಯಸ್ಸಿನಲ್ಲಿದ್ದಾಗ ತನ್ನ ತಾತ, ಅಜ್ಜ ಅಜ್ಜಿಯವರಿಂದ ಕಲಿತಿದ್ದ ಜನಪದ ಕಥೆಗಳನ್ನು ಬೀಡಿ ಕಟ್ಟುವ ಸಂದರ್ಭದಲ್ಲಿ ಹೇಳುತ್ತಾರೆ. ಈಗ ಹಾಸನದಲ್ಲಿ ವಾಸವಿದ್ದು ಇಲ್ಲಿಯೂ ಬೀಡಿಕಟ್ಟುವ ಕೆಲಸವನ್ನೇ ಮುಂದುವರೆಸುತ್ತಾ ಕಥೆ ಹೇಳುವುದನ್ನೂ ಕೂಡ ಮರೆತಿಲ್ಲ. ಸುತ್ತಮುತ್ತ ಬೀಡಿಕಟ್ಟುವ ಜನರೆಲ್ಲ ಇವರ ಕಥೆಗಳನ್ನು ಕೇಳುತ್ತಾ ತಮ್ಮ ಕೆಲಸದ ಆಯಾಸವನ್ನು ಮರೆಯುತ್ತಾರೆ. ಇವರು ಕಥೆ ಹೇಳುತ್ತಾ ಕೂತರೆ ರಾತ್ರಿ ಹೋದದ್ದೇ ಗೊತ್ತಾಗುವುದಿಲ್ಲ. ಇವರಿಗೆ ಕನ್ನಡ, ಉರ್ದು ಎರಡು ಭಾಷೆಗಳು ಚನ್ನಾಗಿ ಗೊತ್ತಿದ್ದು ಕಥೆ ಹೇಳುವ ಸಂದರ್ಭದಲ್ಲಿ ಭಾಷೆಯನ್ನು ಚನ್ನಾಗಿ ಬಳಸಿಕೊಳ್ಳುತ್ತಾರೆ. ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಬೆಳೆದದ್ದರಿಂದ ಗ್ರಾಮ ಸಂಸ್ಕೃತಿಯ ಒಳತಿರುಳನ್ನು ಆಳವಾಗಿ ಬಲ್ಲವರು. ಆದ್ದರಿಂದ ಇವರ ಕಥೆಗಳಲ್ಲೆಲ್ಲಾ ನೆಲಸಂಸ್ಕೃತಿಯ ಸೊಗಡು ಎದ್ದು ಕಾಣುತ್ತದೆ.

ಇವರು ಹೇಳುವ ಕಥೆಗಳಲ್ಲಿ ಸುಮಾರು ೪೫ ಕಥೆಗಳನ್ನು ಡಾ. ಎಂ. ಎಸ್. ಶೇಖರ್ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇವರಲ್ಲಿರುವ ಪ್ರತಿಭೆಯನ್ನು ಗುರುತಿಸಿ ೧೯೯೯ರಲ್ಲಿ ಹಾಸನದ ಜನಪದ ಕಲಾ ಮೇಳದ ಸಂದರ್ಭದಲ್ಲಿ ಸನ್ಮಾನಿಸಿ ಗೌರವ ನೀಡಿದೆ. ಇವರೊಬ್ಬ ಅಪರೂಪದ ಜನಪದ ಕಥೆಗಾರ್ತಿ. ಹಿಂದೂ ಮುಸ್ಲಿಂ ಧರ್ಮದ ಸಾಮರಸ್ಯದ ಕೊಂಡಿಯಾಗಿದ್ದಾರೆ. ಇವರ ಕಥೆಗಳಲ್ಲಿಯೂ ಕೂಡ ಸಾಮರಸ್ಯತೆ ಎದ್ದು ಕಾಣುತ್ತದೆ.

ಖತೇಜಾಬಿ,
ಮಂಡಿಮೊಹಲ್ಲಾ, ಹೊಸಲೈನ ರಸ್ತೆ,
ಹಾಸನ.

# ಕೆಂಚಪ್ಪ

ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಕಸಬಾ ಹೋಬಳಿ ತಳಲೂರು ಗ್ರಾಮದವರು ಕೆಂಚಪ್ಪ. ಇವರಿಗೆ ೭೦ ವರ್ಷ. ತಂದೆ ತಿಮ್ಮಯ್ಯ. ಹರಿಜನ ಬಲಗೈ ಜನಾಂಗಕ್ಕೆ ಸೇರಿದವರು. ಕೃಷಿ ಕಾರ್ಮಿಕರಾದ ಇವರು ತಮ್ಮ ಪ್ರವೃತ್ತಿಯಾಗಿ ವಾಲಗ ಊದುವುದು, ತಮ್ಮಟೆ ಬಾರಿಸುವುದು, ಹರೆ ಬಡಿಯುವುದರಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿದ್ದಾರೆ.

ವಾಲಗ ಊದುವಾಗ ಜನಪದ ಹಾಡುಗಳನ್ನು ನುಡಿಸುವುದನ್ನು ಕಾಣಬಹುದು. ನಾನಾ ರೀತಿಯ ವೈವಿಧ್ಯಮಯವಾದ ನುಡಿ ಇವರ ವಾಲಗದ ಶೃತಿಯಿಂದ ಕೇಳಿಬರುತ್ತದೆ. ತಮಟೆಯಲ್ಲಿ ಎಂಟು ಹತ್ತು ರೀತಿಯ ವರಸೆಯನ್ನು ಬಾರಿಸುತ್ತಾರೆ. ಅದರ ಮಟ್ಟು, ಗತ್ತುಗಳು ತುಂಬಾ ಆಕರ್ಷಕವಾಗಿರುತ್ತವೆ. ತಮಟೆಬಾರಿಸುತ್ತಾ ಕುಣಿಯುವಾಗ ಆ ನೃತ್ಯ ಶಾಸ್ತ್ರೀಯ ಚೌಕಟ್ಟಿನ ಮಟ್ಟುಗಳನ್ನು ಹೋಲುವುದುಂಟು. ಅಂತೆಯೇ ಹರೆ ಬಾರಿಸುವುದು ಕೂಡ ವಿಶೇಷವೇ ಆಗಿರುತ್ತದೆ. ಎಡಗೈಯಲ್ಲಿ ಬಾಗಿರುವ ಕಡ್ಡಿಯಿಂದ ಉಜ್ಜುತ್ತಾ ಇದ್ದರೆ ಅದರಿಂದ ಬರುವ ಜೀ ಜೀ ಶಬ್ದವು ಕಿವಿಗೆ ಬಹಳ ಇಂಪಾಗಿರುತ್ತದೆ. ಬಲಗೈಯಲ್ಲಿ ಬಾರಿಸುವ ಶಬ್ದ ಕಿವಿಗೆ ಗಡಚಿಕ್ಕುತ್ತಿರುತ್ತದೆ.

ಇವರು ಮದುವೆ, ದೇವರ ಉತ್ಸವ, ಜಾತ್ರೆ ಮುಂತಾದ ಸಂದರ್ಭಗಳಲ್ಲೆಲ್ಲಾ ತಮ್ಮ ವಾದ್ಯದ ನಾದ ಮಾಧುರ್ಯವನ್ನು ಮನ ಮೋಹಕವಾಗುವಂತೆ ತೋರಿಸುವುದುಂಟು. ಸರ್ಕಾರದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಜಿಲ್ಲಾದ್ಯಾಂತ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ದೆಹಲಿ, ಮುಂಬೈ ಮುಂತಾದ ಹೊರರಾಜ್ಯಗಳಲ್ಲಿಯೂ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಮೈಸೂರು ದಸರಾ, ರಾಜ್ಯೋತ್ಸವ, ಬೆಂಗಳೂರು ಮುಂತಾದ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿ ಕಾರ್ಯಕ್ರಮ ನೀಡಿದ್ದಾರೆ.

**ಕೆಂಚಪ್ಪ ತಳಲೂರು, ಕಸಬಾ ಹೋಬಳಿ, ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.**

# ಪಟೇಲ್ ಮಂಜೇಗೌಡ

ಭಾಗವಂತಿಕೆ ಮೇಳ ದಕ್ಷಿಣ ಕರ್ನಾಟಕದ ಕೆಲವೇ ಜಿಲ್ಲೆಗಳಲ್ಲಿರುವ ಒಂದು ಪ್ರಮುಖ ನೃತ್ಯ-ಗೀತ ಪ್ರಧಾನವಾದ ಜನಪದ ಕಲೆ. ಇಲ್ಲಿ ಭಾಗವಂತಿಕೆ ಹಾಡುಗಳು ಮತ್ತು ಪಟ(ಧ್ವಾಳ) ಕುಣಿತ ಮುಖ್ಯ ಅಂಶಗಳು. ಇದು ಹೆಸರೇ ಸೂಚಿಸುವಂತೆ ವೈಷ್ಣವ ಸಂಪ್ರದಾಯವನ್ನು ಪ್ರತಿನಿಧಿಸುವ ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ಕಲೆ. ಇದು ಹಾಸನ ಜಿಲ್ಲೆ, ಮಂಡ್ಯ ಜಿಲ್ಲೆ, ತುಮಕೂರು ಜಿಲ್ಲೆಗಳಲ್ಲಿ ವಿಶೇಷವಾಗಿದೆ. ಭಾಗವಂತಿಕೆ ಸಂಪ್ರದಾಯದ ಕೇಂದ್ರ ಮೇಲುಕೋಟೆ ಎಂದು ಹೇಳುವುದುಂಟು. ಹಾಸನ ಜಿಲ್ಲೆಯಲ್ಲಿ ಪ್ರಮುಖವಾಗಿ ಚನ್ನರಾಯಪಟ್ಟಣ ತಾಲೂಕಿನ ಜಿನ್ನೇನಹಳ್ಳಿ, ಮೇಟಿಕೆರೆ, ಕುಂಬೇನಹಳ್ಳಿ, ನುಗ್ಗೇಹಳ್ಳಿಗಳಲ್ಲಿ ಈ ಕಲೆ ಇದೆ. ಜಿನ್ನೇನಹಳ್ಳಿಯೇ ಹಾಸನ ಜಿಲ್ಲೆಯಲ್ಲಿ ಕೇಂದ್ರ ಸ್ಥಾನ ಎಂದು ಹೇಳಬಹುದು. ಭಾಗವಂತಿಕೆ ಮೇಳದಲ್ಲಿ ಮುಖ್ಯವಾಗಿ ರಾಮಾಯಣ, ಮಹಾಭಾರತ, ಭಾಗವತಗಳಿಗೆ ಸಂಬಂಧಿಸಿದ ಹಾಡುಗಳು ಭಾಗವಂತಿಕೆ ಕಟ್ಟುವುದರಿಂದ ಪ್ರಾರಂಭವಾಗಿ ದಾಳವನ್ನು ಕೆಳಗಿಡುವವರೆಗೆ ಬರುತ್ತವೆ. ಈ ಸಂಪ್ರದಾಯದವರು ತಿರುಪತಿ ತಿಮ್ಮಪ್ಪ, ಮೇಲುಕೋಟೆ ಚಲುವರಾಯಸ್ವಾಮಿ, ಆಂಜನೇಯ, ನರಸಿಂಹಸ್ವಾಮಿ, ರಂಗಸ್ವಾಮಿ, ಬೇಟೆರಾಯ, ಬೇಲೂರು ಚನ್ನಕೇಶವ, ಕಾವೇಟಿರಂಗ ಮುಂತಾದ ದೇವರುಗಳಿಗೆ ನಡೆದುಕೊಳ್ಳುತ್ತಾರೆ. ಭಾಗವಂತಿಕೆ ಮೇಳ ಹೊರಡುವುದು. ಕಾರ್ತಿಕ ದೀಪಾವಳಿಯ ಸಂದರ್ಭದಲ್ಲಿ. ಭಾಗವಂತಿಕೆ ಹಾಡುಗಳನ್ನು ಹೇಳುತ್ತಾ ಪಟಗಳು, ಚೂರಿಪಾನುಗಳನ್ನು ಹಿಡಿದು ಹೊರಡುವುದಕ್ಕೆ ಊರಾಡುವುದು, ದೀವಳಿಗೆ ದಂಡು, ಹರಿಸೇವೆ, ಗೋವಿಂದ ಸೇವೆ ಮುಂತಾಗಿ ಹೇಳುತ್ತಾರೆ.

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಹಿರಿಸಾವೆ ಹೋಬಳಿಯ ಜಿನ್ನೇನಹಳ್ಳಿ ಗ್ರಾಮದವರು ಪಟೇಲ್ ಮಂಜೇಗೌಡರು. ವಯಸ್ಸು ೭೦ ವರ್ಷ. ತಂದೆ ಚನ್ನೇಗೌಡರು. ಒಕ್ಕಲಿಗ ಜನಾಂಗಕ್ಕೆ ಸೇರಿದವರು. ವೃತ್ತಿಯಲ್ಲಿ ವ್ಯವಸಾಯ. ಪ್ರವೃತ್ತಿಯಲ್ಲಿ

ಭಾಗವಂತಿಕೆ ಕಲಾವಿದರು. ಎಸ್. ಎಸ್. ಎಲ್. ಸಿ. ಯವರೆಗೆ ವಿದ್ಯಾಭ್ಯಾಸ ಮಾಡಿರುವ ಇವರು ಜಿನ್ನೇನಹಳ್ಳಿ ಗ್ರಾಮದವರೇ ಆದ ಪಟೇಲ್ ಬೊಮ್ಮರಾಯಗೌಡರಿಂದ ಈ ಕಲೆಯನ್ನು ಕಲಿತರು. ಪ್ರತಿ ವರ್ಷ ತಮ್ಮದೇ ತಂಡವನ್ನು ಕಟ್ಟಿಕೊಂಡು ದೀಪಾವಳಿಯ ಸಂದರ್ಭದಲ್ಲಿ ವೈಷ್ಣವ ಸಂಪ್ರದಾಯದಂತೆ ಊರಾಡಲು ಹಾಡುಗಳನ್ನು ಹೇಳುತ್ತಾ ಹೋಗುತ್ತಾರೆ. ಇದೊಂದು ಸಂಪ್ರದಾಯವು ಹೌದು.

ಪಟೇಲ್ ಮಂಜೇಗೌಡರು ಸಂಪ್ರದಾಯಕ್ಕಷ್ಟೇ ಈ ಕಲೆಯನ್ನು ಸೀಮಿತಗೊಳಿಸಿಕೊಳ್ಳದೆ ಮೈಸೂರು ದಸರಾ, ಕನ್ನಡ ಸಾಹಿತ್ಯ ಪರಿಷತ್ತಿನ ಕಲಾ ಪ್ರದರ್ಶನಗಳಲ್ಲಿಯೂ ಭಾಗಿಯಾಗಿದ್ದಾರೆ. ಜಾನಪದ ಲೋಕ, ಬೆಂಗಳೂರು, ಜಿಲ್ಲಾ ಉತ್ಸವಗಳು, ಸಾಹಿತ್ಯ ಸಮ್ಮೇಳನಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಜೊತೆಗೆ ಆಕಾಶವಾಣಿ ಕಲಾವಿದರೂ ಹೌದು. ಇವರು ಮುಖ್ಯವಾಗಿ ರಾಮಾಯಣ, ಮಹಾಭಾರತ, ಕೃಷ್ಣಲೀಲೆ, ದಶಾವತಾರ ಮುಂತಾದ ಹಾಡುಗಳನ್ನು ಹೇಳುತ್ತಾರೆ.

ಇವರೊಂದಿಗೆ ಜಿನ್ನೇನಹಳ್ಳಿ ಗ್ರಾಮದವರೆ ಆದ ಜಿ. ಬಿ. ಕೃಷ್ಣಮೂರ್ತಿ, ಜೆ. ಸಿ. ಕೇಶವಮೂರ್ತಿ, ನಾಗರಾಜೇಗೌಡ, ಬೊಮ್ಮರಾಯಗೌಡ, ಕೃಷ್ಣೇಗೌಡ, ಜಯಣ್ಣ, ಚನ್ನೇಗೌಡ, ಸಿ. ರಾಮೇಗೌಡ, ಗೋವಿಂದಪ್ಪ, ಜೆ. ಬಿ. ಕೇಶವಮೂರ್ತಿ, ಜೆ. ಬಿ. ನಾಗರಾಜು, ದೇವೇಗೌಡ, ಜೆ. ಬಿ. ನಂಜೇಗೌಡ, ಜೆ. ಕೆ. ಪುಟ್ಟಸ್ವಾಮಿ ಗೌಡ, ಹೊನ್ನಯ್ಯ ಮುಂತಾದವರು ಭಾಗವಂತಿಕೆ ಮೇಳವನ್ನು ಮಾಡುತ್ತಾರೆ.

ಮಂಜೇಗೌಡರು ಭಾಗವಂತಿಕೆ ಹಾಡುಗಳನ್ನು ಮೂಲಧಾಟಿಯಲ್ಲಿ ಹಾಡುತ್ತಿರುವ ಅದ್ಭುತ ಕಲಾವಿದ ಇವರನ್ನು ಮೀರಿಸುವಂತಹ ಭಾಗವಂತಿಕೆ ಕಲಾವಿದರು ಮತ್ತೊಬ್ಬರಿಲ್ಲ ಎಂದು ಹೇಳಬಹುದು.

**ಪಟೇಲ್ ಮಂಜೇಗೌಡ,**<br>
**ಜಿನ್ನೇನಹಳ್ಳಿ, ಹಿರಿಸಾವೆ ಹೋಬಳಿ,**<br>
**ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.**

## ಪಾಪಮ್ಮ

ಪಾಪಮ್ಮ ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಬಸವ ನಾಯಕನಹಳ್ಳಿಯವರು. ವಯಸ್ಸು ಸುಮಾರು ೭೦ ವರ್ಷ. ಗಂಡ ತಿಮ್ಮೇಗೌಡರು. ಪಾಪಮ್ಮ ಚಿಕ್ಕ ವಯಸ್ಸಿನಿಂದಲೂ ಹಾಡುಗಾರಿಕೆಯನ್ನು ಕಲಿತವರು. ಇವರಿಗೆ ಈ ಕಲೆ ಅನುವಂಶೀಯವಾಗಿ ಬಂದಿರುವವಂತಹದ್ದು. ತನ್ನ ತಾಯಿ ಬಹಳ ಜನಪದ ಹಾಡುಗಳನ್ನು ಹಾಡುತ್ತಿದ್ದರು. ನಾನು ಚಿಕ್ಕ ಹುಡುಗಿಯಾಗಿದ್ದಾಗ ತಾಯಿಯ ಬಳಿ ಇದ್ದು ಎಲ್ಲವನ್ನು ಕಲಿತುಕೊಂಡೆ. ನನಗೆ ಓದಲು ಬರೆಯಲು ಬರುವುದಿಲ್ಲ. ಎಂದು ಬಹಳ ಮುಗ್ಧತೆಯಿಂದ ಇವರು ಹೇಳಿಕೊಳ್ಳುತ್ತಾರೆ. ಮದುವೆಯಾಗಿ ಬಂದ ನಂತರವೂ ನನ್ನ ಗಂಡನ ಮನೆಯಲ್ಲಿ ಪ್ರೋತ್ಸಾಹ ಸಿಕ್ಕಿತು. ಯಾರದೇ ಮನೆಯಲ್ಲಿ ಮದುವೆ, ದೇವರ ಕಾರ್ಯಗಳು, ಒಸಗೆ, ಋತುಮತಿಯಾದಾಗ ಗುಡಿಸಲು ಕೂಡುವ ಶಾಸ್ತ್ರ ನಡೆಯುವಾಗ ಕರೆಯುತ್ತಾರೆ. ಆಗ ನಾನು ಮತ್ತು ರಂಗಮ್ಮ ಜೊತೆಯಲ್ಲಿ ಹೋಗಿ ಹಾಡುತ್ತೇವೆ. ನಮ್ಮ ಜೊತೆಗೆ ಇಬ್ಬರು ಹಿಮ್ಮೇಳಗಾರರು ಇದ್ದಾರೆ ಎಂದು ಹೇಳಿ ತನ್ನ ಅತ್ತೆ ಮಾವ ಗಂಡ ಎಲ್ಲರೂ ಯಾವೊತ್ತು ಬೇಸರ ಮಾಡಿಲ್ಲ ಎಂದು ತನ್ನ ಮನೆಯವರನ್ನು ನೆನೆಯುತ್ತಾರೆ.

ಇವರಿಗೆ ಎಲ್ಲಾ ರೀತಿಯ ಜನಪದ ಹಾಡುಗಳು ಬರುತ್ತವೆ. ಸೋಬಾನೆ ಹಾಡುಗಳು, ದೇವರ ಬಗ್ಗೆ ಹಾಡುಗಳು, ಬಿಡಿ ಜನಪದ ಗೀತೆಗಳು, ಕಥನ ಗೀತೆಗಳು, ರಾಗಿ ಬೀಸುವ ಪದಗಳು ಮುಂತಾದ ಹಾಡುಗಳನ್ನು ನಿರರ್ಗಳವಾಗಿ ಹಾಡುತ್ತಾರೆ. ಇವರನ್ನು ಹಾಡಲು ಕೂರಿಸಿದರೆ ರಾತ್ರಿ–ಹಗಲು ಹೋಗುವುದೇ ಗೊತ್ತಾಗುವುದಿಲ್ಲವಂತೆ. ನಿದ್ರೆ ಆಹಾರಗಳನ್ನು ಮರೆತು ಹಾಡುವ ಗೀಳು ಇವರಲ್ಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ಕಂಠ ತುಂಬಾ ಮಾಧುರ್ಯದಿಂದ ಕೂಡಿದೆ. ಹಾಡುವುದಕ್ಕೆ ಕುಳಿತರೆ ಕಂಚಿನ ಕಂಠದಂತಹ ಶಬ್ದ ಹೊರಹೊಮ್ಮುತ್ತದೆ. ಹಳೆಯ ತಲೆಮಾರಿನ ಕೊಂಡಿಯಾಗಿ ಇವರು ಇದ್ದು,

ಇವರ ನಂತರ ಇಂತಹ ಹಾಡುಗಳನ್ನು ಹಾಡುವವರು ಯಾರು ಇಲ್ಲವಲ್ಲ. ಯಾರು ಇವರಿಂದ ಕಲಿಯಲಿಲ್ಲವಲ್ಲ ಎಂಬ ಕೊರಗು ಪಾಪಮ್ಮನವರಿಗೂ ಇದೆ. ಹಾಗೆಯೇ ಊರವರಿಗೂ ಇದೆ.

ಪಾಪಮ್ಮ, ಬಸವನಾಯಕನಹಳ್ಳಿ,
ಮಲ್ಲೇದೇವರಪುರ ಅಂಚೆ,
ಹಳೆಕೋಟೆ ಹೋಬಳಿ,
ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.

# ಸತ್ಯಪ್ಪ

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಆನೇಕೆರೆ ಗ್ರಾಮದವರು ಶ್ರೀ ಸತ್ಯಪ್ಪ. ವಯಸ್ಸು ೭೦ ವರ್ಷ. ತಂದೆ ನರಸಯ್ಯ, ತಾಯಿ ಕಾಳಮ್ಮ. ಬಣಜಿಗಶೆಟ್ಟರ ಜಾತಿಗೆ ಸೇರಿದವರು. ಇವರು ಮೂಲತಃ ರಾಗಿ ಬೀಸುವ ಪದಗಳನ್ನು ಹಾಡುವ, ಭಜನೆ ಮಾಡುವ ಕಲಾವಿದರು. ಇವರು ತಮ್ಮದೇ ಆದ ತಂಡವನ್ನು ಕಟ್ಟಿಕೊಂಡು ಹಳ್ಳಿ ಹಳ್ಳಿಗಳಿಗೆಲ್ಲ ಹಾಡಲು ಹೋಗುವುದುಂಟು. ಇವರ ತಂಡದಲ್ಲಿ ನಂಜುಂಡೇಗೌಡ, ಅಣ್ಣಯ್ಯ, ನಂಜಪ್ಪ, ಕೃಷ್ಣಪ್ಪ ಮುಂತಾದವರಿದ್ದಾರೆ.

ಶ್ರೀ ಸತ್ಯಪ್ಪನವರು ಚಿಕ್ಕವಯಸ್ಸಿನಿಂದಲೇ ತಮ್ಮ ತಾಯಿಯವರಿಂದ ರಾಗಿ ಬೀಸುವ ಹಾಡುಗಳನ್ನು ಕಲಿತರಂತೆ. ತಾಯಿ ರಾಗಿ ಬೀಸಲು ಕುಳಿತಾಗ ತಾನು ಕೂಡ ಎದ್ದು ತಾಯಿಯ ಜೊತೆಗೆ ರಾಗಿ ಕಲ್ಲಿನ ಗೂಟಕ್ಕೆ ಕೈಗೂಡಿಸುತ್ತಿದ್ದೆ. ಇದರಿಂದ ತಾಯಿಗೂ ಕೆಲಸ ಹಗುರವಾಗುತ್ತಿತ್ತು. ನಾನು ಹಾಡುಗಳನ್ನು ಕಲಿತುಕೊಂಡೆ ಎಂಬುದಾಗಿ ಹೇಳುತ್ತಾರೆ.

ಇವರಿಂದ ಹಲವಾರು ಹೆಂಗಸರು ರಾಗಿ ಬೀಸುವ ಪದಗಳನ್ನು ಕಲಿತಿದ್ದಾರೆಂದು ಸತ್ಯಪ್ಪ ಹೇಳುತ್ತಾರೆ. ಜೊತೆಗೆ ಭಜನೆ ಹಾಡುಗಳನ್ನು ನಿತ್ಯ ಹಾಡುವ ಪರಿಪಾಠ ಇದೆ. ಸಂಜೆ ಹೊತ್ತು ಸಾರಾಯಿಗೆ ಹೋಗುವ ಯುವಕರನ್ನು ತಡೆದು ಭಜನೆ ಹೇಳಲು ಕೂರಿಸಿಕೊಳ್ಳುತ್ತೇನೆ. ಇದರಿಂದ ಅವರು ಕುಡಿಯುವುದೂ ತಪ್ಪುತ್ತದೆ. ಈ ಕಡೆ ಹಾಡೇಳುವುದರಿಂದ ಮನಸ್ಸಿಗೆ ನೆಮ್ಮದಿಯೂ ಕೂಡ ದೊರಕುತ್ತದೆಂದು ಹೇಳುತ್ತಾರೆ. ಭಜನೆ ಹಾಡುವಾಗ ಕೇವಲ ತತ್ವಪದಗಳಿಗಷ್ಟೇ ಸೀಮಿತಗೊಳಿಸುವುದಿಲ್ಲ. ವಿವಿಧ ರೀತಿಯ ಜನಪದ ಹಾಡುಗಳನ್ನು ಹಾಡುತ್ತಾರೆ. ಇವರಿಂದ ಹಲವಾರು ಯುವಕರು ಹಾಡುಗಳನ್ನು ಕಲಿತಿದ್ದಾರೆ.

ಸತ್ಯಪ್ಪ, ಆನೇಕೆರೆ,
ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.

## ಅಗಸರ ಮಾರಣ್ಣ

ಹಾಸನ ಜಿಲ್ಲೆ, ಹೊಳೆನರಸೀಪುರ ತಾಲೂಕು, ಹಳೇಕೋಟೆ ಹೋಬಳಿಯ ಮಳಲಿ ಗ್ರಾಮದ ಅಗಸರ ಮಾರಣ್ಣ, ಕೋಲಾಟದ ಕಲಾವಿದ. ಸುಮಾರು ಎಪ್ಪತ್ತು ವರ್ಷದಾಟಿರುವ ಮಾರಣ್ಣ ಬಡಕುಟುಂಬದಲ್ಲಿ ಜನಿಸಿ ಮಡಿವಾಳ ವೃತ್ತಿ ಹಾಗು ಕೃಷಿ ಕೆಲಸವನ್ನು ವೃತ್ತಿಯಾಗಿ, ಕೋಲಾಟವನ್ನು ಪ್ರವೃತ್ತಿಯಾಗಿ ಮಾಡಿಕೊಂಡು ಬಂದವರು. ಇವರ ವಿದ್ಯಾಭ್ಯಾಸ ಹಿಂದಿನ ಲೋಯರ್ ಸೆಕೆಂಡರಿ. ಮಳಲಿಯ ಕರಿಯಮ್ಮನ ಗಿಡ್ಡಪ್ಪನವರಿಂದ ಕೋಲಾಟವನ್ನು ಕಲಿತು ಹೊಳೆನರಸೀಪುರ ತಾಲ್ಲೂಕಿಗೆ ಮಾತ್ರವಲ್ಲದೆ ಆಚೆಗೂ ತನ್ನ ಕೋಲಾಟದ ಕೈಚಳಕವನ್ನು ತೋರಿ ಜನರಿಂದ ಸೈ ಎನಿಸಿಕೊಂಡವರು. ಹಳ್ಳಿಗಳ ಮನೆ ಮನೆಯಲ್ಲೂ ಮಾತಾಗಿ ಉಳಿದಿರುವವರು. ಮಾರಣ್ಣನವರು ಕೇವಲ ಜನಪದ ಬಿಡಿಗೀತೆಗಳನ್ನು ಮಾತ್ರ ಕೋಲಾಟಕ್ಕೆ ಆಯ್ದುಕೊಳ್ಳದೆ ರಾಮಾಯಣ, ಮಹಾಭಾರತ, ಶನಿದೇವರ ಹಾಡುಗಳನ್ನು ಕೂಡ ಬಳಸಿಕೊಂಡಿದ್ದಾರೆ. ಹಾಡುಗಳನ್ನು ಹಾಡುವಾಗ ಭಾಷಾ ಶುದ್ಧತೆಯನ್ನು ಕಾಯ್ದುಕೊಂಡಿರುವ ಇವರು ಕೋಲಾಟದಲ್ಲಿ ಅದ್ವಿತೀಯ ನೈಪುಣ್ಯತೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದಾರೆ.

ಮಾರಣ್ಣನವರು ತಮ್ಮ ಬದುಕನ್ನು ಕೇವಲ ಕೃಷಿ ಕಲೆಗೆ ಮಾತ್ರ ಸೀಮಿತಗೊಳಿಸಿಕೊಳ್ಳದೆ ಸಾಮಾಜಿಕ ಹಾಗು ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿಯೂ ಕೂಡ ಸೇವೆಸಲ್ಲಿಸುತ್ತಾ ಬಂದಿದ್ದಾರೆ. ಮಳಲಿಯಲ್ಲಿ ಆರಂಭವಾದ ಶ್ರೀ ಲಕ್ಷ್ಮಿನಾರಾಯಣ ಯುವಕ ಸಂಘದ ಪದಾಧಿಕಾರಿಯಾಗಿ ಕೆಲಸ ಮಾಡುವುದರೊಂದಿಗೆ ಈ ಸಂಘದಲ್ಲಿ ಅನೇಕ ಯುವಕರು ಸೇರಿ ಹಲವಾರು ಕಾರ್ಯಕ್ರಮಗಳನ್ನು ಮಾಡುವಂತೆ ಪ್ರೋತ್ಸಾಹಿಸಿದ್ದಾರೆ. ಕೋಲಾಟ ಪ್ರದರ್ಶನಾತ್ಮಕ ನೃತ್ಯಗಳಲ್ಲಿ ಒಂದು ಪ್ರಸಿದ್ಧ ಕಲೆಯಾಗಿದ್ದು ಈ ಕಲೆಯಲ್ಲಿ ನುರಿತ, ಪರಿಣಿತರಾದ ಮಾರಣ್ಣ ಇಂದಿನ ಯುವ ಕೋಲಾಟದ ಕಲಾವಿದರಿಗೆ ಮಾರ್ಗದರ್ಶನ ಹಾಗು ಆದರ್ಶ ಪ್ರಾಯ ಎಂದರೆ ತಪ್ಪಾಗುವುದಿಲ್ಲ.

ಇವರಲ್ಲಿರುವ ಅದ್ಭುತ ಕಲಾ ಪ್ರೌಢಿಮೆಯನ್ನು ಗುರುತಿಸಿ ಸ್ವಂತ ಗ್ರಾಮದಲ್ಲಿ ಹಾಗು ಸುತ್ತ ಮುತ್ತಲ ಗ್ರಾಮದವರು ಗೌರವಿಸಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯೂ ಕೂಡ ಇವರನ್ನು ೧೯೯೨ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ಹಾಸನ ಜಿಲ್ಲೆಯ ಹಲವಾರು ಜನಪದ ಕಥೆಗಳಲ್ಲಿ ಅಗಸರ ಮಾರಣ್ಣ ಒಬ್ಬ ಕಥಾನಾಯಕನಾಗಿಯೂ ಬಂದಿರುವುದನ್ನು ಜನಪದ ಕಥೆಗಳಿಂದ ತಿಳಿಯಬಹುದಾಗಿದೆ.

**ಅಗಸರ ಮಾರಣ್ಣ,**
**ಮಳಲಿ, ಹಳೆಕೋಟೆ ಹೋಬಳಿ,**
**ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.**

# ಸಣ್ಣಗಿಡ್ಡಯ್ಯ

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ದಂಡಿಗನಹಳ್ಳಿ ಹೋಬಳಿಯ ಆನೆಕೆರೆ ಗ್ರಾಮದ ಶ್ರೀ ಸಣ್ಣಗಿಡ್ಡಯ್ಯನವರಿಗೆ ಸುಮಾರು ೭೦ ವರ್ಷಗಳಾಗಿದ್ದು ಆರು ತಿಂಗಳ ಹಿಂದೆ ನಿಧನ ಹೊಂದಿದ್ದಾರೆ. ಇವರ ತಂದೆ ಶ್ರೀ ಈರಯ್ಯ. ಇವರು ಮೂಲತಃ ಚಿಕ್ಕಮ್ಮ ದೇವತೆಯ ಪೂಜಾರಿಯಾಗಿ ವೃತ್ತಿ ಮಾಡಿಕೊಂಡು ಬಂದವರು. ಆದರೆ ಇದರಿಂದ ಹೊಟ್ಟೆ ತುಂಬುತ್ತಿಲ್ಲ. ಜೊತೆಗೆ ಸಣ್ಣದಾಗಿ ಕೃಷಿಯನ್ನು ಅವಲಂಬಿಸಿದರೂ ಅದೂ ಕೂಡ ಅಂತಹ ಪ್ರಯೋಜನವನ್ನು ಎಂದಿಗೂ ತಂದು ಕೊಟ್ಟಿಲ್ಲ. ಇವರು ಸತ್ತಾಗ ಇವರ ನೆನಪಿಗಾಗಿ ಊರಿನ ಜನಗಳೆಲ್ಲಿ ಸೇರಿ ಶ್ರದ್ಧಾಂಜಲಿ ನಡೆಸಿದ್ದು, ಆ ಸಮಾರಂಭದ ಬ್ಯಾನರ್ ಈಗಲೂ ಊರಿನ ಮುಂಭಾಗದಲ್ಲಿದೆ.

ಇವರು ಮೂಲತಃ ತಮಟೆ ಕಲಾವಿದರಾಗಿದ್ದು ಅದ್ಭುತವಾಗಿ ತಮಟೆ ಬಾರಿಸುತ್ತಾರೆ. ಸುಮಾರು ಹತ್ತು ಹನ್ನೆರಡು ವರ್ಷದ ಬಾಲಕನಾಗಿದ್ದಾಗಲೇ ಈ ಕಲೆಯನ್ನು ಕರಗತ ಮಾಡಿಕೊಂಡ ಇವರು ಹಾಸನ ಜಿಲ್ಲೆಯ ಹಲವಾರು ಹಳ್ಳಿಗಳಲ್ಲಿ ತಮ್ಮ ತಮಟೆ ಪ್ರದರ್ಶನ ನೀಡಿ ಜನಮನ ಗೆದ್ದಿದ್ದಾರೆ. ಹಾಸನದ ಜಾತ್ರೆ, ಸಂತೆಗಳಲ್ಲಿ ಇವರ ಪ್ರದರ್ಶನ ಸದಾ ಇರುತ್ತಿತ್ತು. ಅಲ್ಲದೆ ಹಲವಾರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಮಟೆವಾದನ ಮಾಡಿರುವುದುಂಟು.

ಇವರಲ್ಲಿದ್ದ ಅದ್ಭುತ ಕಲೆಗಾರಿಕೆಯನ್ನು ಕಂಡ ಜೀ.ಶಂ. ಪರಮಶಿವಯ್ಯನವರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ೧೯೭೬ರಲ್ಲಿ ಜರುಗಿದ ಜನಪದ ಕಲಾ ಪ್ರದರ್ಶನಕ್ಕೆ ಇವರನ್ನು ಆಹ್ವಾನಿಸಿ ಈತನಿಂದ ತಮಟೆ ವಾದನದ ಜೊತೆಗೆ ಸೋಮನ ಕುಣಿತ, ಗಾಡ್ಗಿ ಪದ ಕುಣಿತ ಪ್ರದರ್ಶನವನ್ನು ಕೂಡ ಮಾಡಿಸಿದ್ದಾರೆ. ೧೯೭೮ರಲ್ಲಿ ಜರ್ಮನಿಯ ವಿದ್ವಾಂಸರಾದ ಪ್ರೊ. ಕುಕುಡ್ಸ್ ಅವರು ಬೆಂಗಳೂರಿಗೆ

ತಮ್ಮ ಶಿಷ್ಯರೊಂದಿಗೆ ಜನಪದ ಕಲೆಗಳು ಮತ್ತು ಜನಪದ ಸಂಗೀತವನ್ನು ಅಧ್ಯಯನ ಮಾಡಲು ಬಂದಿದ್ದಾಗ ಅವರೆದುರಿಗೆ ತಮಟೆ ವಾದನ ಪ್ರದರ್ಶನವನ್ನು ನೀಡಿ ಮೆಚ್ಚುಗೆ ಗಳಿಸಿದ್ದಾರೆ. ಇದನ್ನೆಲ್ಲಾ ನೋಡಿದಾಗ ಇವರು ಹಲವಾರು ಕಲಾಕ್ಷೇತ್ರದಲ್ಲಿ ಕೈಯಾಡಿಸಿರುವ ವ್ಯಕ್ತಿ.

ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೯೫ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ.

ಸಣ್ಣಗಿಡ್ಡಯ್ಯ,
ಆನೆಕೆರೆ,
ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.

# ಸಂಜೀವಯ್ಯ

ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಎಲೆಚಾಗಹಳ್ಳಿಯವರು ಸಂಜೀವಯ್ಯ. ವಯಸ್ಸು ೭೦ ವರ್ಷ. ತಂದೆ ಸಂಜೀವಯ್ಯ. ಇವರು ತೊಗಲುಗೊಂಬೆ ಕಲಾವಿದರು. ಸಿಳ್ಳೆಕ್ಯಾತ ಜನಾಂಗಕ್ಕೆ ಸೇರಿದವರಾಗಿದ್ದು ಮರಾಠಿ ಭಾಷೆಯನ್ನು ಮಾತನಾಡುತ್ತಾರೆ. ವೃತ್ತಿ ಭಿಕ್ಷಾಟನೆ. ಜೊತೆಗೆ ಒಂದು ಎಕರೆಯಷ್ಟು ಭೂಮಿ ಇದ್ದು ಅಲ್ಪಸ್ವಲ್ಪ ಕೃಷಿ ಮಾಡುತ್ತಾರೆ.

ಇವರು ಚಿಕ್ಕಂದಿನಿಂದಲೂ ತೊಗಲುಗೊಂಬೆ ಮೇಳದ ಕಲೆಯನ್ನು ರೂಢಿಸಿಕೊಂಡವರು. ಮೂಲತಃ ಚರ್ಮವನ್ನು ಹದಮಾಡಿಕೊಂಡು ಗೊಂಬೆಗಳನ್ನು ತಾವೇ ತಯಾರು ಮಾಡಿಕೊಳ್ಳುತ್ತಾರೆ. ಅದಕ್ಕೆ ಬೇಕಾದ ಬಣ್ಣಗಳನ್ನು ಕೂಡ ಮೊದಲು ಇವರೇ ತಯಾರು ಮಾಡಿಕೊಳ್ಳುತ್ತಿದ್ದರು. ಈಗ ಆಧುನಿಕ ಬಣ್ಣಗಳನ್ನೇ ಬಳಸುವುದುಂಟು. ತೊಗಲುಗೊಂಬೆ ಮೇಳದಲ್ಲಿ ಇವರ ಪಾತ್ರ ಭಾಗವಂತಿಕೆ. ಹಿಮ್ಮೇಳದಲ್ಲಿ ಹೆಂಡತಿ ಭಾಗಿಯಾಗುತ್ತಿದ್ದರು. ಮಕ್ಕಳು ಅಲ್ಲಿ ಇಲ್ಲಿ ಸ್ವಲ್ಪ ಭಾಗವಹಿಸುತ್ತಿದ್ದರು. ಆದರೆ ಈಗ ಇವರ್‍ಯಾರು ಈ ಕಲೆಯನ್ನು ಮುಂದುವರಿಸುತ್ತಿಲ್ಲ. ಸಂಜೀವಯ್ಯನವರಿಗೂ ವಯಸ್ಸಾಗಿರುವುದರಿಂದ ಇತ್ತೀಚಗೆ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಇವರು ತಮ್ಮ ಸುತ್ತ ಮುತ್ತಲ ಹಳ್ಳಿಗಳಿಗೆಲ್ಲ ಪ್ರಸಿದ್ಧರು. ಜೊತೆಗೆ ಹೊಳೆನರಸೀಪುರ ತಾಲ್ಲೂಕಿನಾದ್ಯಂತ ತೊಗಲುಗೊಂಬೆ ಮೇಳ ಕಲೆಗೆ ಹೆಸರುವಾಸಿಯಾಗಿದ್ದಾರೆ. ಇವರು ಮುಖ್ಯವಾಗಿ ರಾಮಾಯಣ, ಮಹಾಭಾರತದ ಕಥೆಗಳನ್ನು ಮೇಳದಲ್ಲಿ ಮಾಡುತ್ತಿದ್ದರು. ಜನಪದ ಕಥೆಗಳನ್ನು ಬಳಸಿಕೊಂಡಿದ್ದಾರೆ. ಕೆಲವೊಮ್ಮೆ ಆಧುನಿಕತೆಗೆ ತಕ್ಕನಾದ ಕಥೆಗಳನ್ನು ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಇವರಿಗೆ ಯಾವುದೇ ಸನ್ಮಾನ, ಪುರಸ್ಕಾರಗಳು ದೊರೆತಿಲ್ಲ.

ಸಂಜೀವಯ್ಯ, ಎಲೆಚಾಗಹಳ್ಳಿ, ಕಸಬಾ ಹೋಬಳಿ,
ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.

## ನಿಂಗಯ್ಯ

ಚನ್ನರಾಯಪಟ್ಟಣ ತಾಲೂಕು ಜನಪದ ಕಲೆಗೆ ತುಂಬಾ ಪ್ರಸಿದ್ಧಿ. ಇವತ್ತು ಅಲ್ಪಸ್ವಲ್ಪ ಮೂಡಲಪಾಯ ಉಳಿದಿದೆ ಎಂದರೆ ಇಲ್ಲಿಯೆ. ಅಂತೆಯೇ ಇತರ ಕಲೆಗಳು ಕೂಡ ಇಲ್ಲಿ ತನ್ನ ಛಾಪು ಮೂಡಿಸಿವೆ. ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ನಲ್ಲೂರು ಗ್ರಾಮದೇವರು ನಿಂಗಯ್ಯ. ವಯಸ್ಸು ಸುಮಾರು ೭೦ ವರ್ಷ. ತಂದೆ ಸಿದ್ದಯ್ಯ, ಹರಿಜನ ಜನಾಂಗಕ್ಕೆ ಸೇರಿದವರು.

ನಿಂಗಯ್ಯ ಬಹುಮುಖ ಪ್ರತಿಭೆಯ ಕಲಾವಿದ. ತನ್ನ ಚಿಕ್ಕಂದಿನಿಂದಲೇ ತನ್ನ ತಂದೆಯವರಿಂದ ಹಾಗು ತನ್ನ ಕೇರಿಯವರಿಂದ ಜನಪದ ಕಲೆಗಳನ್ನು ಕಲಿತವರು. ಮೂಲತಃ ಕೃಷಿ ಕಾರ್ಮಿಕರಾಗಿದ್ದು ಪ್ರವೃತ್ತಿಯಲ್ಲಿ ಕಲೆಗಾರರಾಗಿರುವವರು. ಇವರು ಜನಪದ ಹಾಡುಗಾರ, ಕೋಲಾಟಗಾರ, ಒಗಟುಗಳನ್ನು ಹೇಳುವವರು. ರಂಗದ ಹಾಡು ಮತ್ತು ಕುಣಿತ ಹಾಗು ತಮಟೆ ಬಾರಿಸುವವರು.

ಜನಪದ ಹಾಡುಗಳಲ್ಲಿ ಮುಖ್ಯವಾಗಿ ಹೊಗಳಿಕೆ ಪದಗಳನ್ನು ಹೇಳುತ್ತಾರೆ. ನಲ್ಲೂರಿನಲ್ಲಿ ಕಾಳಿ ದೇವಾಲಯವಿದ್ದು, ಆ ಜಾತ್ರೆಯ ಸಂದರ್ಭದಲ್ಲಿ ತಮಟೆ ಬಾರಿಸುತ್ತಾ ಹೊಗಳಿಕೆ ಪದಗಳನ್ನು ಹಾಡುತ್ತಿದ್ದರೆ, ಅದಕ್ಕೆ ಕಡಿವಾಣವೇ ಇರುವುದಿಲ್ಲ. ಜೊತೆಗೆ ತಮಟೆಯನ್ನು ಹಲವು ಗತ್ತುಗಳಲ್ಲಿ ಬಾರಿಸುತ್ತಾ ಎಲ್ಲಾ ವಗಸೆಗಳನ್ನು ತೋರಿಸುತ್ತಾರೆ. ಇವರ ಕುಣಿತಕ್ಕೆ ನೋಡುತ್ತಿದ್ದವರೂ ಕೂಡ ತಮಗರಿವಿಲ್ಲದಂತೆ ಕುಣಿಯ ತೊಡಗುತ್ತಾರೆ. ಹಬ್ಬದ ಸಂದರ್ಭದಲ್ಲಿ ಕೋಲಾಟ ಮತ್ತು ರಂಗದ ಕುಣಿತ ಇರುತ್ತದೆ. ಈ ಎರಡರಲ್ಲೂ ನಿಂಗಯ್ಯ ಭಾಗಿಯಾಗುತ್ತಾರೆ. ಕೋಲಿಡಿದು ಹಾಡೇಳುತ್ತಾ ಕುಣಿಯಲು ಪ್ರಾರಂಭಿಸಿದರೆ ನೋಡುವುದಕ್ಕೆ ಆನಂದವಾಗುತ್ತದೆ. ರಂಗದ ಕುಣಿತದಲ್ಲಿ ಇವರು ಕಾಲಾಕುವ ಮಟ್ಟು ತುಂಬಾ ಚೆನ್ನಾಗಿರುತ್ತದೆ. ಇವರಿಂದ ಹಲವಾರು ಯುವಕರು ರಂಗದ ಕುಣಿತವನ್ನು

ಕಲಿತುಕೊಂಡಿದ್ದಾರೆ. ಒಗಟನ್ನು ಹೇಳಲು ಕುಳಿತರೆ ಇವರನ್ನು ಸೋಲಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಜೊತೆಗೆ ಸೊಗಸಾಗಿ ಸೋಬಾನೆ ಹಾಡುಗಳನ್ನು ಕೂಡ ಹಾಡುತ್ತಾರೆ.

ನಿಂಗಯ್ಯ
ನಲ್ಲೂರು, ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.

## ಮಾಳಯ್ಯ

ಮಾಳಯ್ಯ ಹರಿಜನರಾಗಿದ್ದು, ನಾಡಿನ ಬಹು ಮುಖ್ಯ ತಂಬೂರಿ ಕಲಾವಿದರು. ಹಾಸನ ಜಿಲ್ಲೆ, ಆಲೂರು ತಾಲ್ಲೂಕಿನ ಪಾಳ್ಯ ಹೋಬಳಿಯ ಕಡದರವಳ್ಳಿಯವರು. ತಂದೆ ಹನುಮಯ್ಯ. ಸುಮಾರು 20 ವರ್ಷದ ಆಜುಬಾಜಿನಲ್ಲಿದ್ದಾರೆ. ಈಗ ತನ್ನ ಮಗಳ ಊರಾದ ಕೆರೆಹಳ್ಳಿಯಲ್ಲಿ ವಾಸವಾಗಿದ್ದಾರೆ. ಮಾಳಯ್ಯ ತಂಬೂರಿಯನ್ನು ಎದೆಗೆ ಆನಿಸಿಕೊಂಡು ಎಡಗೈಯಲ್ಲಿ ತಾಳ, ಬಲಗೈಯಲ್ಲಿ ತಂಬೂರಿಯ ತಂತಿಯನ್ನು ಮೀಟುತ್ತಾ ತನ್ನ ಕಂಠ ಮಾಧ್ಯರಿಂದ ಹೊರಡಿಸುತ್ತಿದ್ದ ರಾಗದಿಂದ ಕೇಳುವ ಜನರನ್ನು ಮಂತ್ರ ಮುಗ್ಧರನ್ನಾಗಿ ಮಾಡುತ್ತಿದ್ದರು. ಇವರು ತಂಬೂರಿಯನ್ನು ಹಿಡಿದು ಕುಳಿತರೆ ಹೊತ್ತು ಹೋಗುವುದೇ ಗೊತ್ತಾಗುತ್ತಿರಲಿಲ್ಲವಂತೆ. ಈಗ ವಯಸ್ಸಾಗಿದ್ದು ಕೈ ಮತ್ತು ತಲೆ ನಡುಗುತ್ತಿದ್ದರೂ ಈಗಲೂ ತಂಬೂರಿ ಹಿಡಿದು ಕುಳಿತರೆ ಹಾಡುಗಳು ಪುಂಖಾನುಪುಂಖವಾಗಿ ಹೊರಹೊಮ್ಮುತ್ತಿರುತ್ತವೆ. ಮಾಳಯ್ಯನವರು ತಂಬೂರಿ ಕಲೆಯನ್ನು ತನ್ನ ಚಿಕ್ಕ ವಯಸ್ಸಿನಲ್ಲಿ ತಮ್ಮ ಚಿಕ್ಕಪ್ಪ ಲಂಕಯ್ಯನವರಿಂದ ಕಲಿತರು. ತಮ್ಮ ಹತ್ತನೆ ವಯಸ್ಸಿನಲ್ಲಿಯೆ ಮರಾಠಿ ಕಲಾವಿದರೊಂದಿಗೆ ಇದ್ದು ನಾಟಕದಲ್ಲಿ ಅಭಿನಯಿಸಿದರು. ತುಂಡು ಭೂಮಿಯನ್ನು ಹೊಂದಿರುವ ಇವರು ಬದುಕಿಗಾಗಿ ಮರಗೆಲಸವನ್ನು ಮಾಡಿದರು.

ಮಾಳಯ್ಯ ದೈಹಿಕವಾಗಿ ಅಬ್ಬರದ ಆಳಲ್ಲ. ಮಟ್ಟಸವಾಗಿರುವ ಇವರು ತಲೆಗೆ ಯಾವಾಗಲೂ ಪೇಟ, ಮೊಣಕಾಲಿನವರೆಗೆ ತುಂಡು ಬಟ್ಟೆ ಸುತ್ತಿರುತ್ತಾರೆ. ಇವರು ಮುಮ್ಮೇಳ ಹಾಡುತ್ತಾ ಕುಳಿತರೆ ಹಿಮ್ಮೇಳದಲ್ಲಿ ಚನ್ನಯ್ಯ ಮತ್ತು ಅಣ್ಣಪ್ಪ ಭಾಗವಹಿಸುತ್ತಾರೆ. ಇವರ ಕಾರ್ಯವ್ಯಾಪ್ತಿ ತಮ್ಮ ಸುತ್ತಮುತ್ತಲಹಳ್ಳಿಯ ಜೊತೆಗೆ ಹಾಸನ ಜಿಲ್ಲೆಯಾದ್ಯಂತ ತಂಬೂರಿ ಕಲೆಯನ್ನು ಪಸರಿಸಿದ್ದಾರೆ. ಜೊತೆಗೆ ಬೆಂಗಳೂರು, ಮೈಸೂರು, ಮಂಗಳೂರು, ಚಿಕ್ಕಮಗಳೂರು ಜಿಲ್ಲೆಗಳಲ್ಲಿಯೂ ತಂಬೂರಿ ಕಥೆಯನ್ನು ಮಾಡಿದ್ದಾರೆ.

ತನ್ನ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಹಬ್ಬ–ಹರಿದಿನ, ಜಾತ್ರೆಗಳಲ್ಲಿ ತಂಬೂರಿ ಮೇಳವನ್ನು ನಡೆಸಿದ್ದಾರೆ.

ಇವರು ಸುಮಾರು ೧೫ಕ್ಕೂ ಹೆಚ್ಚು ಕಾವ್ಯಗಳನ್ನು ಇಂಪಾಗಿ ಹಾಡುತ್ತಾರೆ. ಅವುಗಳಲ್ಲಿ ಮುಖ್ಯವಾಗಿ ರುದ್ರಕುಮಾರ ಲೋಹಿತಕುಮಾರ, ಬಾಲನಾಗಮ್ಮ, ರೇಣುಕ ಎಲ್ಲಮ್ಮ, ಅರಣ್ಯ ಕುಮಾರ, ಬಸವಕುಮಾರ, ತಿಮ್ಮಪ್ಪ ದೊರೆ, ನಿರ್ವಾಣ ಸ್ವಾಮಿ ಕಥೆಗಳನ್ನು ಮಾಡುವುದುಂಟು. ಇವುಗಳಲ್ಲಿ ಮೊದಲಿನ ಮೂರು ಕಥೆಗಳನ್ನು ಎಲ್ಲರೂ ಹಾಡುವುದು ರೂಢಿಯಲ್ಲಿದೆ. ಆದರೆ ತಿರುಪತಿ ತಿಮ್ಮಪ್ಪನವರ ಹಾಡುಗಳನ್ನು ವೈಷ್ಣವ ಸಂಪ್ರದಾಯದವರು ಹೇಳಿಸುವುದುಂಟು. ಅಂತೆಯೇ ನಿರ್ವಾಣ ಸ್ವಾಮಿ ಸಂಪ್ರದಾಯ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಚ್ಚು ಪ್ರಸಿದ್ಧಿಯಲ್ಲಿದ್ದು ಆ ಸಂಪ್ರದಾಯದ ಹಾಡುಗಳನ್ನು ಹಾಡುವುದು ಮಾಳಯ್ಯನವರ ವಿಶೇಷವಾದ ಕೊಡುಗೆಯಾಗಿದೆ. ಇಂತಹ ಸಂಪ್ರದಾಯವನ್ನು ಪರಿಚಯಿಸಿದ ಕೀರ್ತಿ ತಂಬೂರಿ ಸಂಪ್ರದಾಯದಲ್ಲಿ ಬಹಳ ಕಡಿಮೆ ಎಂದೇ ಹೇಳಬಹುದು. ಮಾಳಯ್ಯನವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೯೯ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ. ಅಂತೆಯೇ ಹಲವಾರು ಸಂಘ ಸಂಸ್ಥೆಗಳು ಗೌರವಿಸಿವೆ.

ಮಾಳಯ್ಯ<br>ಕಡದರವಳ್ಳಿ, ಪಾಳ್ಯ ಹೋಬಳಿ,<br>ಆಲೂರು ತಾಲೂಕು, ಹಾಸನ ಜಿಲ್ಲೆ.

## ಮಂಡಿಗೌಡ

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಶ್ರವಣೇರಿಯವರಾದ ಮಂಡಿಗೌಡ ಪ್ರಮುಖವಾಗಿ ರಂಗದ ಕುಣಿತ ಕಲಾವಿದರು. ವಯಸ್ಸು ಸುಮಾರು ೭೦ ವರ್ಷ. ತಂದೆ ಮಂಡಿಗೌಡ ಒಕ್ಕಲಿಗ ಜನಾಂಗಕ್ಕೆ ಸೇರಿದವರು. ವೃತ್ತಿಯಲ್ಲಿ ವ್ಯವಸಾಯಗಾರರು. ಹವ್ಯಾಸದಲ್ಲಿ ಜನಪದ ಕಲಾವಿದರು. ರಂಗುಕುಣಿತದ ಜೊತೆಗೆ ಕೋಲಾಟ ಮತ್ತು ಜನಪದ ಗೀತೆಗಳನ್ನು ಹಾಡುವ ಹವ್ಯಾಸವೂ ಇದೆ.

ರಂಗದ ಕುಣಿತ ಜನಪದ ಕಲಾ ಪ್ರಕಾರದಲ್ಲಿ ಒಂದು ಪ್ರಮುಖ ಕಲೆಯಾಗಿದ್ದು, ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನಲ್ಲಿ ಹೆಚ್ಚಾಗಿರುವುದನ್ನು ಕಾಣುತ್ತೇವೆ. ರಂಗ ಕಲೆಯು ಪ್ರದರ್ಶನದಲ್ಲಿ ಸುಮಾರು ಹತ್ತರಿಂದ ಹದಿನೈದು ಜನರು ಭಾಗವಹಿಸುತ್ತಾರೆ. ಕುಣಿತದವರ ಜೊತೆಗೆ ತಮಟೆ ವಾದ್ಯವು ಇರುತ್ತದೆ. ತಮಟೆಯ ಶಬ್ದಕ್ಕೆ ತಕ್ಕಹಾಗೆ ಕಾಲುಗಳನ್ನು ಹಿಂದಕ್ಕೂ ಮುಂದಕ್ಕೂ ಆಡಿಸುವುದರ ಮೂಲಕ ಕುಣಿಯುತ್ತಾರೆ. ಕಲಾವಿದರು ಕಾಲಿಗೆ ಗೆಜ್ಜೆಕಟ್ಟಿರುತ್ತಾರೆ. ಸೊಂಟಕ್ಕೆ ಒಂದು ಬಟ್ಟೆ ಪಟ್ಟಿ ಇರುತ್ತದೆ. ತಲೆಗೆ ಟವೆಲ್‌ನಿಂದ ಸುತ್ತಿರುತ್ತಾರೆ. ಇಲ್ಲದಿದ್ದರೆ ಇಲ್ಲ. ಜೊತೆಗೆ ಹಾಡುಗಳನ್ನು ಹೇಳುವುದು ಉಂಟು.

ಮಂಡಿಗೌಡ ಅವರು ರಂಗದ ಕುಣಿತದ ಜೊತೆಗೆ ಕೋಲಾಟವನ್ನು ಹಾಡುಗಳನ್ನು ಹೇಳಿಕೊಂಡು ಆಡುವುದುಂಟು. ಮದುವೆ, ಗಣೇಶೋತ್ಸವ, ಹಬ್ಬ-ಹರಿದಿನಗಳು, ಜಾತ್ರೆ ಮುಂತಾದ ಸಂದರ್ಭಗಳಲ್ಲೆಲ್ಲಾ ಮೇಲಿನ ಎಲ್ಲಾಕಲೆಗಳನ್ನು ಪ್ರದರ್ಶಿಸಿದ್ದಾರೆ. ಸಾಹಿತ್ಯ ಪರಿಷತ್ತು ಸುವರ್ಣ ಕರ್ನಾಟಕ ಸಂಸ್ಕೃತಿ ದಿಬ್ಬಣ ಮುಂತಾದ ಸಂದರ್ಭಗಳಲ್ಲೆಲ್ಲಾ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ.

**ಮಂಡಿಗೌಡ, ಶ್ರವಣೇರಿ, ಕಸಬಾ ಹೋಬಳಿ,**
**ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.**

## ಜಯಮ್ಮ

ಜನಪದ ಹಾಡುಗಾರಿಕೆ ಹಳ್ಳಿಹಳ್ಳಿಗಳಲ್ಲಿ ವಿಶೇಷವಾಗಿರುವುದನ್ನು ಕಾಣುತ್ತೇವೆ. ಆದರೆ ವಿಭಿನ್ನವಾದ ಗೀತೆಗಳನ್ನು ಹಾಡುವವರ ಸಂಖ್ಯೆ ಕಡಿಮೆಯೆ ಇರುತ್ತದೆ. ಹಾಡುವವರನ್ನು ಕೇಳಿದರೆ ನಾನು ಹಾಡುತ್ತೇನೆ ಎಂದು ಹೇಳಿದಾಗ, ಹಾಡಲು ಪ್ರಾರಂಭಿಸಿದರೆ ಕೇವಲ ಐದು-ಹತ್ತು ನಿಮಿಷಗಳಲ್ಲಿ ಅವರ ಸರಕೆಲ್ಲ ಮುಗಿಯುತ್ತವೆ. ಆದರೆ ದಿನಗಟ್ಟಲೆ ಹಾಡುವವರು ಕಡಿಮೆ. ಹೀಗೆ ದಿನಗಟ್ಟಲೆ ಹಾಡುವವರ ಸಾಲಿಗೆ ಶ್ರೀಮತಿ ಜಯಮ್ಮನವರು ಸೇರುತ್ತಾರೆ.

ಹಾಸನ ಜಿಲ್ಲೆ ಹಾಗು ತಾಲೂಕಿನ ಅಗಿಲೆಗ್ರಾಮದಲ್ಲಿ ಅಯ್ಯಣ್ಣ ಮತ್ತು ಗಿಡ್ಡಮ್ಮನವರ ಮಗಳಾಗಿ ಜನಿಸಿದ ಶ್ರೀಮತಿ ಜಯಮ್ಮನವರು ಮದುವೆಯಾಗಿ ಬಂದದ್ದು ಇದೇ ತಾಲ್ಲೂಕಿನ ಎ. ಗುಡುಗನಹಳ್ಳಿ ಗ್ರಾಮಕ್ಕೆ. ಗಂಡ ರಾಜಕೀಯ ಮಾಡಿಕೊಂಡಿದ್ದ ಶ್ರೀ ಜಿ. ಎಸ್. ನಂಜೇಗೌಡರು. ವಯಸ್ಸು ೬೭ ವರ್ಷ. ಒಕ್ಕಲಿಗ ಜನಾಂಗಕ್ಕೆ ಸೇರಿದವರು.

ಜಯಮ್ಮನವರು ಸೊಗಸಾದ ಹಾಡುಗಾರರಾಗಿದ್ದು ಎಲ್ಲವೂ ತಾಯಿಯಿಂದ ಬಂದ ಬಳುವಳಿ. ಇವರ ತಾಯಿಯಾದ ಗಿಡ್ಡಮ್ಮ ಸೋಬಾನೆ ಹಾಡುಗಳನ್ನು ಸೊಗಸಾಗಿ ಹಾಡುತ್ತಿದ್ದರು. ಇವರಿಗೆ ಸೋಬಾನೆ ಗಿಡ್ಡಮ್ಮ ಎಂದೇ ಹೆಸರಿತ್ತು. ಗಿಡ್ಡಮ್ಮನವರಿಗೆ ಎಂಟು ಜನ ಹೆಣ್ಣುಮಕ್ಕಳಿದ್ದು, ತಾಯಿಯಿಂದ ಜನಪದ ಹಾಡುಗಳನ್ನು ಮೂರ್‍ನಾಲ್ಕು ಜನ ಮಕ್ಕಳು ಕಲಿತಿದ್ದಾರೆ. ಜಯಮ್ಮನವರು ಮತ್ತು ಇವರ ಅಕ್ಕ ತಾಯಮ್ಮ ಇಬ್ಬರು ಜೋಡಿಯಾಗಿ ರಾಗಿ ಬೀಸುವ ಹಾಡುಗಳು, ಮದುವೆಯಲ್ಲಿ ಹಾಡುವ ಸೋಬಾನೆ ಹಾಡುಗಳನ್ನು ನಿರಂತರವಾಗಿ ಹಾಡುತ್ತಾರೆ. ಜೊತೆಗೆ ಮನೆದೇವರಾದ ಮಳಲಿಗಿಡ್ಡಮ್ಮನ ಮೇಲಿನ ಹಾಡುಗಳು, ಚನ್ನಕೇಶವನ ಮೇಲಿನ ಹಾಡುಗಳು, ಲಕ್ಷ್ಮೀದೇವಿಯ ಹಾಡುಗಳು, ಆಂಜನಯ್ಯನ ಕುರಿತು ಹಲವಾರು ಹಾಡುಗಳನ್ನು ಹಾಡುತ್ತಾರೆ. ಊರಿನಲ್ಲಿ ಯಾವುದೇ

ಮದುವೆ, ಹಬ್ಬ–ಹರಿದಿನ, ಜಾತ್ರೆ, ಉತ್ಸವಗಳು ಇತರೆ ಯಾವುದೇ ಶುಭ ಕಾರ್ಯಗಳು ನಡೆದರು ಇವರ ಹಾಡುಗಾರಿಕೆ ಇದ್ದೇ ಇರುತ್ತದೆ. ಜೊತೆಗೆ ಜನಪದ ಐತಿಹ್ಯಗಳನ್ನು ಸಾಕಷ್ಟು ಹೇಳುತ್ತಾರೆ. ಇವರು ಹೇಳುವ ಐತಿಹ್ಯಗಳನ್ನು, ಬಿ. ಡಿ. ಕುಮಾರ್ ಅವರು ಸಂಗ್ರಹಿಸಿದ್ದಾರೆ. ಜೊತೆಗೆ ಗಾದೆ, ಒಗಟು, ಜನಪದ ಕಥೆಗಳನ್ನು ಕೂಡ ಆಗಾಗ ಹೇಳುವುದುಂಟು.

ಜಯಮ್ಮ,
ಎ. ಗುಡುಗನಹಳ್ಳಿ,
ಅಂಬುಗ ಅಂಚೆ,
ಶಾಂತಿ ಗ್ರಾಮ ಹೋಬಳಿ,
ತಾ : ಜಿಲ್ಲೆ : ಹಾಸನ.

## ಸಿದ್ದೇಗೌಡ

ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಕಸಬಾ ಹೋಬಳಿಯ ಬೋರನ ಕೊಪ್ಪಲು ಗ್ರಾಮದ ಸಿದ್ದೇಗೌಡ ಕೋಲಾಟದ ಕಲಾವಿದರು. ಇವರಿಗೆ ಸುಮಾರು ೬೬ ವರ್ಷ. ತಂದೆ ಸಿದ್ದೇಗೌಡ ಒಕ್ಕಲಿಗ ಜನಾಂಗಕ್ಕೆ ಸೇರಿದವರು. ಇವರು ಮೂಲತಃ ವ್ಯವಸಾಯಗಾರರಾಗಿದ್ದು, ಪ್ರವೃತ್ತಿಯಾಗಿ ಕೋಲಾಟವನ್ನು ಮೈಗೂಡಿಸಿಕೊಂಡವರು.

ಇವರಿಗೆ ಕೋಲಾಟದ ಹಾಡುಗಳನ್ನು ಹಾಡುವುದಕ್ಕೆ ಬರುವುದಿಲ್ಲ. ಆದರೆ ಅದ್ಭುತವಾದ ಆಟಗಾರ. ಕೋಲುಗಳನ್ನು ಕೈಯಲ್ಲಿ ಹಿಡಿದು ನರ್ತಿಸುತ್ತಾ ಕೋಲುಗಳಿಗೆ ಕೋಲುಗಳನ್ನು ತಾಗಿಸುವುದೇ ಒಂದು ರೀತಿಯಲ್ಲಿ ಅದ್ಭುತವಾಗಿರುತ್ತದೆ. ಕೋಲುಗಳನ್ನಿಡಿದು ಕುಣಿಯ ತೊಡಗಿದರೆ ಮೈಮೇಲೆ ಪ್ರಜ್ಞೆ ಇದೆಯೇ ಇಲ್ಲವೋ ಎಷ್ಟೋ ಹೆಂಗಸರು ಮಾರುಹೋಗಿದ್ದರು ಎಂದು ಊರಿನವರು ಹೇಳುವುದುಂಟು. ಕೋಲಾಟ ಮಾಡುವಾಗ ತಲೆಗೊಂದು ಪೇಟ, ಮೈಯಿಗೆ ಬನಿಯನ್, ಸೊಂಟಕ್ಕೊಂದು ತುಂಡು ಪಂಚೆ ಅಥವಾ ಚಡ್ಡಿ, ಕಾಲಿಗೆ ಗೆಜ್ಜೆ ಯಾವಾಗಲೂ ಇರುತ್ತಿದ್ದವು.

ಸಿದ್ದೇಗೌಡರು ಗೋವಿಂದಪ್ಪನವರ ತಂಡದಲ್ಲಿ ಒಬ್ಬರಾಗಿದ್ದವರು. ಅವರೊಂದಿಗೆ ಮೈಸೂರು, ಬೆಂಗಳೂರು, ಮಂಗಳೂರು, ಹಂಪಿ ಮುಂತಾದ ಕಡೆಗಳಲ್ಲೆಲ್ಲಾ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಹಾಸನ ಜಿಲ್ಲಾದ್ಯಂತ ಸರ್ಕಾರಿ ಹಾಗೂ ಖಾಸಗಿ ಕಾರ್ಯಕ್ರಮಗಳಲ್ಲಿ ಕೋಲಾಟ ಮಾಡಿದ್ದಾರೆ. ಗಣಪತಿ ಉತ್ಸವ, ಜಾತ್ರೆ, ಹಬ್ಬ-ಹರಿದಿನಗಳಲ್ಲಿ ಇವರ ಕೋಲಾಟ ಇದ್ದೇ ಇರುತ್ತದೆ. ಇವರೊಬ್ಬ ಅತ್ಯಂತ ಯಶಸ್ವಿ ಕೋಲಾಟದ ಕಲಾವಿದ. ಈಗ ವಯಸ್ಸಾಗಿದ್ದು, ಆಗೊಮ್ಮೆ ಈಗೊಮ್ಮೆ ಭಾಗವಹಿಸುತ್ತಾರೆ. ಯುವಕರು ನಾಚುವಂತೆ ಇಳಿ ವಯಸ್ಸಿನಲ್ಲೂ ಪ್ರದರ್ಶನ ನೀಡುತ್ತಾರೆ.

ಸಿದ್ದೇಗೌಡ, ಬೋರನ ಕೊಪ್ಪಲು,
ಕಸಬಾ ಹೋಬಳಿ ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.

# ಲಕ್ಷ್ಮಯ್ಯ

ಹಾಸನ ಜಿಲ್ಲೆ ತಂಬೂರಿಗೆ ಹೆಸರಾಗಿದ್ದು, ತಂಬೂರಿ ಕಲಾವಿದರು ಬಹಳಷ್ಟು ಜನರು ಇದ್ದರು. ಆದರೆ ಹಳೆಬರೆಲ್ಲ ಗತಿಸಿ ಹೊಸಬರು ಹಳಬರ ದಾರಿಯಲ್ಲಿ ಸಾಗುತ್ತಿದ್ದರೂ, ಹಳಬರ ದಾರಿಯಲ್ಲಿ ಸಾಗಲು ಸಾಧ್ಯವಾಗುತ್ತಿಲ್ಲ. ಆದರೂ ಅಲ್ಪಸ್ವಲ್ಪ ತಂಬೂರಿ ಕಲೆಯನ್ನು ಅಲ್ಲಿ ಇಲ್ಲಿ ಬಳಸುತ್ತಾ ಬಂದಿರುವುದು ಆಶಾದಾಯಕ ಬೆಳವಣಿಗೆಯಾಗಿ ಕಾಣುತ್ತಿದೆ.

ಲಕ್ಷ್ಮಯ್ಯ ಹಾಸನ ಜಿಲ್ಲೆ ಮತ್ತು ತಾಲೂಕಿನ, ದುದ್ದ ಹೋಬಳಿಯ, ಕಬ್ಬಳಿ ಗ್ರಾಮದವರು. ಕಬ್ಬಳಿ ಗ್ರಾಮವೇ ತಂಬೂರಿ ದಾಸಪ್ಪನವರ ಮೂಲಕ ಇಡೀ ಜಿಲ್ಲೆಯಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ಅಂತಹ ಗ್ರಾಮದಲ್ಲಿ ಲಕ್ಷ್ಮಯ್ಯ ಹುಟ್ಟಿದವರು. ಇವರ ತಂದೆ ಸಣ್ಣಕರಿಯಯ್ಯ ತಾಯಿ ಹೊನ್ನಮ್ಮ. ಹರಿಜನ ಜಾತಿಗೆ ಸೇರಿದ ಎಡಗೈ ಗುಂಪಿನವರು. ಲಕ್ಷ್ಮಯ್ಯನಿಗೆ ಸುಮಾರು ೬೫ ವರ್ಷವಾಗಿದೆ.

ಲಕ್ಷ್ಮಯ್ಯ ಹಾಸನ ತಾಲ್ಲೂಕಿನ ಹಂಪನಹಳ್ಳಿ ಗ್ರಾಮದಲ್ಲಿ ಮದುವೆ ಮಾಡಿಕೊಂಡಿದ್ದು, ಮದುವೆಯಾದ ಹೊಸದರಲ್ಲಿ ಹಂಪನಹಳ್ಳಿಯಲ್ಲಿಯೇ ವಾಸವಾಗಿದ್ದರು. ಸುಮಾರು ಎಪ್ಪತ್ತರ ದಶಕದಲ್ಲಿ. ಆಗ ತಂಬೂರಿಯ ಹಿಮ್ಮೇಳದ ಕಲಾವಿದರಾಗಿ ಗುಮ್ಮಟೆ ಬಾರಿಸುತ್ತಾ ಈ ಕಲೆಯನ್ನು ಕರಗತ ಮಾಡಿಕೊಂಡವರು. ಬರಬರುತ್ತಾ ತಂಬೂರಿ ಹಾಡುಗಳನ್ನು ಕಲಿತು ಮುಮ್ಮೇಳ ಗಾಯಕರಾಗಿ ಬಡ್ತಿಹೊಂದುತ್ತಾ ಪ್ರಸಿದ್ಧ ಕಲಾವಿದರಾದರು. ಇವರು ಹಂಪನಹಳ್ಳಿಯಲ್ಲಿದ್ದಾಗ ಮಳಲಿ ಗ್ರಾಮದವರು ಮುಮ್ಮೇಳದಲ್ಲಿದ್ದರು. ಇಬ್ಬರೂ ಕೂಡಿ ಹಂಪನಹಳ್ಳಿ ಹಾಗು ಸುತ್ತ ಮುತ್ತಲ ಗ್ರಾಮಗಳಲ್ಲೆಲ್ಲಾ ಊರಾಡಿ ಬೇಸಿಗೆಯಲ್ಲಿ ಸಂಪಾದಿಸಿದ ರಾಗಿ ಸುಮಾರು ಐದಾರು ಪಲ್ಲಗಳಾಗುತ್ತಿದ್ದವು.

ಲಕ್ಷ್ಮಯ್ಯ ಮಟ್ಟಸವಾದ ಆಳು. ಪಂಚೆ, ಷರಟು ಧರಿಸುವ ಈತ ತಲೆಗೊಂದು ಟವೆಲ್ಲವನ್ನು ಸುತ್ತಿ ಎದೆಗೆ ತಂಬೂರಿಯನ್ನು ಆನಿಸಿ ಎಡಗೈಯಲ್ಲಿ ತಾಳಹಿಡಿದು, ಬಲಗೈಯಲ್ಲಿ ತಂತಿ ಮೀಟುತ್ತಾ ದಾಸಪ್ಪನವರನ್ನು ನೆನೆದು ಕೊಂಡು ಹಾಡನ್ನು ಹೇಳಲು ತೊಡಗಿದರೆ ರಾತ್ರಿ ಕಳೆದದ್ದೇ ಗೊತ್ತಾಗುತ್ತಿರಲಿಲ್ಲ. ಇವರ ಹಾಡಿಗೆ ಮನಸೋತ ಹೆಂಗಸರು ತಮ್ಮ ಮನೆಯ ಬಳಿ ಕರೆದು ಹಾಡುಗಳನ್ನು ಹೇಳಿಸುತ್ತಾ ಮೊರಗಟ್ಟಲೆ ರಾಗಿ, ಭತ್ತವನ್ನು ಸುರಿದಿರುವುದುಂಟು. ಸತ್ತವರ ಹೆಸರಿಡಿದು ಲಕ್ಷ್ಮಯ್ಯ ಹೊಗಳುತ್ತಿದ್ದುದು ಉಂಟು.

ಇವರು ತಂಬೂರಿ ನುಡಿಸುವಾಗ ಹೇಳುತ್ತಿದ್ದ ಪ್ರಮುಖ ಕಾವ್ಯಗಳೆಂದರೆ ಕೊಡಗಿನ ನಿಂಗರಾಜನ ಕಥೆ, ಬಂಜೆಹೊನ್ನಮ್ಮನ ಕಥೆ, ಎಲ್ಲಮ್ಮನ ಕಥೆ, ರುದ್ರಕುಮಾರ, ಲೋಹಿತಕುಮಾರ, ಬಾಲನಾಗಮ್ಮ, ಮೂಡಲಗಿರಿ ತಿಮ್ಮಪ್ಪನ ಕಥೆಗಳು, ಜೊತೆಗೆ ಜೋಗಿ ಹಾಡುಗಳನ್ನು ಕೂಡ ಹಾಡುತ್ತಾರೆ. ಇವರ ಮೂಲ ಕಸುಬು ವ್ಯವಸಾಯವಾದರೂ ಪ್ರವೃತ್ತಿ ಮಾತ್ರ. ಜನಪದ ಕಲಾ ಪ್ರಾವೀಣ್ಯತೆ. ಇವರು ತಂಬೂರಿ ಜೊತೆಗೆ ಉತ್ತಮ ತಮಟೆವಾದನಕಾರರೂ ಹೌದು. ಚಿಟ್ಟಿಮೇಳ ಮತ್ತು ಕರಡೆ ವಾದ್ಯಗಳ ಸಮೂಹದಲ್ಲಿ ತಮಟೆಯನ್ನು ಚನ್ನಾಗಿ ಬಾರಿಸುತ್ತಾರೆ. ಹರೆವಾದ್ಯದ ವಾದನಕಾರರೂ ಹೌದು. ದೇವರ ಉತ್ಸವಗಳಲ್ಲಿ ಸೋಮನ ಕುಣಿಸುವಾಗ ಅದ್ಭುತವಾಗಿ ಹರೆಯನ್ನು ಬಡಿಯುತ್ತಾರೆ.

ಇವರು ಸುತ್ತಮುತ್ತಲ ಹಳ್ಳಿಗಳಲ್ಲಿ ಮಾತ್ರವಲ್ಲದೆ, ಇಡೀ ಹಾಸನ ಜಿಲ್ಲೆಯಾದ್ಯಂತ ತಂಬೂರಿ ಮತ್ತು ತಮಟೆವಾದನದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಜಿಲ್ಲೆಯ ಹೊರತಾಗಿ ಮಂಗಳೂರು, ಬೆಂಗಳೂರು, ಮೈಸೂರು ಮುಂತಾದ ಕಡೆಗಳಲ್ಲಿಯೂ ತಮ್ಮ ಕಲಾ ಪ್ರದರ್ಶನವನ್ನು ನೀಡಿದ್ದಾರೆ. ಇವರನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೬ರಲ್ಲಿ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ. ೨೦೦೪ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಸನದಲ್ಲಿ ನಡೆಸಿದ ಜನಪದ ಗೀತಗಾಯನ ಕಮ್ಮಟದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದರು.

**ಲಕ್ಷ್ಮಯ್ಯ, ಕಬ್ಬಳಿ,**
**ಹಳೆಕೊಪ್ಪಲು ಅಂಚೆ, ದುದ್ದ ಹೋಬಳಿ,**
**ತಾ : ಜಿ : ಹಾಸನ.**

# ಜಯಮ್ಮ

ಜಯಮ್ಮ ಬಹುಮುಖ ಪ್ರತಿಭೆಯ ಕಲಾವಿದೆ. ತಮಟೆ ಬಾರಿಸುವುದು, ದೇವರಪದ ಹಾಡುವುದು, ಸೋಬಾನೆ ಹೇಳುವುದು, ಹೀಗೆ ನಾನಾ ರೀತಿಯ ಚಟುವಟಿಕೆಯಲ್ಲಿ ತಮ್ಮನ್ನು ಸದಾ ತೊಡಗಿಸಿಕೊಂಡಿರುವ ಈಕೆ ಲವಲವಿಕೆಯಿಂದ ಕಾರ್ಯೋನ್ಮುಖರಾಗಿರುತ್ತಾರೆ. ಇವರು ಹುಟ್ಟಿದ್ದು ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ನಂದಿಹಳ್ಳಿ ಗ್ರಾಮದಲ್ಲಿ. ಮದುವೆಯಾಗಿ ಬಂದದ್ದು ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಬಸವನಾಯಕನಹಳ್ಳಿ. ಗಂಡ ದಾಸಯ್ಯ. ಜಯಮ್ಮನವರಿಗೆ ಈಗ ಸುಮಾರು ೬೫ ವರ್ಷದ ಹತ್ತಿರವಾಗಿದೆ. ಈಕೆ ಹರಿಜನ ಮಹಿಳೆ, ಕೃಷಿ ಕಾರ್ಮಿಕ ಕೆಲಸ. ಕಲೆ ಪ್ರವೃತ್ತಿ. ತಮಟೆವಾದ್ಯ ಜನಪದ ಕಲಾ ಪ್ರಕಾರದಲ್ಲಿ ವಿಶೇಷವಾದ ಸ್ಥಾನದಲ್ಲಿದೆ. ಈ ವಾದನ ಏನಿದ್ದರು ಗಂಡಸರು ಬಾರಿಸುವುದಾಗಿರುತ್ತದೆ. ಆದರೆ ಹೆಂಗಸರೂ ಕೂಡ ತಮಟೆ ಬಾರಿಸುತ್ತಾರೆ ಎಂದರೆ ಅದು ತುಂಬಾ ವಿಶೇಷವಾದುದೇ ಆಗಿರುತ್ತದೆ. ಅಂತೆಯೇ ಜಯಮ್ಮ ಅಂತಹ ವಿಶಿಷ್ಟವಾದ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದಾರೆ. ಇವರು ತಮಟೆಯನ್ನು ಎದೆಗೆ ಆನಿಸಿ ಎಡಗೈನಲ್ಲಿ ಬಿದಿರು ಕಡ್ಡಿ ಹಿಡಿದು ಬಲಗೈನಲ್ಲಿ ಮತ್ತೊಂದು ಕಡ್ಡಿಯಿಂದ ಬಾರಿಸುತ್ತಾ ಪದಗಳನ್ನು ಹೇಳುತ್ತಿದ್ದರೆ ಕೇಳುಗರ ಕಿವಿ ಗಡಚಿಕ್ಕುವಂತಿರುತ್ತದೆ. ಹೊಗಳಿಕೆಯ ಪದಗಳನ್ನು ಹೇಳುವಾಗಲಂತೂ ತುಂಬಾ ಆಕರ್ಷಣೀಯವಾಗಿರುತ್ತದೆ. ಹಾಸನ ಜಿಲ್ಲೆಯಲ್ಲಿ ಹೆಂಗಸೊಬ್ಬರು ತಮಟೆ ಬಾರಿಸುತ್ತಾರೆಂದರೆ ಅದು ಈ ಜಿಲ್ಲೆಯ ಅನನ್ಯತೆಯೂ ಕೂಡ ಹೌದು. ಇವರ ವಾದ್ಯದ ವಾದನ ಯಾವ ಗಂಡಸಿನ ವಾದನಕ್ಕೂ ಕಡಿಮೆ ಇರುವುದಿಲ್ಲ. ಅಂತಹ ದಿಟ್ಟತನವನ್ನು ಹೊಂದಿರುವ ಜಯಮ್ಮನವರು ಎಲ್ಲರ ಪ್ರಶಂಸೆಗೆ ಒಳಗಾದವರಾಗಿದ್ದಾರೆ.

ಜಯಮ್ಮನವರು ತಮ್ಮ ಕಲಾ ಪ್ರತಿಭೆಯನ್ನು ತಮಟೆ ಬಾರಿಸುವುದಕ್ಕಷ್ಟೇ ಸೀಮಿತಗೊಳಿಸಿ ಕೊಳ್ಳದೆ ಮದುವೆಯಲ್ಲಿ ಸೋಬಾನೆ ಹಾಡುಗಳನ್ನು ಹಾಡುತ್ತಾರೆ.

ದೇವರ ಉತ್ಸವ, ಪೂಜೆ ಮುಂತಾದ ಸಂದರ್ಭಗಳಲ್ಲಿ ದೇವರ ಬಗೆಗಿನ ಹಾಡುಗಳನ್ನು ಕೂಡ ಹೇಳುವುದುಂಟು.

ಜಯಮ್ಮ,
ಬಸವನಾಯಕನಹಳ್ಳಿ,
ಮಲ್ಲೆದೇವರಪುರ ಅಂಚೆ, ಹಳೆಕೋಟೆ ಹೋಬಳಿ,
ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.

# ಮೊಗಣ್ಣಗೌಡ

ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಬಸವನಾಯಕನಹಳ್ಳಿಯ ಮೊಗಣ್ಣಗೌಡರು ಜನಪದ ಹಾಡುಗಾರರು ಹಾಗು ತತ್ವಪದಕಾರರು. ಇವರಿಗೆ ಸುಮಾರು ೬೫ ವರ್ಷ ವಯಸ್ಸಾಗಿದೆ. ತಂದೆ ಚಿಕ್ಕೇಗೌಡರು, ಇವರು ಸುಮಾರು ೩೮ ವರ್ಷಗಳಿಂದಲೂ ತಮ್ಮ ಕಲಾ ಪ್ರಕಾರವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇವರ ಮೂಲ ಕಸುಬು ವ್ಯವಸಾಯ.

ಮೊಗಣ್ಣಗೌಡರು ಮುಖ್ಯವಾಗಿ ಭಜನೆ ಮಾಡುತ್ತಾರೆ. ಪ್ರತಿನಿತ್ಯ ಹಲವಾರು ಜನರನ್ನು ಸೇರಿಸಿಕೊಂಡು ಭಜನೆ ಮಾಡುವುದು ಇವರ ಹವ್ಯಾಸ, ತತ್ವಪದಗಳನ್ನು ಹಾಡುತ್ತಾ ಕುಳಿತರೆ ಕಾಲ ಹೋದದ್ದೇ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಹಬ್ಬ-ಹರಿದಿನಗಳಲ್ಲಿ, ಜಾತ್ರೆ ಉತ್ಸವ ಮುಂತಾದ ಸಂದರ್ಭಗಳಲ್ಲಿ ಕೋಲಾಟ ಆಡುವ ಹವ್ಯಾಸವನ್ನೂ ಕೂಡ ರೂಢಿಸಿಕೊಂಡಿದ್ದಾರೆ. ಕೋಲಾಟದ ಹಾಡುಗಳನ್ನು ತುಂಬಾ ಮಾಧುರ್ಯವಾಗಿ ಹಾಡುತ್ತಾರೆ. ಕೋಲಾಟದ ನಾನಾ ಬಗೆಗಳನ್ನು ಕೂಡ ಆಡುತ್ತಾರೆ. ಜೊತೆಗೆ ನಾಟಕದಲ್ಲಿ ಪಾತ್ರಮಾಡುವ ಹವ್ಯಾಸವೂ ಕೂಡ ಇದೆ.

ಇವರು ತಮ್ಮ ಚಿಕ್ಕವಯಸ್ಸಿನಲ್ಲಿಯೇ ಈ ಕಲೆಗಳನ್ನು ಮೈಗೂಡಿಸಿಕೊಂಡವರು. ಹಿಂದೆ ಆಗಾಗ ಕೋಲಾಟಗಳು ನಡೆಯುತ್ತಿದ್ದವು. ಈಗ ಟಿ. ವಿ.ಗಳು ಬಂದ ಮೇಲೆ ಅವೆಲ್ಲ ಕಡಿಮೆಯಾಗಿವೆ, ಅಪರೂಪಕ್ಕೊಮ್ಮೆ ಕೋಲಾಟ ಆಡೋಣವೆಂದರೆ ಕೋಲಾಟ ಮಾಡುವವರಲ್ಲಿಯೂ ನಿರುತ್ಸಾಹ. ಪ್ರೇಕ್ಷಕರ ಕೊರತೆಯೂ ಇರುತ್ತದೆ ಎಂದು ತಮ್ಮ ಬೇಸರವನ್ನು ವ್ಯಕ್ತಪಡಿಸುತ್ತಾರೆ. ಕೋಲಾಟದ ಪದಗಳು ಭಜನೆ ಹಾಡುಗಳನ್ನು ಹುಡುಗರಿಗೆ ಕಲಿಸೋಣವೆಂದರೆ ಯಾರು ಮುಂದೆ ಬರುತ್ತಿಲ್ಲವೆಂದು ತಮ್ಮ ನಿರಾಸೆಯನ್ನು ತೋಡಿಕೊಂಡರು. ಇಂತಹವರಿಂದ ಹಾಡುಗಳನ್ನು ಸಂಗ್ರಹಿಸಿದರೆ ನಮ್ಮ ಜನಪದ ಸಾಹಿತ್ಯ ಭಂಡಾರ ಸಂಪದ್ಭರಿತವಾಗಿರುತ್ತದೆ.

ಮೊಗಣ್ಣಗೌಡ, ಬಸವನಾಯಕನಹಳ್ಳಿ, ಮಲ್ಲೆದೇವರಪುರ ಅಂಚೆ,
ಹಳೆಕೋಟೆ ಹೋಬಳಿ, ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.

## ಎಂ. ಬಿ. ಶಿವರುದ್ರಪ್ಪ

ಕರ್ನಾಟಕದಲ್ಲಿ ಬಯಲಾಟ ತುಂಬಾ ಪ್ರಸಿದ್ಧಿಯನ್ನು ಪಡೆದಿದೆ. ಉತ್ತರ ಕರ್ನಾಟದಲ್ಲಿ ದೊಡ್ಡಾಟ, ಸಣ್ಣಾಟಗಳೆಂದು; ದಕ್ಷಿಣ ಕರ್ನಾಟದ ಕರಾವಳಿಯಲ್ಲಿ ಯಕ್ಷಗಾನವೆಂತಲೂ, ಬಯಲು ಪ್ರದೇಶದಲ್ಲಿ ಮೂಡಲಪಾಯ ಬಯಲಾಟ ಅಥವಾ ಯಕ್ಷಗಾನವೆಂತಲೂ ಕರೆಯುತ್ತಾರೆ. ಮೂಡಲಪಾಯ ಇತ್ತೀಚೆಗೆ ತುಂಬಾ ಕ್ಷೀಣಾವಸ್ಥೆಯಲ್ಲಿರುವುದನ್ನು ಕಾಣಬಹುದು. ಮೂಡಲಪಾಯ ಬಯಲಾಟದಲ್ಲಿ ಭಾಗವಂತಿಕೆ ಮಾಡುವ ಭಾಗವತ ಮತ್ತು ಹಿಮ್ಮೇಳದಲ್ಲಿ ಭಾಗವಹಿಸುವ ಮೃದಂಗ, ತಾಳ ಮುಖವೀಣೆ ಒಂದು ಭಾಗವಾದರೆ ಪಾತ್ರಧಾರಿಗಳು ಮತ್ತೊಂದು ಭಾಗವಾಗುತ್ತಾರೆ. ಇಲ್ಲಿ ಇಡೀ ಆಟವನ್ನು ನಿಯಂತ್ರಿಸುವವ ಭಾಗವತನಾಗಿರುತ್ತಾನೆ.

ಶಿವರುದ್ರಪ್ಪ ಮೂಡಲಪಾಯದ ಭಾಗವತ. ಇವರು ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ, ಜಾವಗಲ್ ಹೋಬಳಿಯ ಮೊಸಳೆ ಗ್ರಾಮದಲ್ಲಿ ಜನಿಸಿದವರು. ಇವರಿಗೆ ಸುಮಾರು ೬೫ ವರ್ಷ. ತಂದೆ ಭೈರಪ್ಪ, ಲಿಂಗಾಯತ ಜಾತಿಗೆ ಸೇರಿದವರಾಗಿದ್ದು, ಮೂಲತಃ ಕೃಷಿಕರು. ಪ್ರವೃತ್ತಿಯಾಗಿ ಬಯಲಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರು ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ಹಳೇಬೀಡು ಹೋಬಳಿಯ ಗೋಣಿಸೋಮನಹಳ್ಳಿಯಲ್ಲಿ ಮದುವೆಯಾಗಿದ್ದು, ಅಂದಿನಿಂದ ಈ ಊರಲ್ಲೇ ವಾಸಿಸುತ್ತಿದ್ದಾರೆ.

ಇವರು ಭಾಗವಂತಿಕೆ ಜೊತೆಗೆ ನಾಟಕ ಕಲಿಸುವುದು, ಭಜನೆ ಹರಿಕಥೆ ಮಾಡುವುದು ಮುಂತಾದ ಕಲೆಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರು ಭಾಗವಂತಿಕೆ ಮಾಡುತ್ತಿದ್ದ ಕಥೆಗಳೆಂದರೆ ಮಹಾಭಾರತ, ರಾಮಾಯಣ, ಭಾಗವತಕ್ಕೆ ಸಂಬಂಧಿಸಿದವುಗಳು. ಆದರೆ ಹಳೇಬೀಡು ಪ್ರಾಂತ್ಯಕ್ಕೆ ಹೆಸರುವಾಸಿಯಾಗಿದ್ದ ಜನಪದ

ಕಥಾನಾಯಕ, ವೀರ, ಶೂರನೂ ಆದ "ಕರಿಭಂಟನ ಕಾಳಗ"ವನ್ನು ಹೆಚ್ಚು ಮಾಡಿಸುತ್ತಿದ್ದರಂತೆ. ಊರಿನಲ್ಲಿ ಒಂದು ತಂಡವನ್ನು ಕಟ್ಟಿ ಬೆಳೆಸಿ ಇಡೀ ಆ ಪ್ರಾಂತಕ್ಕೆಲ್ಲಾ ಹೆಸರು ವಾಸಿಯಾಗಿದ್ದರು. ಸುತ್ತಮುತ್ತಲ ಹಳ್ಳಿಗಳಲ್ಲೆಲ್ಲಾ ಪ್ರದರ್ಶನ ನೀಡುತ್ತಿದ್ದರು. ಆದರೆ ಈಗ ಆ ತಂಡದವರೆಲ್ಲಾ ಚೆಲ್ಲಾಪಿಲ್ಲಿಯಾಗಿ ಯಾವುದೇ ಪ್ರದರ್ಶನವನ್ನು ನೀಡುತ್ತಿಲ್ಲ. ಅಲ್ಲಿ ಇಲ್ಲಿ ಪೌರಾಣಿಕ ನಾಟಕಗಳು ಹಾಗು ಹರಿಕಥೆಗಳನ್ನು ಮಾಡುತ್ತಾರೆ. ಇವರಿಗೆ ಕರ್ನಾಟಕ ಸರ್ಕಾರದಿಂದ ಜನಪದ ಕಲಾವಿದರ ಮಾಸಾಶನ ಮಂಜೂರಾಗಿದೆ.

**ಎಂ. ಬಿ. ಶಿವರುದ್ರಪ್ಪ,**
**ಗೋಣಿಸೋಮನಹಳ್ಳಿ, ಹಳೇಬೀಡು ಹೋಬಳಿ,**
**ಬೇಲೂರು ತಾಲೂಕು, ಹಾಸನ ಜಿಲ್ಲೆ.**

## ೫೨. ಎಲ್. ಗೋವಿಂದಪ್ಪ

ಜನಪದದ ನಾನಾ ಕಲಾ ಪ್ರಕಾರಗಳಲ್ಲಿ ನುರಿತು ಕಲಾ ಪ್ರದರ್ಶನ ನೀಡಿರುವ ಗೋವಿಂದಪ್ಪ ಅವರು ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಕಸಬಾ ಹೋಬಳಿಯ ಬೋರನ ಕೊಪ್ಪಲಿನವರು. ಸುಮಾರು ೬೫ ವರ್ಷ. ತಂದೆ ಲಕ್ಷ್ಮಯ್ಯ. ಒಕ್ಕಲಿಗ ಜನಾಂಗಕ್ಕೆ ಸೇರಿದವರು. ಇವರು ಜನಪದಗೀತ ಗಾಯನ,. ಚಿಟ್ಟಿ ಮೇಳ, ವೀರಗಾಸೆ, ಸೋಮನ ಕುಣಿತ, ನಂದಿಧ್ವಜ ಕುಣಿತ ಮುಂತಾದ ಕ್ಷೇತ್ರಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದಾರೆ. ಆದರೆ ಇವರ ಪ್ರಮುಖ ಕಲಾ ಪ್ರಕಾರ ಎಂದರೆ ಕೋಲಾಟ. ಕೋಲಾಟದಲ್ಲಿ ಹಾಡುಗಾರರಾಗಿ, ಕೋಲಾಟದ ನೃತ್ಯಗಾರರಾಗಿ ಅದ್ಭುತವಾದ ಸಾಧನೆಯನ್ನು ಮಾಡಿ ಹೆಸರು ಗಳಿಸಿದ್ದಾರೆ. ತಮ್ಮ ಊರಿನಲ್ಲಿ "ಮಲ್ಲಿಕಾರ್ಜುನ ಕಲಾ ಸಂಘ" ಎಂಬ ಸಂಘವನ್ನು ಹುಟ್ಟುಹಾಕಿ ಅದರ ಅಧ್ಯಕ್ಷರೂ ಕೂಡ ಆಗಿದ್ದಾರೆ. ಈ ಸಂಘದ ಮೂಲಕ ಯುವಕರಿಗೆ ಜನಪದ ಕಲೆಗಳು ಹಾಗು ವಾದ್ಯ ಪರಿಕರಗಳ ಬಗ್ಗೆ ತರಬೇತಿ ನೀಡುತ್ತಾ ರಾಜ್ಯದ ನಾನಾಕಡೆ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಇವರು ಹಾಗು ಇವರ ತಂಡ ೧೯೯೭ರಲ್ಲಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಕೋಲಾಟ ಪ್ರದರ್ಶನ ನೀಡಿದ್ದಾರೆ. ಇದೇ ವರ್ಷ ಹಾಸನದಲ್ಲಿ ನಡೆದ ರಾಜ್ಯೋತ್ಸವದಲ್ಲಿ ಕೋಲಾಟ ನಡೆಸಿಕೊಟ್ಟಿದ್ದಾರೆ. ಹಾಸನದಲ್ಲಿ ಏರ್ಪಡಿಸಿದ್ದ ಸಂಚಾರಿ ಸಪ್ತಾಹದಲ್ಲಿ ಕೋಲಾಟ, ಇದೇ ವರ್ಷ ಹಾಸನದಲ್ಲಿ ಕನ್ನಡ ರಾಜ್ಯೋತ್ಸವ, ಹೊಯ್ಸಳ ಮಹೋತ್ಸವ, ಮೈಸೂರಿನಲ್ಲಿ ನಡೆದ ದಸರಾ ಮೆರವಣಿಗೆ ಮತ್ತು ನಾಟಕ, ೨೦೦೦ದಲ್ಲಿ ಹಾಸನದಲ್ಲಿ ಕನ್ನಡ ರಾಜ್ಯೋತ್ಸವದಲ್ಲಿ ಕೋಲಾಟ, ನೆಹರು ಯುವಕೇಂದ್ರದವರು ಅರಸೀಕೆರೆಯಲ್ಲಿ ನಡೆಸಿದ ಸಾಂಸ್ಕೃತಿಕ ಕಾರ್ಯಕ್ರಮ, ೨೦೦೧ರಲ್ಲಿ ಹಾಸನದಲ್ಲಿ ಕೋಲು ಮೇಳ, ೨೦೦೨ರಲ್ಲಿ ಅರಸೀಕೆರೆಯಲ್ಲಿ ನಡೆದ ನಾಡಹಬ್ಬದಲ್ಲಿ ಕೋಲಾಟ, ಇದೇ ವರ್ಷ ಅರಸೀಕೆರೆಯಲ್ಲಿ ನಡೆಸಿದ ಕಲಾಮೇಳದಲ್ಲಿ

ಜನಪದ ಗೀತ ಗಾಯನ, ೨೦೦೪ರಲ್ಲಿ ಹಾಸನದ ವಸ್ತು ಪ್ರದರ್ಶನದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸುಗ್ಗಿಕುಣಿತ, ೨೦೦೫ರಲ್ಲಿ ಹಂಪಿ ಉತ್ಸವದಲ್ಲಿ ಕೋಲಾಟ, ಇದೇ ವರ್ಷ ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ಕಲಾ ಪ್ರದರ್ಶನದಲ್ಲಿ ಕೋಲಾಟ, ವಿಶ್ವ ಪ್ರವಾಸೋದ್ಯಮ ಇಲಾಖೆಯ ಕಾರ್ಯಕ್ರಮದಲ್ಲಿ ಜನಪದ ಗೀತಗಾಯನ, ಹೊಯ್ಸಳ ಮಹೋತ್ಸವ, ರಾಜ್‌ಕುಮಾರ ಅಭಿಮಾನಿಗಳು ನಡೆಸಿದ ಕಾರ್ಯಕ್ರಮಗಳಲ್ಲಿ ಜನಪದ ಗೀತಗಾಯನ, ರಾಷ್ಟ್ರೀಯ ನಾಡಹಬ್ಬಗಳ ಆಚರಣೆಯಲ್ಲಿ ಕೋಲಾಟ, ಅರಸೀಕೆರೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಮತ್ತು ಮಂಜುಳ ಲಲಿತ ಕಲಾ ಮಹಾವಿದ್ಯಾಲಯದವರು ನಡೆಸಿದ ಕಾರ್ಯಕ್ರಮದಲ್ಲಿ ಕೋಲಾಟ, ಚನ್ನರಾಯಪಟ್ಟಣ ತಾಲ್ಲೂಕಿನ ತಿಮ್ಮಲಾಪುರದಲ್ಲಿ ಕೋಲಾಟ, ೨೦೦೬ರಲ್ಲಿ ಸುವರ್ಣ ಕರ್ನಾಟಕ ದಿಬ್ಬಣದಲ್ಲಿ ವೀರಗಾಸೆ ನೃತ್ಯ ಹೀಗೆ ನೂರಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಜನಪದ ಕಲಾಪ್ರದರ್ಶನ ನೀಡಿದ್ದಾರೆ. ಹಲವಾರು ಶಾಲಾ ಕಾಲೇಜುಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಜನಪದ ಗೀತಗಾಯನವನ್ನು ನಡೆಸಿಕೊಟ್ಟಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ನಡೆಸಿರುವ ಹಲವಾರು ಕಾರ್ಯಕ್ರಮಗಳಲ್ಲಿ ಜನಪದ ಕಲಾ ಪ್ರದರ್ಶನಗಳನ್ನು ನೀಡಿದ್ದಾರೆ.

ಇವರನ್ನು ೧೯೯೪ರಲ್ಲಿ ಅರಸೀಕೆರೆ ತಾಲ್ಲೂಕು ಆಡಳಿತವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ೨೦೦೫ರಲ್ಲಿ ಹಾಸನ ಜಿಲ್ಲಾಡಳಿತವು ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ೨೦೦೪ರಲ್ಲಿ ವಿಶ್ವ ಪ್ರವಾಸೋದ್ಯಮ ದಿನದಂದು ಅಭಿನಂದಿಸಿದೆ. ಜೊತೆಗೆ ಹಲವಾರು ಸಂಘ ಸಂಸ್ಥೆಗಳೂ ಕೂಡ ಸನ್ಮಾನಿಸಿವೆ. ಕೃಷಿ ಕಾಯಕದೊಂದಿಗೆ ಇಷ್ಟೆಲ್ಲಾ ಜನಪದ ಕಲಾ ಪ್ರಕಾರಗಳನ್ನು ಪ್ರದರ್ಶಿಸುತ್ತಾ ಉಳಿಸಿ ಬೆಳೆಸಲು ಪ್ರಯತ್ನಿಸುತ್ತಿರುವುದು ಶ್ಲಾಘನೀಯ. ಇವರಿಗೆ ಕರ್ನಾಟಕ ಸರ್ಕಾರದಿಂದ ಜನಪದ ಕಲಾವಿದರ ಮಾಸಾಶನ ದೊರೆಯುತ್ತಿದೆ. ಇವರು ನಾಟಕಕಾರರೂ ಹೌದು. ಶನಿಕಥೆಯನ್ನೂ ಕೂಡ ಯಕ್ಷಗಾನ ಧಾಟಿಯಲ್ಲಿ ಹೇಳುತ್ತಾರೆ.

**ಬಿ. ಎಲ್. ಗೋವಿಂದಪ್ಪ,**
**ಬೋರನಕೊಪ್ಪಲು,**
**ಕಸಬಾ ಹೋಬಳಿ,**
**ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.**

## ವೀರಯ್ಯ

ನವಿಲು ಭಾರತದ ರಾಷ್ಟ್ರ ಪಕ್ಷಿ. ಇದು ಹಿಂದೂ ಧಾರ್ಮಿಕ ಸಂಪ್ರದಾಯದ ಹಿನ್ನೆಲೆಯಲ್ಲಿ ಕಾರ್ತಿಕೇಯನ ಹಾಗು ಸರಸ್ವತಿಯ ವಾಹನವಾಗಿದೆ. ಇದಕ್ಕೆ ಮಯೂರ ಎಂದು ಹೆಸರಿದೆ. ನವಿಲು ತನ್ನ ಗರಿಕೆದರಿದಾಗ ಅದರ ಗರಿಯಲ್ಲಿರುವ ಕಣ್ಣುಗಳು ನೋಡಲು ತುಂಬಾ ಮನೋಹರವಾಗಿರುತ್ತವೆ. ಇದು ನರ್ತನ ಮಾಡುವಾಗಲಂತೂ ಅದ್ಭುತವಾಗಿ ಕಾಣುತ್ತದೆ. ಅದನ್ನು ನೋಡಲು ಎರಡು ಕಣ್ಣುಗಳು ಸಾಕಾಗುವುದಿಲ್ಲ. ನವಿಲಿನ ಹಾಗೆಯೇ ಮಾಡುವ ನೃತ್ಯ ಒಂದಿದ್ದು, ಅದಕ್ಕೆ ನವಿಲು ನೃತ್ಯ, ಮಯೂರ ನೃತ್ಯ ಎಂದು ಕರೆಯುತ್ತಾರೆ. ಇದೊಂದು ಪ್ರಮುಖ ಜನಪದ ನೃತ್ಯ. ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿ ಈ ನೃತ್ಯ ಪ್ರಕಾರ ಇದೆ.

ವೀರಯ್ಯ ನವಿಲು ಕುಣಿತದಲ್ಲಿ ಪ್ರಸಿದ್ಧಿ ಪಡೆದಿರುವ ವ್ಯಕ್ತಿ. ಇವರು ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿಯ ಹಂದ್ರಾಳು ಗ್ರಾಮದವರು. ಸುಮಾರು ೬೫ ವರ್ಷ. ತಂದೆ ನಂಜಯ್ಯ. ವೀರಯ್ಯ ಚಿಕ್ಕಂದಿನಿಂದಲೂ ನವಿಲು ನೃತ್ಯವನ್ನು ರೂಢಿಸಿಕೊಂಡವರು. ದೇವರ ಉತ್ಸವ, ಜಾತ್ರೆ, ಗಣೇಶನ ಮೆರವಣಿಗೆ, ಜನಪದ ಕಲಾಮೇಳ ಮುಂತಾದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತನ್ನ ಕಲಾ ಪ್ರೌಢಿಮೆಯನ್ನು ಮೆರೆದು ಜನರಿಂದ ಅಪಾರ ಮೆಚ್ಚುಗೆಯನ್ನು ಗಳಿಸಿದ್ದಾರೆ. ಹಾಸನ ಜಿಲ್ಲಾದ್ಯಂತ ಕಾರ್ಯಕ್ರಮಗಳನ್ನು ನೀಡಿ ಯಶಸ್ವಿಯಾಗಿದ್ದಾರೆ. ಇಳಿ ವಯಸ್ಸಿನಲ್ಲಿಯೂ ಕೂಡ ಅವಕಾಶ ಸಿಕ್ಕಿದಾಗ ತನ್ನ ನೃತ್ಯ ಪ್ರದರ್ಶನವನ್ನು ನೀಡುತ್ತಾರೆ. ಇವರು ಈ ಕಲೆಯನ್ನು ಮುಂದಿನ ಪೀಳಿಗೆಗೆ ಉಳಿಸಬೇಕೆಂಬ ಹಂಬಲ ಬಹಳ ಇದೆ. ಆದರೆ ಯುವಕರು ಮುಂದೆ ಬರುತ್ತಿಲ್ಲ ಎಂಬ ವಿಷಾದ ಇವರಲ್ಲಿದೆ.

ವೀರಯ್ಯ, ಹಂದ್ರಾಳು, ಜಾವಗಲ್ ಹೋಬಳಿ,
ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.

# ಸೋಬಾನೆ ನಿಂಗಮ್ಮ

ಸೋಬಾನೆ ನಿಂಗಮ್ಮ ಉ॥ ಗಿಡ್ಡಮ್ಮ ಹಾಸನ ತಾಲೂಕು, ದುದ್ದ ಹೋಬಳಿಯ ಎಸ್. ಬಂಡಿಹಳ್ಳಿ ಗ್ರಾಮದವರು. ತಂದೆ ಸೊಂಬೇಗೌಡ, ತಾಯಿ ಲಕ್ಷ್ಮಮ್ಮ. ಈಕೆಯ ತಂದೆಗೆ ಗಂಡು ಮಕ್ಕಳಿಲ್ಲದ ಕಾರಣ ತಂದೆ ಮನೆಯಲ್ಲಿಯೇ ಕರಿಗೌಡ ಎಂಬುವರನ್ನು ಮದುವೆಯಾಗಿ ಸಂಸಾರ ನಡೆಸಿಕೊಂಡು ಬಂದವರು. ಇವರ ಜನನ ೦೧-೪-೧೯೪೨.

ಇವರು ಚಿಕ್ಕಂದಿನಿಂದಲೇ ಜನಪದ ಹಾಡುಗಳಿಗೆ ಮಾರುಹೋದವರು. ಜನಪದ ಹಾಡುಗಾರಿಕೆ ಇವರಿಗೆ ವಂಶಪಾರಂಪರ್ಯವಾಗಿ ಬಂದಿರುವಂತಹದ್ದು. ಈಕೆ ಜನಪದದ ಎಲ್ಲಾ ಪ್ರಕಾರದ ಹಾಡುಗಳನ್ನು ಹಾಡುತ್ತಾರೆ. ಇವರ ಊರಿನಲ್ಲಿ ಹಾಗು ಸುತ್ತಮುತ್ತಲ ಹಳ್ಳಿಗಳಲ್ಲಿ ಯಾವುದೇ ಶುಭ ಕಾರ್ಯಗಳು ನಡೆಯಲಿ ಇವರ ಹಾಡುಗಾರಿಕೆ ಇದ್ದೇ ಇರುತ್ತದೆ. ಸೋಬಾನೆ ಹಾಡುಗಳೆಂದರೆ ಇವರಿಗೆ ಎಲ್ಲಿಲ್ಲದ ಪ್ರೀತಿ. ಮದುವೆ, ಒಸಗೆ, ಸೀಮಂತ, ಕರುವಿನ ಮದುವೆ, ಹಬ್ಬ-ಹರಿದಿನ, ದೇವರ ಉತ್ಸವ ಮುಂತಾದ ಸಂದರ್ಭಗಳಲ್ಲಿ ಸೋಬಾನೆ ಹಾಡುಗಳನ್ನು ಹೇಳುತ್ತಾರೆ.

ಕೃಷಿಯ ಕೆಲಸದ ಸಂದರ್ಭಗಳಲ್ಲಿ ಕಳೆಕೀಳುವುದು, ನಾಟಿ ಮಾಡುವುದು, ಸುಗ್ಗಿಯಲ್ಲಿ ಕಣದ ಕೆಲಸಗಳಲ್ಲಿ ಇವರ ಸೋಬಾನೆ ಹಾಡುಗಳು ಕೆಲಸಗಾರರ ಪರಿಶ್ರಮವನ್ನು ಹಗುರಗೊಳಿಸುತ್ತವೆ. ಇವರಿದ್ದರೆ ಸಾಕು ಇವರು ಸುತ್ತ ಮುತ್ತ ಒಂದು ದೊಡ್ಡ ಗುಂಪೇ ನಿರ್ಮಾಣವಾಗುತ್ತದೆ.

ಇವರಿಂದ ಹಲವರು ಸೋಬಾನೆ ಹಾಡುಗಳನ್ನು ಕಲಿತಿದ್ದಾರೆ. ಇದು ಇಲ್ಲಿಗೆ ನಿಲ್ಲಬಾರದು. ಮುಂದಿನ ಪೀಳಿಗೆಗೂ ಮುಂದುವರಿಯಬೇಕು ಎಂಬುದು ಇವರ ಆಶಯ. ಇವರ ಮಕ್ಕಳೂ ಕೂಡ ಇವರ ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ.

ಆದರೆ ಇವರು ಯಾವುದೇ ಕಾರ್ಯಕ್ರಮಗಳಲ್ಲಿ ಹಾಡಿದರೂ ಯಾವುದೇ ಸಂಭಾವನೆಯನ್ನು ನಿರೀಕ್ಷಿಸುವುದಿಲ್ಲ. ಎಲೆ, ಅಡಿಕೆ, ಬಾಳೆಹಣ್ಣು ಇವೇ ಇವರಿಗೆ ದೊರಕುವ ಸಂಭಾವನೆ. ಈಗಲೂ ಕಂಚಿನ ಕಂಠದಿಂದ ಎಲ್ಲರನ್ನು ಹಾಡುಗಳ ಮೂಲಕ ರಂಜಿಸುತ್ತಾರೆ. ಇವರ ಹಾಡುಗಾರಿಕೆ ಸುಮಾರು ೫೦ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ.

**ಸೋಬಾನೆ ನಿಂಗಮ್ಮ,**
**ಎಸ್. ಬಂಡಿಹಳ್ಳಿ, ಗಾಡೇನಹಳ್ಳಿ ಅಂಚೆ,**
**ದುದ್ದ ಹೋಬಳಿ, ಹಾಸನ ತಾಲೂಕು, ಹಾಸನ ಜಿಲ್ಲೆ.**

## ಸತ್ಯಮ್ಮ

ತೊಗಲುಗೊಂಬೆ ಕಲಾವಿದೆಯಾದ ಸತ್ಯಮ್ಮ ಹಾಸನ ಜಿಲ್ಲೆ ಆಲೂರು ತಾಲೂಕಿನ ಅಗಸರಹಳ್ಳಿಯವರು. ವಯಸ್ಸು ೬೫ ವರ್ಷ. ಗಂಡ ಹನುಮಂತಯ್ಯ. ಸಿಳ್ಳೆಕ್ಯಾತ ಜನಾಂಗಕ್ಕೆ ಸೇರಿದವರು. ಮಾತೃಭಾಷೆ ಮರಾಠಿ. ವೃತ್ತಿ ಭಿಕ್ಷಾಟನೆ, ಪ್ರವೃತ್ತಿ ತೊಗಲುಗೊಂಬೆ ಮೇಳ ನಡೆಸುವುದು. ಇವರಿಗೆ ಈ ಕಲೆ ಹುಟ್ಟಿನಿಂದಲೇ ಬಂದಿರುವಂತಹದ್ದು. ಈಕೆಯು ಹುಟ್ಟಿದ ಊರು ಹಾಸನ ತಾಲ್ಲೂಕಿನ ಹೂವಿನಹಳ್ಳಿ ಕಾವಲು. ತಂದೆ ಗೊಂಬೆರಾಮಯ್ಯ ತಾಯಿ ಹನುಮಮ್ಮ ಇಬ್ಬರೂ ಕೂಡ ತೊಗಲುಗೊಂಬೆ ಮೇಳದಲ್ಲಿ ಪ್ರಸಿದ್ಧಿಯನ್ನು ಪಡೆದವರು. ಹನುಮಮ್ಮನಿಗೆ ಜಾನಪದ ಅಕಾಡೆಮಿಯ ಪ್ರಶಸ್ತಿಯ ದೊರಕಿದೆ. ಇವರ ತಮ್ಮ ಗುಂಡೂ ರಾಜನೂ ಕೂಡ ಅದ್ಭುತ ತೊಗಲುಗೊಂಬೆ ಕಲಾವಿದ.

ಸತ್ಯಮ್ಮ ಚಿಕ್ಕಂದಿನಿಂದಲೂ ತಂದೆಯವರು ನಡೆಸುತ್ತಿದ್ದ ತೊಗಲುಗೊಂಬೆ ಮೇಳದಲ್ಲಿ ಸಕ್ರಿಯವಾಗಿ ಭಾಗವಹಿಸಿದವರು. ಇವರು ಮದುವೆಯ ನಂತರವೂ ಕೂಡ ಈ ಕಲೆಯನ್ನೇ ಬದುಕಿನ ಮುಖ್ಯ ಅಂಗವಾಗಿ ಮಾಡಿಕೊಂಡು ಬಂದರು. ತೊಗಲುಗೊಂಬೆಗಳನ್ನು ಕುಣಿಸುವುದರಲ್ಲಿ ಈಕೆ ಎತ್ತಿದ ಕೈ. ಆ ಕೈ ಚಳಕವನ್ನು ನೋಡಿದರೆ ನಿಜವಾಗಿಯೂ ಆಶ್ಚರ್ಯವಾಗುತ್ತದೆ. ಎರಡು ಕೈಗಳಿಂದಲೂ ಏಕ ಕಾಲಕ್ಕೆ ಗೊಂಬೆಗಳನ್ನು ಕುಣಿಸುತ್ತಾ ಹಿಮ್ಮೇಳದ ಹಾಡುಗಳನ್ನು, ಸಂಭಾಷಣೆಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಾರೆ. ಇವರ ಗಂಡ ಮೊದಲು ತೊಗಲುಗೊಂಬೆ ಮೇಳ ಮಾಡುತ್ತಿದ್ದರು. ನಂತರ ಅವರು ಸೋತಾಗ ಇವರೇ ತಂಡವನ್ನು ಮುನ್ನಡೆಸಿಕೊಂಡು ಬಂದರು. ಇವರು ಮುಖ್ಯವಾಗಿ ರಾಮಾಯಣ, ಮಹಾಭಾರತ, ಭಾಗವತ, ಜನಪದ ಕಥೆಗಳನ್ನು ತಮ್ಮ ಮೇಳಗಳಲ್ಲಿ ಮಾಡುತ್ತಾರೆ.

ಇವರು ತಮ್ಮ ವ್ಯಾಪ್ತಿಯ ಹಳ್ಳಿಗಳ ಜೊತೆಗೆ ಹಾಸನ ಜಿಲ್ಲಾದ್ಯಂತ ತೊಗಲುಗೊಂಬೆ ಮೇಳಗಳನ್ನು ನಡೆಸಿದ್ದಾರೆ. ಹೊರ ಜಿಲ್ಲೆಗಳಾದ ಮಂಗಳೂರು, ಉಡುಪಿ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿಯೂ ಕಾರ್ಯಕ್ರಮ ನಡೆಸಿದ್ದಾರೆ. ಕೇರಳದ ತಿರುವನಂತಪುರದಲ್ಲಿ ಕಿವುಡ ಮತ್ತು ಮೂಗ ಮಕ್ಕಳಿಗೆ ತರಬೇತಿಯನ್ನು ನೀಡಿದ್ದಾರೆ. ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರದ ಮೂಲಕ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇವರ ಕಾರ್ಯ ವೈಖರಿಯನ್ನು ದುರ್ಗದ ರಾಜೇಗೌಡರು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ.

**ಸತ್ಯಮ್ಮ,**
**ಅಗಸರಹಳ್ಳಿ, ಮಾವನೂರು ಅಂಚೆ,**
**ಕಸಬಾ ಹೋಬಳಿ, ಆಲೂರು ತಾಲೂಕು, ಹಾಸನ ಜಿಲ್ಲೆ.**

# ಕೊಮಾರಯ್ಯ (ಮೊಗಾರಯ್ಯ)

ಜನಪದ ವಾದ್ಯಗಳಲ್ಲಿ ಮೋರಿ (ಮೌರಿ) ವಾದನ ಒಂದು ವಿಶೇಷವಾದ ವಾದ್ಯ. ಗುಂಪಿನಲ್ಲಿ ವಾದ್ಯದ ತಂಡ ಇರುತ್ತದೆ. ಅದರಲ್ಲಿ ತಮಟೆ, ಡೋಲು, ಶೃತಿ, ಮೋರಿ, ಕುಣಿಮಿಣಿ ಮುಂತಾದವುಗಳು ಇರುತ್ತವೆ. ಮಲೆನಾಡು ಪ್ರದೇಶದಲ್ಲಿ ಕುಣಿಮಿಣಿ ವಾದ್ಯ ವಿಶೇಷವಾದುದು. ಮದುವೆ ದೇವರ ಉತ್ಸವ, ಜಾತ್ರೆ, ಸುಗ್ಗಿ ಕುಣಿತ ಮುಂತಾದ ಸಂದರ್ಭಗಳಲ್ಲೆಲ್ಲಾ ಈ ವಾದ್ಯ ಇದ್ದೇ ಇರುತ್ತದೆ.

ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಯಡಕೆರೆ ಗ್ರಾಮದವರು ಕೊಮಾರಯ್ಯ. ಇವರನ್ನು ಮೋರಿ ಮೊಗಾರಯ್ಯ ಎಂದೇ ಎಲ್ಲರೂ ಕರೆಯುವುದು. ಕಾರಣ ಮೋರಿ ವಾದ್ಯದಲ್ಲಿ ಪ್ರವೀಣರು. ಮೋರಿ ಜೊತೆಗೆ ಮೊಗಾರ ಎಂಬ ಪದವು ಜೋಡಣೆಯಾಗಿರುವುದು. ವಿಶೇಷಣವೂ ಆಗಿದೆ. ಇವರಿಗೆ ೬೫ ವರ್ಷ. ಪರಿಶಿಷ್ಟ ಜಾತಿಯವರು. ತಂದೆ ತಿಪ್ಪಯ್ಯ. ವೃತ್ತಿಯಲ್ಲಿ ಕೂಲಿಕೆಲಸ. ಪ್ರವೃತ್ತಿ ಮೋರಿವಾದನ. ಇವರಿಗೆ ವೃತ್ತಿಯ ಕೆಲಸಕ್ಕಿಂತ ಪ್ರವೃತ್ತಿಯ ಕೆಲಸವೇ ಪ್ರಧಾನ. ಮೋರಿ ಊದಲು ಕುಳಿತರೆ ಉಸಿರನ್ನು ಬದಲಾಯಿಸುವುದು ಕೂಡ ಗೊತ್ತಾಗದಂತೆ ಗಂಟೆಗಟ್ಟಲೆ ಮೋರಿವಾದನ ಮಾಡುತ್ತಾರೆ. ಈ ಕಲೆಯ ಜೊತೆಗೆ ಕೋಲಾಟ ಆಡುವುದು, ಲಾವಣಿ ಪದಗಳನ್ನು ಹಾಡುತ್ತಾರೆ.

ಇವರು ಕೇವಲ ತಮ್ಮ ಹಳ್ಳಿಗೆ ಮಾತ್ರ ಸೀಮಿತವಾಗಿರದೆ ಸಕಲೇಶಪುರ ತಾಲ್ಲೂಕಿಗೆ ಚಿರಪರಿಚಿತ. ತಾಲ್ಲೂಕಿನಾದ್ಯಂತ ಹಳ್ಳಿಹಳ್ಳಿಗಳಲ್ಲಿ ತಮ್ಮ ವಾದ್ಯ ವಿಶೇಷದ ರುಚಿಯನ್ನು ಜನರಿಗೆ ತೋರಿಸಿದ್ದಾನೆ. ಅಷ್ಟೇ ಅಲ್ಲದೆ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿಯೂ ಎರಡು ಸಲ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಈಗ ವಯಸ್ಸಾಗಿದ್ದರೂ ಈ ಕಲೆಯನ್ನು ಬಿಟ್ಟಿಲ್ಲ. ಅವಕಾಶ ಸಿಕ್ಕರೆ, ಈಗಲೂ ವಾದ್ಯವನ್ನು ನುಡಿಸುತ್ತಾರೆ. ಇಲ್ಲದ

ಸಂದರ್ಭದಲ್ಲಿ ದನಗಳನ್ನು ಕಾಯುವುದು ಮುಂತಾದ ಸಣ್ಣ ಪುಟ್ಟ ಕೆಲಸಗಳನ್ನು ಮಾಡುತ್ತಾರೆ. ಇವರನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಮಗ ಮಂಜುನಾಥ ತಬಲ ಮತ್ತು ಹಾರ್ಮೋನಿಯಂ ಕಲಾವಿದರಾಗಿದ್ದಾರೆ.

**ಕೊಮಾರಯ್ಯ,**
**ಯಡಕೆರೆ, ಹೊತ್ತೂರು ಹೋಬಳಿ,**
**ಸಕಲೇಶಪುರ ತಾಲೂಕು, ಹಾಸನ ಜಿಲ್ಲೆ.**

## ಮಲ್ಲೇಶಯ್ಯ

ಹಾಸನ ಜಿಲ್ಲೆ ಬೇಲೂರು ತಾಲೂಕಿನ ಗಿರಿಮರಡಿ ಗ್ರಾಮದವರು ಶ್ರೀ ಮಲ್ಲೇಶಯ್ಯ. ವಯಸ್ಸು ೬೫ ವರ್ಷ. ತಂದೆ ತಿಮ್ಮಯ್ಯ. ಪರಿಶಿಷ್ಟ ಜನಾಂಗಕ್ಕೆ ಸೇರಿದವರು. ಈಗ ಮೂಳೆನಹಳ್ಳಿಯಲ್ಲಿ ವಾಸವಾಗಿದ್ದಾರೆ. ಇವರು ಮೂಲತಃ ತಂಬೂರಿ ಕಲಾವಿದರಾಗಿದ್ದು, ಇವರು ಹಾಡುವ ಹಾಡುಗಳಿಗೆ ಬೇಲೂರು ತಾಲ್ಲೂಕಿನಾದ್ಯಂತ 'ಗಿರಿ ಮರಡಿ ಪದಗಳು' ಎಂದೇ ಪ್ರಖ್ಯಾತಿಯನ್ನು ಪಡೆದಿವೆ. ಇವರ ವೃತ್ತಿ ವ್ಯವಸಾಯ, ಪ್ರವೃತ್ತಿ ತಂಬೂರಿ ಕಲಾವಿದ.

ಇವರಿಗೆ ತಂಬೂರಿ ಹಾಡುಗಳು ತಲಾತಲಾಂತರದಿಂದ ಬಂದಿರುವಂತಹವುಗಳು. ಇವರ ಅಜ್ಜ ಹೊನ್ನಯ್ಯ ಸೊಗಸಾದ ತಂಬೂರಿ ಕಲಾವಿದರು. ಇವರಿಂದ ಮಗ ತಿಮ್ಮಯ್ಯ ಕಲಿತರು. ಇವರಿಂದ ಮಲ್ಲೇಶಯ್ಯ. ಹೀಗೆ ವಂಶಪಾರಂಪರ್ಯವಾಗಿ ಈ ಕಲೆ ಬೆಳೆದುಕೊಂಡು ಬಂದಿದೆ. ಮಲ್ಲೇಶಯ್ಯ ಸೊಗಸಾದ ಹಾಡುಗಾರರು. ಇವರ ಹಾಡುಗಾರಿಕೆಗೆ ತಲೆದೂಗದವರೆ ಇಲ್ಲ. ರಾತ್ರಿ ಒಂಬತ್ತು ಗಂಟೆಗೆ ಹಾಡಲು ಕುಳಿತರೆ ಬೆಳಿಗ್ಗೆ ಆರು ಗಂಟೆಗೇನೆ ನಿಲ್ಲಿಸುವುದು. ಇವರಿಗೆ ಹಿಮ್ಮೇಳವಾಗಿ ಗುಮ್ಮಟ ಬಾರಿಸುತ್ತಾ ಹಾಡುವವರೆಂದರೆ ಇವರ ಹೆಂಡತಿಯೆ. ಮಲ್ಲೇಶಯ್ಯ ತಂಬೂರಿಯನ್ನು ಎದೆಗೆ ಆನಿಸಿ ಬಲಗೈಯಲ್ಲಿ ತಂಬೂರಿಯ ತಂತಿಯನ್ನು ಮೀಟುತ್ತಾ, ಎಡಗೈಯಲ್ಲಿ ತಾಳ ಹಾಕುತ್ತಾ ಹಾಡುತ್ತಾ ಕುಳಿತರೆ ಕೇಳುವವರು ತಲೆದೂಗುವಂತೆ ಮಾಡುತ್ತಾರೆ. ಇವರ ತಂತಿ ಮೀಟುವಿಕೆಗೆ ಅಂತಹ ಶಕ್ತಿ ಇದೆ.

ಇವರು ಮುಖ್ಯವಾಗಿ ಬಸವಕುಮಾರನ ಕಥೆ, ರುದ್ರಾವತಿ ಮಹಾರಾಜನ ಕಥೆ, ಅಣ್ಣ ತಂಗಿ ಕಥೆ, ಕಾಡುಸಿದ್ಧದೇವಿ ಕಥೆ, ಬಂಜೆ ಹೊನ್ನಮ್ಮನ ಕಥೆ, ರಾಮ-ಲಕ್ಷ್ಮಣರ ಕಥೆ, ಗಂಗೆ-ಗೌರಿ ಕಥೆಗಳನ್ನು ಹಾಡುತ್ತಾರೆ. ಅಣ್ಣ-ತಂಗಿಯರ ಕಥೆಯನ್ನು

ಹಾಡುವಾಗಲಂತು ಕಣ್ಣೀರು ಧಾರಾಕಾರವಾಗಿ ಅವರಲ್ಲಿ ಮತ್ತು ಕೇಳುಗರಲ್ಲಿ ಹರಿಯುತ್ತದೆ. ದುಃಖ ಮಡುಗಟ್ಟುತ್ತದೆ.

ಇವರಿಂದ ಈ ಕಲೆಯನ್ನು ಹಾಸನ ತಾಲೂಕಿನ ಗುಡ್ಡದಹಳ್ಳಿಯ ದೊಡ್ಡಯ್ಯ ಮತ್ತು ನಾರಾಯಣ, ಬೇಲೂರು ತಾಲ್ಲೂಕಿನ ವೀರದೇವನಹಳ್ಳಿಯ ನೀಲಯ್ಯ ಕಲಿತಿದ್ದಾರೆ. ಇವರನ್ನು ತಾಲ್ಲೂಕು ಮಟ್ಟದಲ್ಲಿ ಗೌರವಿಸಲಾಗಿದೆ. ಬೇಲೂರು ತಾಲ್ಲೂಕಿನಲ್ಲೆಲ್ಲಾ ಮಲ್ಲೇಶಯ್ಯನವರ ತಂಬೂರಿ ಹಾಡುಗಳು ಪ್ರಸಿದ್ಧವಾಗಿವೆ.

ಮಲ್ಲೇಶಯ್ಯ,
ಮೂಳೆನಹಳ್ಳಿ, ಮಾದಿಹಳ್ಳಿ ಹೋಬಳಿ,
ಬೇಲೂರು ತಾಲೂಕು, ಹಾಸನ ಜಿಲ್ಲೆ.

# ಐ. ಡಿ. ಧರ್ಮಪ್ಪ

ಸುಗ್ಗಿ ಕುಣಿತ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಹೆಚ್ಚು ಪ್ರಸಿದ್ಧಿಯನ್ನು ಪಡೆದಿರುವ ಕಲೆ. ಮಡಿಕೇರಿ, ಹಾಸನ ಜಿಲ್ಲೆಯ ಸಕಲೇಶಪುರ, ಬೇಲೂರು ತಾಲೂಕುಗಳು, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಶೃಂಗೇರಿ ತಾಲೂಕುಗಳು, ಶಿವಮೊಗ್ಗ ಜಿಲ್ಲೆಯ ಕೆಲವು ತಾಲೂಕುಗಳು ಹಾಗು ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇರುವಂತಹ ಕಲೆ ಇದು. ಈ ಕಲಾ ಪ್ರದರ್ಶನದಲ್ಲಿ ಹದಿನೈದರಿಂದ ಇಪ್ಪತ್ತು ಜನರಿರುತ್ತಾರೆ. ಪ್ರದೇಶಕ್ಕನುಗುಣವಾಗಿ ತಮ್ಮದೇ ಆದ ವಿಶೇಷ ವೇಷ ಭೂಷಣಗಳನ್ನು ಹಾಕಿರುತ್ತಾರೆ. ಇದು ಹೆಚ್ಚು ಬೇಸಿಗೆಯ ಸಂದರ್ಭದಲ್ಲಿ ಪ್ರದರ್ಶಿಸುವ ಕಲೆಯಾಗಿದ್ದು, ರಾತ್ರಿ ವೇಳೆ ಬೆಂಕಿ ಹಾಕಿಕೊಂಡು ಸುತ್ತಲು ಕುಣಿಯುತ್ತಾರೆ. ವೇದಿಕೆಗಳಲ್ಲಿಯೂ ಪ್ರದರ್ಶಿಸುತ್ತಾರೆ. ಈ ಕಲಾ ಪ್ರದರ್ಶನ ಸಂದರ್ಭದಲ್ಲಿ ವಾದ್ಯಗಳನ್ನು ಬಳಸುತ್ತಾರೆ.

ಹಾಸನ ಜಿಲ್ಲೆಯಲ್ಲಿ ಸುಗ್ಗಿಕುಣಿತ ಮಲೆನಾಡಿನ ಭಾಗಗಳಲ್ಲಿ ಇದ್ದು, ವಿಶೇಷವಾದ ಕಲೆಯೇ ಆಗಿದೆ. ಐ.ಡಿ. ಧರ್ಮಪ್ಪನವರು ಪ್ರಮುಖವಾಗಿ ಸುಗ್ಗಿ ಕುಣಿತ ಕಲಾವಿದರು. ಧರ್ಮಪ್ಪನವರು ಹಾಸನ ಜಿಲ್ಲೆ ಬೇಲೂರು ತಾಲೂಕಿನ ಇಂಟಿ ತೊಳಲು ಗ್ರಾಮದವರು. ವಯಸ್ಸು ೬೩ ವರ್ಷ. ತಂದೆ ಇ. ಎಸ್. ದೊಡ್ಡಪ್ಪ ಲಿಂಗಾಯತ ಜನಾಂಗಕ್ಕೆ ಸೇರಿದವರು. ವೃತ್ತಿ ವ್ಯವಸಾಯ. ಪ್ರವೃತ್ತಿಯಾಗಿ ಜನಪದ ಕಲೆಯನ್ನು ಬೆಳೆಸಿಕೊಂಡಿದ್ದಾರೆ. ಸುಗ್ಗಿಕುಣಿತದ ಜೊತೆಗೆ ತೊಂಡಲು ದೇವರು ಕುಣಿತ, ಮರಗಾಲು ಕುಣಿತ, ವೀರಭದ್ರೇಶ್ವರನ ಖಡ್ಗ ಕುಣಿತ, ಜನಪದ ನೃತ್ಯ, ಸುಗ್ಗಿ ಹಾಡುಗಳನ್ನು ಹೇಳುವುದು. ಭಜನೆ, ಕೋಲಾಟ ಮುಂತಾದ ಕಲೆಗಳಲ್ಲಿಯೂ ಪ್ರಾವೀಣ್ಯತೆಯನ್ನು ಪಡೆದಿದ್ದಾರೆ.

ಈ ಜನಪದ ಕಲೆಗಳು ವಂಶಪಾರಂಪರ್ಯವಾಗಿ ಬಂದಿರುವಂತಹವುಗಳು. ಇವರ ತಂದೆ, ಅಜ್ಜ ಎಲ್ಲರೂ ಈ ಕಲೆಗಳಲ್ಲಿ ಸಾಧನೆಯನ್ನು ಮಾಡಿದ್ದವರೆ. ಹಾಸನ ಜಿಲ್ಲಾದ್ಯಂತ

ಈ ಕಲೆಗಳನ್ನು ಪ್ರದರ್ಶಿಸಿದ್ದಾರೆ. ಬೆಂಗಳೂರು, ಮಂಗಳೂರು, ಮೈಸೂರು, ಚಿಕ್ಕಮಗಳೂರು ಮುಂತಾದ ಜಿಲ್ಲೆಗಳಲ್ಲಿ ಭಾಗವಹಿಸಿದ್ದಾರೆ. ವಿಭಾಗ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದ ೪೦ ರಿಂದ ೫೦ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರದರ್ಶಿಸಿದ್ದಾರೆ. ಹಲವಾರು ಪ್ರಶಸ್ತಿಗಳು ಬಂದಿವೆ. ೧೯೯೯ರಲ್ಲಿ ಹಾಸನ ಜಿಲ್ಲಾಡಳಿತ ಮತ್ತು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ವತಿಯಿಂದ ಹಾಸನದಲ್ಲಿ ಜಿಲ್ಲಾಮಟ್ಟದ ಸನ್ಮಾನವಾಗಿದೆ. ಕರ್ನಾಟಕ ಸರ್ಕಾರದ ವತಿಯಿಂದ ಈಗ ಮಾಸಾಶನ ಮಂಜೂರಾಗಿದೆ.

ಧರ್ಮಪ್ಪನವರನ್ನು ಹೋಬಳಿ ಮಟ್ಟದಲ್ಲಿ ತಾಲೂಕು ಮಟ್ಟದಲ್ಲಿ ಹಾಗು ಜಿಲ್ಲಾ ಮಟ್ಟದಲ್ಲಿ ಹಲವಾರು ಸಂದರ್ಭಗಳಲ್ಲಿ ಸನ್ಮಾನಿಸಿದ್ದಾರೆ. ಈಗ ಇವರು ಈ ಕಲೆಗಳು ಮುಂದಿನ ತಲೆಮಾರಿಗೆ ಉಳಿಯಬೇಕು ಎಂಬ ದೃಷ್ಟಿಯಿಂದ ವೇದಾಂತ, ಮಲ್ಲೇಶ, ತಮ್ಮಣ್ಣಗೌಡ, ವಜ್ರಪ್ಪ ಎಂಬುವರಿಗೆ ಈ ಕಲಾ ಪ್ರಕಾರಗಳನ್ನು ಕಲಿಸುತ್ತಿದ್ದಾರೆ.

ಐ.ಡಿ. ಧರ್ಮಪ್ಪ,
ಇಂಟಿ ತೊಳಲು, ಕೆಸಗೋಡು ಅಂಚೆ,
ಬೇಲೂರು ತಾಲೂಕು, ಹಾಸನ ಜಿಲ್ಲೆ.

# ಪುಟ್ಟತಾಯಮ್ಮ

ಹಾಸನ ಜಿಲ್ಲೆ ಬೇಲೂರು ತಾಲೂಕು ಹಳೇಬೀಡು ಹೋಬಳಿಯ ಸಾಣೇನಹಳ್ಳಿ ಗ್ರಾಮದ ಪುಟ್ಟತಾಯಮ್ಮ ಸೋಬಾನೆ ಹಾಡುಗಾರ್ತಿ. ಇವರಿಗೆ ಸುಮಾರು ೬೩ ವರ್ಷ. ಗಂಡ ಬೀರೇಗೌಡ. ಕುರುಬ ಜನಾಂಗಕ್ಕೆ ಸೇರಿದವರು. ಇವರು ಚಿಕ್ಕಂದಿನಿಂದಲೂ ಜನಪದ ಹಾಡುಗಳನ್ನು ತಮ್ಮ ಪೂರ್ವಜರಿಂದ ಕಲಿತು ಹಾಡಿಕೊಂಡು ಬಂದವರು. ಇವರು ಮುಮ್ಮೇಳ ಹಾಡುವಾಗ ಇವರಿಗೆ ಹಿಮ್ಮೇಳದವರಾಗಿ ಇವರದೇ ಊರಿನವರಾದ ಅಕ್ಕಮ್ಮ ಮತ್ತು ಶಿವಲಿಂಗಮ್ಮ ಹಾಡುತ್ತಾರೆ.

ಪುಟ್ಟತಾಯಮ್ಮನವರು ಮೂಲತಃ ಕೃಷಿಕರು. ಕೃಷಿಯ ಕೆಲಸ ಮಾಡುವ ಸಂದರ್ಭಗಳಲ್ಲಿಯೂ ಜನಪದ ಗೀತೆಗಳನ್ನು ಹಾಡುವುದುಂಟು. ರಾಗಿ ಬೀಸುತ್ತಿದ್ದಾಗ ಇಡೀ ರಾತ್ರಿಯೆಲ್ಲಾ ಬೀಸುವ ಹಾಡುಗಳನ್ನು ಹೇಳುತ್ತಿದ್ದರಂತೆ. ಈಗ ರಾಗಿ ಕಲ್ಲು ನಿಂತಿದ್ದರಿಂದ ಹಾಡುಗಳೂ ಕೂಡ ನಿಂತು ಹೋಗುತ್ತಿವೆ ಎಂದು ಬೇಸರದಿಂದಲೇ ನುಡಿಯುತ್ತಾರೆ. ಮದುವೆಯ ಸಂದರ್ಭದಲ್ಲಿ ಎಲ್ಲಾ ರೀತಿಯ ಹಾಡುಗಳನ್ನು ಹೇಳುತ್ತಾರೆ. ವಿಶೇಷವಾಗಿ ಬೀಗರ ಜರಿಯುವ ಹಾಡುಗಳು ಹೆಚ್ಚು ಆಕರ್ಷಕವಾಗಿರುತ್ತವೆ ಎಂದು ಅವರೇ ಹೇಳುತ್ತಾರೆ. ಊರಿನಲ್ಲಿ ಯಾರದೇ ಒಸಗೆ, ಗುಡಿಸಲು ಕೂಡುವ ಶಾಸ್ತ್ರ ಮುಂತಾದ ಕಾರ್ಯಕ್ರಮಗಳು ನಡೆದರೆ ಪುಟ್ಟತಾಯಮ್ಮನವರ ಉಪಸ್ಥಿತಿ ಇದ್ದೇ ಇರುತ್ತದೆ. ಇವರು ಸಾಮಾಜಿಕ ಸಭೆ, ಸಮಾರಂಭಗಳಲ್ಲಿಯೂ ಹಾಡಿರುವುದುಂಟು. ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಗಳಲ್ಲಿ ಜನಪದ ಹಾಡುಗಳನ್ನು ಹಾಡಿ ಪ್ರಶಂಸನೀಯತೆಗೆ ಒಳಗಾಗಿದ್ದಾರೆ. ಇವರ ಮಗ ಯೋಗೇಶ್ ತಾಯಿಯಂತೆಯೆ ಮಾತೃ ಸಂಸ್ಕೃತಿಯ ಬಗ್ಗೆ ವಿಶೇಷ ಕಾಳಜಿಯನ್ನು ಹೊಂದಿದ್ದು. ಪರಿಸರ ಪ್ರೇಮಿಯಾಗಿ ಕೆಲಸ ಮಾಡುತ್ತಿದ್ದಾರೆ. ಇಡೀ ಸುತ್ತ ಮುತ್ತಲ ಹಳ್ಳಿಗಳಿಗೆಲ್ಲಾ ತಾಯಿ ಮತ್ತು ಮಗ ಇಬ್ಬರೂ ತಮ್ಮ ಸೇವೆಯ ಮೂಲಕ ಚಿರಪರಿಚಿತರಾಗಿದ್ದಾರೆ.

ಪುಟ್ಟತಾಯಮ್ಮ, ಸಾಣೇನಹಳ್ಳಿ, ಅಡಗೂರು ಅಂಚೆ,
ಹಳೆಬೀಡು ಹೋಬಳಿ, ಬೇಲೂರು ತಾಲೂಕು, ಹಾಸನ ಜಿಲ್ಲೆ.

# ಸೋಬಾನೆ ಪಾಪಮ್ಮ

ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ಮಗ್ಗೆ ಹೋಬಳಿಯ ದೊಡ್ಡಹಳ್ಳಿ ಗ್ರಾಮದ ಪಾಪಮ್ಮ ಸೋಬಾನೆ ಹಾಡುಗಾರ್ತಿ. ಈಕೆಯ ಗಂಡ ಮುಳ್ಳಯ್ಯ, ಪಾಪಮ್ಮನಿಗೆ ೬೩ ವರ್ಷಗಳಾಗಿವೆ. ತನ್ನ ತಾಯಿಯ ಮೂಲಕ ಜನಪದ ಹಾಡುಗಳನ್ನು ಕಲಿತು ಮುಂದುವರಿಸಿಕೊಂಡು ಬಂದವರು. ಇವರ ಮನೆತನದಲ್ಲಿ ಹಾಡುಗಾರಿಕೆ ಅನುವಂಶೀಯತೆಯಾಗಿ ತಲೆ ತಲಾಂತರದಿಂದ ಬಂದಿದೆ. ಮದುವೆಯಾಗಿ ಬಂದ ನಂತರ ಗಂಡನ ಮನೆಯಲ್ಲಿಯೂ ಹಾಡುಗಾರಿಕೆಯನ್ನು ಮುಂದುವರಿಸಿದರು. ತನ್ನ ಗಂಡನಿಂದಲೂ ಪ್ರೋತ್ಸಾಹ ದೊರಕಿತು ಎಂದು ಪಾಪಮ್ಮ ಹೇಳುತ್ತಾರೆ.

ಪಾಪಮ್ಮ ಕೃಷಿ ಕೆಲಸದ ಸಂದರ್ಭದಲ್ಲಿ ಮದುವೆ ಒಸಗೆ, ಹೆಣ್ಣು ಮಕ್ಕಳು ಋತುಮತಿಯರಾದಾಗ ಗುಡ್ಲುಕೂಡುವ ಸಂದರ್ಭಗಳಲ್ಲಿ ಇವರ ಸೋಬಾನೆ ಹಾಡುಗಳು ಇದ್ದೇ ಇರುತ್ತವೆ. ಇವರ ಹಾಡುಗಾರಿಕೆ ದೊಡ್ಡಹಳ್ಳಿ ಗ್ರಾಮಕ್ಕೆ ಮಾತ್ರ ಸೀಮಿತವಾಗದೆ ಸುತ್ತ ಮುತ್ತಲ ಗ್ರಾಮಗಳಲ್ಲೆಲ್ಲಾ ಸೋಬಾನೆ ಹಾಡುಗಳನ್ನು ಹಾಡುವುದರ ಮೂಲಕ ಪ್ರಸಿದ್ಧರಾಗಿದ್ದಾರೆ.

ಇವರು ಮುಖ್ಯವಾಗಿ ರಾಮದೇವರ ಹಾಡುಗಳು, ಮಲ್ಲಯ್ಯನ ಹಾಡುಗಳು, ಕಳಸವನ್ನು ಪೂಜೆ ಮಾಡುವ ಹಾಡುಗಳು, ಆರತಿ ಹಾಡುಗಳನ್ನು ಹಾಡುತ್ತಾರೆ. ಇವರ ಕಂಠ ಕಂಚಿನಂತಿದ್ದು, ಇವರ ರಾಗಕ್ಕೆ ಇಡೀ ಹಳ್ಳಿಯ ಜನ ತಲೆತೂಗುತ್ತಾರೆ. ಇವರನ್ನು ಊರಿನ ಜನ ಜಾತ್ರೆ ಸಂದರ್ಭದಲ್ಲಿ ಸನ್ಮಾನಿಸಿದ್ದಾರೆ. ಇವರ ಹಾಡುಗಾರಿಕೆ ಸುಮಾರು ೩೫ ವರ್ಷಗಳಿಂದ ನಿರಂತರವಾಗಿ ಸಾಗುತ್ತಾ ಬಂದಿದೆ.

**ಸೋಬಾನೆ ಪಾಪಮ್ಮ,**
**ದೊಡ್ಡಹಳ್ಳಿ, ಅಗ್ರಹಾರ ಅಂಚೆ, ದೊಡ್ಡಮಗ್ಗೆ ಹೋಬಳಿ,**
**ಅರಕಲಗೂಡು ತಾಲೂಕು, ಹಾಸನ ಜಿಲ್ಲೆ.**

## ಗೋವಿಂದಪ್ಪ

ದೇವರ ಉತ್ಸವ, ಮೆರವಣಿಗೆ, ಸೋಮನ ಕುಣಿತಕ್ಕೆ ಹರೆ ವಾದ್ಯ ತುಂಬಾ ಅವಶ್ಯಕ. ಹರೆಯ ಬಡಿತಕ್ಕೆ ಅನುಗುಣವಾಗಿ ಅಡ್ಡದೇವರನ್ನು ಕುಣಿಸುತ್ತಾರೆ. ಸೋಮನನ್ನು ಹೊತ್ತವರು ಹೆಜ್ಜೆ ಹಾಕುತ್ತಾರೆ. ಅದಕ್ಕೆ ಅನುಗುಣವಾಗಿ ಹರೆ ಬಡಿಯುವವರೂ ಕೂಡ ಹೊಗಳಿಕೆಯ ಪದಗಳನ್ನು ಹಾಡುತ್ತಾ ನಿಂತು, ಮಧ್ಯೆ ಮಧ್ಯೆ ಕುಣಿಯುತ್ತಾರೆ. ಇಲ್ಲಿ ದೇವರ ಹೊತ್ತವರು, ಸೋಮನ ಹೊತ್ತವರು ಹಾಗೂ ಹರೆ ಬಾರಿಸುವವರ ಕಾಲುಗಳೆಲ್ಲಾ ನೃತ್ಯ ಮಾಡುತ್ತಿರುತ್ತವೆ.

ಅಂತಹ ವಿಶೇಷ ವಾದ್ಯದಲ್ಲಿ ಪಳಗಿದವರು ಗೋವಿಂದಪ್ಪ. ಇವರು ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಕಸಬಾ ಹೋಬಳಿಯ ತಳಲೂರು ಗ್ರಾಮದವರು. ಸುಮಾರು ೬೩ ವರ್ಷ, ಹರಿಜನ ಬಲಗೈ ಜನಾಂಗಕ್ಕೆ ಸೇರಿದವರು. ಗೋವಿಂದಪ್ಪ ಹರೆಯನ್ನು ಹೆಗಲಿಗೆ ನೇತು ಹಾಕಿಕೊಂಡು ಎಡಗೈಯಿಂದ ಹರೆಯ ಒಂದು ಭಾಗವನ್ನು ಉಜ್ಜುತ್ತಾ ಮತ್ತೊಂದು ಭಾಗವನ್ನು ಬಡಿಯುತ್ತಾ ತನ್ನ ಶರೀರವನ್ನು ಬಾಗಿಸುತ್ತಾ ಕುಣಿಯುತ್ತಿದ್ದರೆ ಅಲ್ಲಿದ್ದವರೆಲ್ಲರೂ ತಮ್ಮ ವಯಸ್ಸನ್ನು ಕೂಡ ಮರೆತು ಗೋವಿಂದಪ್ಪನವರ ಜೊತೆಯಲ್ಲಿ ಕುಣಿಯುತ್ತಾರೆ. ಈ ಇಳಿ ವಯಸ್ಸಿನಲ್ಲಿಯೂ ಇವರು ತಮ್ಮ ಕಲಾಭಿರುಚಿಯನ್ನು ಕಳೆದುಕೊಂಡಿಲ್ಲ. ವಯಸ್ಸು ಕಲೆಗೆ ಅಡ್ಡಿ ಬರುವುದಿಲ್ಲ ಎಂಬುದು ಇವರ ಅಭಿಪ್ರಾಯ. ಇಂದಿನ ಯುವಕರು ಸರಿಯಾಗಿ ತಿನ್ನುವುದೂ ಇಲ್ಲ. ಕುಣಿಯುವುದೂ ಇಲ್ಲ ಇವರಲ್ಲಿ ಯಾವ ಶಕ್ತಿ ಇದೆ ಎಂದು ನಮ್ಮನ್ನೇ ಪ್ರಶ್ನಿಸುತ್ತಾರೆ.

ಇವರು ದೇವರ ಉತ್ಸವ, ಹಬ್ಬ-ಹರಿದಿನಗಳಲ್ಲಿ ಹರೆ ಬಾರಿಸುವುದರ ಜೊತೆಗೆ ಕಲಾಮೇಳ, ಮೆರವಣಿಗೆ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಅನೇಕ ಸರ್ಕಾರಿ ಕಾರ್ಯಕ್ರಮಗಳ ಯೋಜನೆಯಡಿ ದೆಹಲಿ, ಮುಂಬೈ, ಮದ್ರಾಸು ಮುಂತಾದ

ಸ್ಥಳಗಳಲ್ಲೆಲ್ಲಾ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ, ರಾಷ್ಟ್ರಪತಿಗಳಾದ ಶ್ರೀ ಜ್ಞಾನಿ ಜೇಲ್‌ಸಿಂಗ್ ಅವರೊಂದಿಗೆ ತೆಗೆಸಿಕೊಂಡಿರುವ ಭಾವಚಿತ್ರಗಳು, ನೆನಪಿನ ಕಾಣಿಕೆಗಳು ಇವರ ಬಳಿ ಇವೆ. ಇವರೊಬ್ಬ ಅಪರೂಪದ ಹರೆ ವಾದ್ಯಗಾರ.

**ಗೋವಿಂದಪ್ಪ, ತಳಲೂರು,**
**ಕಸಬಾ ಹೋಬಳಿ,**
**ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.**

## ಪಿ. ಚನ್ನರಾಯಿ

ಹಾಸನ ಜಿಲ್ಲೆ, ಹೊಳೆನರಸೀಪುರ ತಾಲೂಕಿನ ಕಟ್ಟಿಬೆಳಗುಲಿ ದಾಖಲೆ ಶ್ರೀರಾಮನಗರದಲ್ಲಿ ಪುಟ್ಟಯ್ಯ ಮತ್ತು ಹನುಮಮ್ಮ ಇವರ ಸುಪುತ್ರರಾಗಿ ದಿನಾಂಕ ೨೨-೬-೧೯೪೫ರಂದು ಪಿ. ಚನ್ನರಾಯಿಯವರು ಜನಿಸಿದರು. ಇವರು ಹರಿಜನ ಜನಾಂಗಕ್ಕೆ ಸೇರಿದವರು. ಚಿಕ್ಕಂದಿನಿಂದಲೂ ತಂದೆ-ತಾಯಿಯವರಲ್ಲಿದ್ದ ಜಾನಪದ ಸೊಗಡು ಇವರನ್ನು ಆಕರ್ಷಿಸಿತು. ತಾನು ಓದುವ ಶಾಲೆಯಲ್ಲಿ ಜನಪದ ಹಾಡುಗಳನ್ನು ಹಾಡುತ್ತಾ ಗುರುಗಳು ಹಾಗು ತನ್ನ ಸಹಪಾಠಿಗಳನ್ನು ತನ್ನತ್ತ ಸೆಳೆಯುತ್ತಿದ್ದರು. ಎಸ್.ಎಸ್.ಎಲ್.ಸಿ., ಟಿ.ಸಿ.ಎಚ್. ಮಾಡಿದ ನಂತರ ಶಿಕ್ಷಕರಾಗಿ ವೃತ್ತಿಗೆ ಸೇರಿಕೊಂಡ ನಂತರವಂತು ಮಕ್ಕಳಿಗೆ ಶಿಕ್ಷಣದ ಜೊತೆಗೆ ಜನಪದ ಹಾಡುಗಳನ್ನು ಕಲಿಸುವುದೂ ಕೂಡ ಒಂದು ಪ್ರವೃತ್ತಿಯಾಗಿ ಸಾಗುತ್ತಾ ಬಂದಿತು.

ಪಿ. ಚನ್ನರಾಯಿಯವರು ತನ್ನ ಮಧುರವಾದ ಕೋಗಿಲೆ ಕಂಠದಿಂದ ತನ್ನ ಗ್ರಾಮದವರು ಮಾತ್ರವಲ್ಲದೆ ಸುತ್ತಮುತ್ತಲ ಹಳ್ಳಿಗಳೆಲ್ಲೆಲ್ಲಾ ಜನಪದ ಗೀತೆಗಳನ್ನು ಹಾಡುವುದರ ಮೂಲಕ ಜನಪದ ಸಾಹಿತ್ಯವನ್ನು ಪರಿಚಯಿಸುತ್ತಾ, ಪಸರಿಸುತ್ತಾ ಬಂದರು. ಹಳ್ಳಿಗಳಲ್ಲಿ ಯಾವುದೇ ಮದುವೆಯಾಗಲಿ, ಒಸಗೆಯಾಗಲಿ, ಹಬ್ಬ-ಹರಿದಿನಗಳಾಗಲಿ ಇದ್ದರೆ ಇವರು ಅಲ್ಲಿ ಹಾಜರಿ.

ಇವರು ಹಾಡುವುದರೊಂದಿಗೆ ರಂಗದ ಕುಣಿತ, ವೀರಗಾಸೆ, ಕರಗ ಮತ್ತು ಕರಪಾಲ ಮೇಳಗಳಲ್ಲಿಯೂ ಕೂಡ ಕಲಾವಿದರಾಗಿ ಭಾಗವಹಿಸಿದಾರೆ. ಎಲ್ಲೇ ಜಾನಪದಕ್ಕೆ ಸಂಬಂಧಿಸಿದ ಕಾರ್ಯಾಗಾರ,ಕಮ್ಮಟಗಳು ನಡೆದರೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ತಮ್ಮನ್ನು ಇನ್ನು ಹೆಚ್ಚಾಗಿ ಜಾನಪದದಲ್ಲಿ ತೊಡಗಿಸಿಕೊಳ್ಳಬೇಕೆಂಬ ತುಡಿತ ಇವರಲ್ಲಿರುವುದು ಎದ್ದು ಕಾಣುತ್ತದೆ.

ಶ್ರೀಯುತರು ದಸರಾ ಮಹೋತ್ಸವ, ಹೊಯ್ಸಳ ಮಹೋತ್ಸವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿರುವ ಹಲವಾರು ಕಾರ್ಯಕ್ರಮಗಳಲ್ಲಿ ಜಾನಪದ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಆಕಾಶವಾಣಿಯಲ್ಲಿ ಇವರು ಖಾಯಂ ಆಹ್ವಾನಿತ ಕಲಾವಿದರು. ಹಲವಾರು ಗಾಯನ ಸ್ಪರ್ಧೆಗಳಲ್ಲಿಯೂ ಭಾಗವಹಿಸಿ ವಿಜೇತರಾಗಿದ್ದಾರೆ. ರಾಷ್ಟ್ರೀಯ ಯೋಜನಾ ಶಿಬಿರಗಳು, ಎನ್.ಸಿ.ಸಿ. ಶಿಬಿರಗಳು ಎಲ್ಲಿ ನಡೆದರೂ ಸ್ವ-ಪ್ರೇರಣೆಯಿಂದ ಹೋಗಿ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದ್ದಾರೆ. ಇವರಿಗೆ ಜಿಲ್ಲಾ ಆಡಳಿತವು ಅತ್ಯುತ್ತಮ ಜನಪದ ಕಲಾವಿದ ಎಂದು ಗುರುತಿಸಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ಜೊತೆಗೆ ಹಲವಾರು ಸಂಘ-ಸಂಸ್ಥೆಗಳು ಕೂಡ ಸನ್ಮಾನ ನೀಡಿ ಗೌರವಿಸಿವೆ.

**ಪಿ. ಚನ್ನರಾಯಿ,**
**ಶ್ರೀ ರಾಮನಗರ, ಬಾಗಿವಾಳು ಅಂಚೆ,**
**ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.**

# ನಾರಾಯಣ

ಶ್ರೀ ನಾರಾಯಣ ಇವರು ಮೃದಂಗ ಮತ್ತು ಶಹನಾಯ್ ವಾದಕರು. ಇವರು ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಹಳೆಕೋಟೆ ಹೋಬಳಿಯ ಮಾವಿನಕೆರೆ ಗ್ರಾಮದವರು. ಇವರಿಗೆ ಈಗ ೬೦ ವರ್ಷ. ತಂದೆ ನಾಗಪ್ಪನವರ ಮೂಲಕ ಈ ಕಲೆಗಳನ್ನು ಕಲಿತ ಇವರು ಸುಮಾರು ೪೦ ವರ್ಷಗಳಿಂದಲೂ ಈ ಕಲೆಗಳನ್ನು ರೂಢಿಸಿಕೊಂಡು ಬಂದಿದ್ದಾರೆ. ಇದು ಇವರಿಗೆ ಅನುವಂಶೀಯವಾಗಿ ಬಂದಿರುವ ಕಲೆ.

ಇವರು ವೃತ್ತಿಯಲ್ಲಿ ಶೇವಿಂಗ್ ಸೆಲೂನ್ ನಡೆಸುತ್ತಿದ್ದು ಜನಪದ ಕಲೆಯನ್ನು ಪ್ರವೃತ್ತಿಯಾಗಿ ಸ್ವೀಕರಿಸಿದ್ದಾರೆ. ಮದುವೆ, ಮುಂಜಿ, ದೇವರ ಉತ್ಸವ, ಜಾತ್ರೆ, ಹಬ್ಬ ಹರಿದಿನಗಳಲ್ಲಿ ಇವರು ಮೃದಂಗ ಮತ್ತು ಶಹನಾಯ್‌ಗಳನ್ನು ನುಡಿಸುತ್ತಾರೆ. ಹಳ್ಳಿಯಲ್ಲಿ ವಾಸವಿದ್ದರೂ ಹಳೆಕೋಟೆ ಹೋಬಳಿಯ ಸುತ್ತಮುತ್ತ ಹಾಗು ಕೆಲವು ಸಂದರ್ಭಗಳಲ್ಲಿ ನಗರಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿರುವುದುಂಟು.

ಇವರು ಈ ಕಲೆಯನ್ನು ತಮ್ಮಷ್ಟಕ್ಕೆ ಸೀಮಿತಗೊಳಿಸಿಕೊಳ್ಳದೆ ತಮ್ಮ ಮಕ್ಕಳಿಗೂ ಕಲಿಸಿದ್ದಾರೆ. ಜೊತೆಗೆ ಸುತ್ತಮುತ್ತಲ ಯುವಕರಿಗೂ ಮಾರ್ಗದರ್ಶನ ಮಾಡುತ್ತಾ ಕಲಿಸುತ್ತಿದ್ದಾರೆ. ಇವರಿಗೆ ವೃತ್ತಿಗಿಂತ ಪ್ರವೃತ್ತಿಯಾದ ಈ ಕಲೆಯೇ ಹೆಚ್ಚು ಆಸಕ್ತಿದಾಯಕವಾಗಿದೆಯೆಂದು ಹೇಳುತ್ತಾರೆ.

ನಾರಾಯಣ,
ಮಾವಿನಕೆರೆ, ಹಳೆಕೋಟೆ ಹೋಬಳಿ,
ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.

# ವೆಂಕಟರಾಮಯ್ಯ

ಶ್ರೀ ವೆಂಕಟರಾಮಯ್ಯ ಮೂಲತಃ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹುಟ್ಟಿದವರಾದರೂ ಚಿಕ್ಕಂದಿನಿಂದಲೂ ಅರಸಿಕೇರೆ ನಗರದ ಜೇನುಕಲ್ಲು ಬಡಾವಣೆಯಲ್ಲಿ ವಾಸಿಸುತ್ತಿದ್ದಾರೆ. ತಂದೆ ಹೊಂಬಾಳಯ್ಯ. ವೆಂಕಟರಾಮಯ್ಯ ಚಿಟ್ಟಿಮೇಳ ಕಲಾವಿದರಾಗಿದ್ದು, ಇವರಿಗೆ ಈಗ ೬೦ ವರ್ಷ ವಯಸ್ಸಾಗಿದೆ. ಇವರ ವೃತ್ತಿ ಕೂಲಿ ಕೆಲಸವಾಗಿದ್ದು, ಪ್ರವೃತ್ತಿಯಾಗಿ ಚಿಟ್ಟಿಮೇಳವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಪನ್ನಸಮುದ್ರ ಕುಮಾರಯ್ಯನವರ ತಂಡದೊಂದಿಗೆ ಹಾಸನ ಜಿಲ್ಲೆಯಾದ್ಯಂತ ಕಾರ್ಯಕ್ರಮ ನೀಡಿದ್ದಾರೆ.

ಮೂಲತಃ ಅನುವಂಶೀಯವಾಗಿ ಈ ಕಲೆಯನ್ನು ಕಲಿತವರು. ಇವರ ತಂದೆಯೂ ಕೂಡ ಈ ಕಲೆಯಲ್ಲಿ ನಿಪುಣತೆಯನ್ನು ಪಡೆದವರಾಗಿದ್ದರು. ಇವರು ತಂಡದೊಂದಿಗೆ ಬೆಂಗಳೂರು, ಹಾಸನ, ಭದ್ರಾವತಿ ಆಕಾಶವಾಣಿ ನಿಲಯಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಜೊತೆಗೆ ಮಂಗಳೂರು, ಉಡುಪಿ, ಕಾರ್ಕಳ, ತುಂಬೆ ಮುಂತಾದ ಕಡೆಗಳಲ್ಲೆಲ್ಲಾ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ.

ಸಂಘ ಸಂಸ್ಥೆಗಳು ನಡೆಸಿದ ಕಲಾ ಮೆರವಣಿಗೆಗಳಲ್ಲಿ ದೇವರ ಉತ್ಸವ, ಜಾತ್ರೆ, ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಬೆಂಗಳೂರಿನಲ್ಲಿ ನಡೆದಿರುವ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದುಂಟು. ಮೈಸೂರಿನ ದಸರಾ ಕಾರ್ಯಕ್ರಮ, ದೆಹಲಿಯ ರಾಜ್ಯೋತ್ಸವ, ಮುಂಬೈನಲ್ಲಿ ನಡೆದ ಸುವರ್ಣ ಕರ್ನಾಟಕ ಉತ್ಸವಗಳಲ್ಲಿ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದಿದ್ದಾರೆ.

ಅರಸೀಕೆರೆಯಲ್ಲಿ ನಡೆಯುವ ಗಣೇಶ ಉತ್ಸವಕ್ಕೆ ಇವರ ತಂಡದ ಕಲಾ ಪ್ರದರ್ಶನ ಇದ್ದೇ ಇರುತ್ತದೆ. ಸುತ್ತ ಮುತ್ತಲ ಹಳ್ಳಿಗಳಲ್ಲಿ ನಡೆಯುವ ನಂದಿಧ್ವಜ ಉತ್ಸವಕ್ಕೆ ಇವರದೇ

ಚಿಟ್ಟಿ ಮೇಳ ಆಗಬೇಕು. ಇವರು ಯುವಕರಿಗೆ ತರಬೇತಿ ನೀಡುತ್ತಾ ಮುಂದಿನ ಪೀಳಿಗೆಗೆ ಈ ಕಲೆ ಉಳಿದು ಬೆಳೆದು ಬರಬೇಕೆಂದು ಹಂಬಲವನ್ನು ವ್ಯಕ್ತಪಡಿಸುತ್ತಾರೆ. ಆದರೆ ಕೂಲಿಯಿಂದಲೇ ಹೊಟ್ಟೆ ತುಂಬಿಸಿಕೊಳ್ಳಲು ಆಗುವುದಿಲ್ಲ ಎಂಬುದು ಇವರ ಅಳಲು. ಕಲೆಯಿಂದಲೂ ಹೊಟ್ಟೆ ತುಂಬಿತಿಲ್ಲ.

ವೆಂಕಟರಾಮಯ್ಯ,
ಜೇನುಕಲ್ಲು ಬಡಾವಣೆ, ಅರಸೀಕೆರೆ,
ಹಾಸನ ಜಿಲ್ಲೆ.

## ಕೃಷ್ಣೇಗೌಡ

ಹಾಸನ ಜಿಲ್ಲೆ ಹಾಗು ತಾಲೂಕಿನ, ದುದ್ದ ಹೋಬಳಿಯ ಬೊಮ್ಮೇನಹಳ್ಳಿ ಗ್ರಾಮದ ಕೃಷ್ಣೇಗೌಡ ಬಹುಮುಖ ಪ್ರತಿಭೆಯ ಕಲಾವಿದರು. ಮುಖ್ಯವಾಗಿ ಕೋಲಾಟದ ಕಲೆಯ ಮೂಲಕ ಗುರುತಿಸುವುದು ಸೂಕ್ತ. ಬಹಳಷ್ಟು ವರ್ಷಗಳಿಂದ ಹಂಪನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ. ಇವರ ತಂದೆ ಕರೀಗೌಡ ತಾಯಿ ದ್ಯಾಮವ್ವ. ಕರೀಗೌಡರು ಮತ್ತು ಇವರ ನಾಲ್ಕು ಜನ ಗಂಡು ಮಕ್ಕಳು ಹುಟ್ಟು ಕಲಾವಿದರು. ಅದರಲ್ಲೂ ಕೃಷ್ಣೇಗೌಡರು ಜನಪದ ಕಲೆಯಲ್ಲಿ ಪಳಗಿದ ಕೈ. ಈಗ ಸುಮಾರು ಅರವತ್ತು ವರ್ಷವಾಗಿರುವ ಇವರು ಇಂದಿಗೂ ಚುರುಕಾಗಿ ಕಲಾ ಪ್ರದರ್ಶನದಲ್ಲಿ ಪಾಲ್ಗೊಳ್ಳುತ್ತಾರೆ.

ಕೃಷ್ಣೇಗೌಡರು ಕೋಲಾಟವಾಡುವಾಗ ಹಾಡುಗಳನ್ನು ಹೇಳುತ್ತಾ ಕೆಲವೊಮ್ಮೆ ದಮ್ಮಡಿ ಬಾರಿಸಿದರೆ ಕೆಲವೊಮ್ಮೆ ಕೋಲುಗಳನ್ನು ಹಿಡಿದಿರುತ್ತಾರೆ. ಇವರ ರಾಗದ ಕಂಠ ಸಿರಿಗೆ ಮಾರು ಹೋಗದವರೇ ಇಲ್ಲ. ಕೋಲಾಟದ ಎಲ್ಲಾ ಬಗೆಗಳೂ ಇವರಿಗೆ ಗೊತ್ತು. ಹಾಡುಗಳನ್ನು ಎಲ್ಲಾ ಧಾಟಿಯಲ್ಲೂ ಹಾಡುವುದುಂಟು. ನೂರಾರು ಹಾಡುಗಳನ್ನು ಪುಂಖಾನುಪುಂಖವಾಗಿ ಹಾಡುತ್ತಾ ಹೋದರೆ ಕಾಲ ಹೋದದ್ದೇ ಗೊತ್ತಾಗುವುದಿಲ್ಲ. ರಾತ್ರಿ ಇಡೀ ಹಾಡುತ್ತಾ ಹೋಗುತ್ತಾರೆ. ಹಲವಾರು ಯುವಕರಿಗೆ ಕೋಲು ಪದಗಳನ್ನು ಕಲಿಸುವುದರ ಜೊತೆಗೆ ಕೋಲಾಟವನ್ನು ಕಲಿಸಿದ್ದಾರೆ. ಊರಿನಲ್ಲಿ ಯಾವುದೇ ಜಾತ್ರೆ, ಮದುವೆ, ಉತ್ಸವ, ಹೆಣ್ಣು ಮಕ್ಕಳು ಋತುಮತಿಯಾದಾಗ ಗುಡ್ಲುಕೂಡಿದಾಗ ಇವರ ಕೋಲಾಟ ಇದ್ದೇ ಇರುತ್ತದೆ.

ಕೃಷ್ಣೇಗೌಡರು ತತ್ವಪದಕಾರರು ಹೌದು. ಏಕತಾರಿಯನ್ನು ನುಡಿಸುತ್ತಾ ಸಾಲು ಸಾಲಾಗಿ ತತ್ವ ಪದಗಳನ್ನು ಹಾಡುವುದುಂಟು. ಆಗ ಇವರ ಸಹೋದರರೆಲ್ಲರೂ ಒಟ್ಟಿಗೆ ಸೇರಿ ಹಾಡುತ್ತಿದ್ದರು. ಯಾವುದೇ ಹಬ್ಬ ಹರಿದಿನವಾಗಲಿ ಭಂಗಿಸೊಪ್ಪನ್ನು ಸೇದುತ್ತಾ, ಭಜನೆ ಮಾಡುತ್ತಾ ಕುಳಿತರೆ ರಾತ್ರಿ ಹೋದದ್ದೇ ಗೊತ್ತಾಗುತ್ತಿರಲಿಲ್ಲ.

ಇವರು ಶನಿಮಹಾತ್ಮೆ ಕಥೆಯನ್ನು ಯಕ್ಷಗಾನ ಧಾಟಿಯಲ್ಲಿ ಹೇಳುತ್ತಾರೆ. ಇಂದಿಗೂ ಹಂಪನಹಳ್ಳಿ ಗ್ರಾಮದಲ್ಲಿ ಮತ್ತು ಸುತ್ತ ಮುತ್ತಲ ಗ್ರಾಮಗಳಲ್ಲಿ ಇವರಿಂದ ಶನಿಮಹಾತ್ಮೆಯನ್ನು ಹೇಳಿಸುತ್ತಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ವಳಗೆರೆಹಳ್ಳಿಯಲ್ಲಿ ನಡೆಸಿದ ಜನಪದ ಕಲಾ ರಾತ್ರಿ ಕಾರ್ಯಕ್ರಮದಲ್ಲಿ ಶನಿ ಮಾಹತ್ಮೆ ಕಥೆಯನ್ನು ನಡೆಸಿಕೊಟ್ಟಿದ್ದಾರೆ. ಇವರೊಬ್ಬ ಅಪರೂಪದ ಕಲಾವಿದರೆಂದರೆ ಅತಿಶಯೋಕ್ತಿಯಾಗಲಾರದು. ಜೊತೆಗೆ ಉತ್ತಮವಾದ ಜನಪದ ಅಡುಗೆಗಳನ್ನು ಮಾಡುತ್ತಾರೆ. ಊರಿನಲ್ಲಿ ಯಾವುದೇ ಕಾರ್ಯಗಳಾದರೂ ಇವರೇ ಅಡುಗೆ ಮಾಡುತ್ತಾರೆ. ಮದುವೆಯ ಸಂದರ್ಭದಲ್ಲಿ ಹೆಣ್ಣು ಗಂಡುಗಳನ್ನು ಗಾಡಿಯಲ್ಲಿ ಮೆರವಣಿಗೆ ಮಾಡಲು ಹಸಿ ತೆಂಗಿನ ಗರಿಗಳಿಂದ ಮಾಡುವ ಕಲೆಯಂತು ಅದ್ಭುತವಾಗಿರುತ್ತದೆ. ಅತ್ಯುತ್ತಮ ಪೌರಾಣಿಕ ನಾಟಕದ ಕಲಾವಿದರೂ ಹೌದು.

ಕೃಷ್ಣೇಗೌಡ,
ಹಂಪನಹಳ್ಳಿ, ಹೆರಗು ಅಂಚೆ, ದುದ್ದ ಹೋಬಳಿ,
ತಾ : ಜಿ : ಹಾಸನ.

# ಪುಟ್ಟಮ್ಮ

ಹಾಸನ ಜಿಲ್ಲೆ ಮತ್ತು ತಾಲೂಕಿನ ದುದ್ದ ಹೋಬಳಿಯ ತಿರುಪತಿಹಳ್ಳಿಯವರಾದ ಪುಟ್ಟಮ್ಮ ಊರಿನವರಿಗೆಲ್ಲ ಪುಟ್ಟಕ್ಕನೆಂದೇ ಪ್ರಸಿದ್ಧಿ. ಪುಟ್ಟಕ್ಕನ ಹಾಡುಗಾರಿಕೆಗೆ ಊರಿಗೆ ಊರೇ ತಲೆದೂಗಿದೆ. ಇವರಿಗೆ ಸುಮಾರು ೬೦ ವರ್ಷ, ಗಂಡ ಪುಟ್ಟೇಗೌಡ. ಪುಟ್ಟಮ್ಮ ಒಕ್ಕಲಿಗ ಜನಾಂಗಕ್ಕೆ ಸೇರಿದವರು. ಇವರು ಮುಮ್ಮೇಳ ಹಾಡುವಾಗ ಹಿಮ್ಮೇಳದಲ್ಲಿ ಹಾಡುವವರು ಲಿಂಗಾಯತ ಜಾತಿಗೆ ಸೇರಿದವರಾದ ಶಾರದಮ್ಮ ಮತ್ತು ನೀಲಮ್ಮ.

ಪುಟ್ಟಮ್ಮ ಕೃಷಿಕ ಕುಟುಂಬದವರು. ಜನಪದ ಹಾಡುಗಾರಿಕೆಯನ್ನು ಪ್ರವೃತ್ತಿಯಾಗಿ ಬೆಳೆಸಿಕೊಂಡವರು. ಅನುವಂಶೀಯವಾಗಿ ಹಾಡುಗಾರಿಕೆಯನ್ನು ಕಲಿತವರು. ಇವರು ಮುಖ್ಯವಾಗಿ ರಾಗಿ ಕಲ್ಲುಪದ, ಬೀಗರ ಹಾಡು, ಒಸಗೆಯ ಹಾಡು, ಜೋಗುಳದ ಹಾಡು, ಸ್ಥಳೀಯ ದೇವತೆಗಳ ಬಗ್ಗೆ ಹಾಡುಗಳನ್ನು ಹೇಳುತ್ತಾರೆ. ಹಿಂದೆ ರಾಗಿ ಬೀಸುತ್ತಿದ್ದ ಸಂದರ್ಭದಲ್ಲಿ ಹಾಡುಗಳೇ ನಮಗೆ ಸಂಗಾತಿಗಳಾಗಿರುತ್ತಿದ್ದವು ಎಂಬುದಾಗಿ ಇಂದಿಗೂ ಸ್ಮರಿಸುತ್ತಾರೆ. ಊರಿನಲ್ಲಿ ಯಾರದೇ ಮದುವೆಯಾದರೂ ಪುಟ್ಟಕ್ಕನ ತಂಡವನ್ನು ಸೋಬಾನೆ ಹೇಳಲು ಆಹ್ವಾನಿಸುತ್ತಾರೆ. ಮಕ್ಕಳ ನಾಮಕರಣದಲ್ಲಿ ಜೋಗುಳದ ಹಾಡುಗಳನ್ನು ಹೇಳುವುದುಂಟು. ಒಸಗೆ, ಋತುಮತಿಯರಾದಾಗ ಆ ಸಂದರ್ಭದ ಹಾಡುಗಳನ್ನು ಹೇಳುತ್ತಾರೆ. ಸ್ಥಳೀಯ ದೇವರುಗಳಾದ ರಂಗನಾಥಸ್ವಾಮಿ, ಬೂದೇಶ್ವರ ಸ್ವಾಮಿಯ ಮೇಲೆಯೂ ಸೋಬಾನೆ ಹೇಳುತ್ತಾರೆ. ಕೃಷಿ ಕೆಲಸದ ಕಳೆಕೀಳುವಾಗ, ನಾಟಿ ಮಾಡುವಾಗ, ಕಣ ಕೆಲಸ ಮಾಡುವಾಗ,-ರಾಶಿ ಪೂಜೆ ಮಾಡುವಾಗ ಮುಂತಾದ ಸಂದರ್ಭಗಳಲ್ಲಿಯೂ ಜನಪದ ಸೋಬಾನೆ ಹಾಡುಗಳನ್ನು ಹೇಳುತ್ತಾ ಕೆಲಸಗಾರರ ಶ್ರಮವನ್ನು ಹಗುರಗೊಳಿಸುತ್ತಾರೆ. ಇವರು ಹಾಡುವ ಹಲವಾರು ಗೀತೆಗಳನ್ನು ಇದೇ ಗ್ರಾಮದವರು ಉಪನ್ಯಾಸಕರು ಆದ ತಿರುಪತಿಹಳ್ಳಿ

ಶಿವಶಂಕರಪ್ಪನವರು ಸಂಗ್ರಹಿಸಿದ್ದು ಅವಿನ್ನೂ ಪ್ರಕಟಗೊಳ್ಳಬೇಕಾಗಿದೆ. ಅವು ಪ್ರಕಟಗೊಂಡರೆ ಪುಟ್ಟಕ್ಕ ಹಾಡುಗಳ ಮೂಲಕ ಶಾಶ್ವತವಾಗಿ ಉಳಿಯುವಂತಾಗುತ್ತದೆ.

**ಪುಟ್ಟಮ್ಮ,**
**ತಿರುಪತಿ ಹಳ್ಳಿ, ಕುದುರೆಗುಂಡಿ ಅಂಚೆ,**
**ದುದ್ದ ಹೋಬಳಿ, ತಾ : ಜಿ : ಹಾಸನ.**

## ಪುಟ್ಟಶೆಟ್ಟಿ

ಪುಟ್ಟಶೆಟ್ಟಿ ಹಾಸನ ತಾಲೂಕಿನ ದುದ್ದ ಹೋಬಳಿಯ ತಿರುಪತಿ ಹಳ್ಳಿ ಗ್ರಾಮದವರು. ಸುಮಾರು ೬೦ ವರ್ಷ ದಾಟಿದೆ. ತಂದೆ ಕೂಗಶೆಟ್ಟಿ. ಕುಂಬಾರ ಜಾತಿಗೆ ಸೇರಿದವರು. ಪುಟ್ಟಶೆಟ್ಟಿಯು ಮೂಲತಃ ಕೃಷಿಕರು. ಹಿಂದೆ ಇವರ ಕುಲ ಕಸುಬಾದ ಕುಂಬಾರಿಕೆಯನ್ನು ಮಾಡುತ್ತಿದ್ದುದುಂಟು. ಈಗ ಅದಿಲ್ಲ. ಪುಟ್ಟಶೆಟ್ಟರು ಚಿಕ್ಕಂದಿನಿಂದಲೂ ಕೋಲಾಟವನ್ನು ಕಲಿತು ಪ್ರದರ್ಶನ ಮಾಡಿಕೊಂಡು ಬಂದವರು. ತಮ್ಮದೇ ಆದ ತಂಡವನ್ನು ಕಟ್ಟಿಕೊಂಡು ಹುಡುಗರಿಗೆ ಕೋಲಾಟದ ತರಬೇತಿಯನ್ನು ನೀಡುತ್ತಾ ಮುನ್ನಡೆಸಿಕೊಂಡು ಬಂದವರು.

ಇವರು ಕೋಲಾಟದಲ್ಲಿರುವ ಹಲವಾರು ವೈವಿಧ್ಯತೆಗಳನ್ನು ಮೈಗೂಡಿಸಿಕೊಂಡಿದ್ದಾರೆ. ಹತ್ತಾರು ವಿಧಗಳು ಇವರಿಗೆ ಬರುವುದುಂಟು. ಕೋಲಾಟದ ಹಾಡುಗಳನ್ನು ಕೂಡ ಇವರೇ ಹಾಡುತ್ತಾರೆ. ಕೈಯಲ್ಲಿ ತಾಳ ಅಥವಾ ದಮ್ಮಡಿ ಹಿಡಿದು ನಿಂತರೆ ಸೊಂಟವನ್ನು ಬಾಗಿಸುತ್ತಾ, ಬಳಕುತ್ತಾ ಕೋಲಿನ ಶಬ್ದಕ್ಕೆ ತಕ್ಕ ಹಾಗೆ ಹೆಜ್ಜೆ ಹಾಕುತ್ತಾ ಸೊಗಸಾಗಿ ಹಾಡುತ್ತಾರೆ. ಇವರು ಹೇಳಿದ ನಂತರ ಉಳಿದ ಕಲಾವಿದರು ಹಾಡನ್ನು ಪುನರುಚ್ಚರಿಸುತ್ತಾ ಕೋಲುಗಳನ್ನು ಒಂದಕ್ಕೊಂದು ತಾಗಿಸುತ್ತಾ ನೃತ್ಯ ಮಾಡುತ್ತಾರೆ. ಕೋಲಾಟ ಆಡುವಾಗ ಯಾರಾದರೂ ತಪ್ಪು ಮಾಡಿದರೆ ಅವರಿಗೆ ಬೈಗುಳ ಕಾದಿರುತ್ತವೆ.

ಪುಟ್ಟಶೆಟ್ಟರು ಮುಖ್ಯವಾಗಿ ಸುತ್ತುಕೋಲು, ತಾಳಗುಟುಕು ಕೋಲು, ಜಡೆಕೋಲು, ನಿಲ್‌ಕೋಲ್, ಕುಕ್ಕರಗಾಲು ಕೋಲು ಮುಂತಾದವುಗಳನ್ನು ಹುಯ್ಯುತ್ತಾರೆ. ಹಾಡುಗಾರಿಕೆಯಲ್ಲಿ ಸಾಮಾಜಿಕ ಹಾಡುಗಳು. ಚಾರಿತ್ರಿಕ ಹಾಡುಗಳು ಹಾಗು ದೇವರ ಮೇಲಿನ ಹಾಡುಗಳನ್ನು ಹಾಡುತ್ತಾರೆ. ಇವರು ಮುಖ್ಯವಾಗಿ ಹಬ್ಬ-ಹರಿದಿನಗಳು, ದೇವರ

ಉತ್ಸವ, ಜಾತ್ರೆ, ಮದುವೆ, ಒಸಗೆ, ತಿಂಗಳ ಮಾವನ ಮದುವೆ ಮುಂತಾದ ಸಂದರ್ಭಗಳಲ್ಲೆಲ್ಲಾ ಕೋಲಾಟ ಮಾಡುತ್ತಾರೆ. ಇಡೀ ಸುತ್ತಮುತ್ತಲ ಹಳ್ಳಿಗೆಲ್ಲಾ ಪುಟ್ಟಶೆಟ್ಟರು ಕಲಾವಿದರಾಗಿ ಪ್ರಸಿದ್ಧಿ ಪಡೆದಿದ್ದಾರೆ.

ಪುಟ್ಟಶೆಟ್ಟಿ,
ತಿರುಪತಿ ಹಳ್ಳಿ, ಕುದುರೆಗುಂಡಿ ಅಂಚೆ,
ದುದ್ದ ಹೋಬಳಿ, ತಾ : ಜಿ : ಹಾಸನ.

# ರಂಗಮ್ಮ

ರಂಗಮ್ಮ ಸೋಬಾನೆ ಹಾಡುಗಾರ್ತಿ, ಇವರಿಗೆ ಸುಮಾರು ೬೦ ವರ್ಷಗಳಾಗಿವೆ. ಇವರ ತೌರು ಮನೆ ಹಾಸನ ತಾಲೂಕಿನ ಮಾದಾಪುರ. ಗಂಡನ ಊರು ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಬಸವನಾಯಕನಹಳ್ಳಿ. ಇವರ ಗಂಡ ಹನುಮೇಗೌಡರು. ಒಕ್ಕಲಿಗ ಜನಾಂಗಕ್ಕೆ ಸೇರಿದವರು. ರಂಗಮ್ಮ ಚಿಕ್ಕಂದಿನಿಂದಲೂ ಹಾಡುಗಾರಿಕೆಯನ್ನು ಕಲಿತವರು. ತಮ್ಮ ತಾಯಿಯಿಂದ ಜನಪದ ಹಾಡುಗಳು ಬಳುವಳಿಯಾಗಿ ಬಂದಿವೆ ಎಂದು ಹೇಳುತ್ತಾರೆ.

ಇವರು ಮೂಲತಃ ಕೃಷಿಕಾಯಕ ಮಾಡುವವರು. ಬಿಡುವಿನ ವೇಳೆಯಲ್ಲಿ, ಕೃಷಿ ಕೆಲಸದ ಸಂದರ್ಭಗಳಲ್ಲಿ ಸೋಬಾನೆ ಹಾಡುಗಳನ್ನು ಹೇಳುವುದುಂಟು. ಇವರು ಮುಖ್ಯವಾಗಿ ಗಂಗೆ ಗೌರಿ ಕಥೆ, ದೇವರ ಪದಗಳು ಹಾಗು ಸೋಬಾನೆ ಹಾಡುಗಳನ್ನು ಹೇಳುತ್ತಾರೆ. ದೇವರ ಪೂಜೆ ಪುನಸ್ಕಾರಗಳ ಸಂದರ್ಭಗಳಲ್ಲಿ ದೇವರ ಬಗೆಗಿನ ಹಾಡುಗಳನ್ನು ಹೇಳುತ್ತಾರೆ. ಮದುವೆ ಮುಂತಾದ ಸಂದರ್ಭಗಳಲ್ಲಿ ಸೋಬಾನೆ ಹಾಡುಗಳನ್ನು ಹೇಳುವುದುಂಟು. ಬೇರೆ ಬೇರೆ ಸಂದರ್ಭಗಳಲ್ಲಿ ಗಂಗೆ ಗೌರಿ ಮುಂತಾದ ಹಾಡುಗಳನ್ನು ಹೇಳುತ್ತಾರೆ.

ಹಿಂದೆ ರಾಗಿ ಬೀಸುವ ಸಂದರ್ಭವಿತ್ತು. ತುಂಬಿದ ಮನೆ, ರಾತ್ರಿಯೆಲ್ಲಾ ರಾಗಿ ಬೀಸಿದರೂ ಸಾಕಾಗುತ್ತಿರಲಿಲ್ಲ. ಆಗ ನಿದ್ರಾದೇವಿ ನನ್ನನ್ನು ಆವರಿಸಿಕೊಳ್ಳದಂತೆ ರಾಗಿ ಬೀಸುವ ಹಾಡುಗಳನ್ನು ಹಾಡುತ್ತಿದ್ದೆ ಎಂದು ನೆನಪಿಸಿಕೊಳ್ಳುತ್ತಾರೆ. ಇವರು ಹಾಡುಗಳನ್ನು ಹೇಳುತ್ತಾ ಕುಳಿತರೆ ಇಡೀ ರಾತ್ರಿಯೆಲ್ಲ ಹಾಡುತ್ತಾರೆ. ಈಗೀಗ ಟಿ. ವಿ.ಗಳು ಬಂದು ಹಾಡು ಹೇಳುವವರು ಕಡಿಮೆಯಾಗಿದ್ದಾರೆ. ಕೇಳುವವರೂ ಕೂಡ ಕಡಿಮೆ ಯಾಗಿದ್ದಾರೆಂದು ಹೇಳುತ್ತಾರೆ.

ರಂಗಮ್ಮ, ಬಸವನಾಯಕನಹಳ್ಳಿ, ಮಲ್ಲೇದೇವರಪುರ ಅಂಚೆ,
ಹಳೆಕೋಟೆ ಹೋಬಳಿ, ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.

## ಎಂ. ವಿ. ಗೋವಿಂದರಾಜು

ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಕಸಬಾ ಹೋಬಳಿಯ ಮುರುಂಡಿ ಗ್ರಾಮದವರು ಎಂ. ವಿ. ಗೋವಿಂದರಾಜು. ಸುಮಾರು ೬೦ ವರ್ಷ. ತಂದೆ ವೆಂಕಟವರದಯ್ಯ. ಚಿಕ್ಕಂದಿನಿಂದಲೂ ಜನಪದ ಕಲೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡಿರುವ ಇವರು ಬ್ರಾಹ್ಮಣ ಜನಾಂಗಕ್ಕೆ ಸೇರಿದವರು. ಜನಪದ ಕಲೆ ಕೇವಲ ಸಾಮಾನ್ಯರಲ್ಲಿ ಸಾಮಾನ್ಯರಾದ ಕೆಳವರ್ಗದವರಲ್ಲಿ ಇರುವಂತಹದ್ದು ಎಂಬ ಮಾತು ಬಹಳ ಹಳೆಯದು. ಜಾನಪದ ಎಂಬುದು ಎಲ್ಲರಲ್ಲೂ ಇರುವಂತಹದ್ದು. ಇದಕ್ಕೆ ವರ್ಗ, ವರ್ಣ, ಭೇದ ಇಲ್ಲ ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಬೆಳೆದ ಎಲ್ಲರಲ್ಲೂ ಜಾನಪದ ಸಂಸ್ಕೃತಿ ಎಂಬುದು ಹಾಸುಹೊಕ್ಕಾಗಿರುತ್ತದೆ.

ಗೋವಿಂದರಾಜು ಅವರು ಬಹುಮುಖ ಪ್ರತಿಭೆ ಇರುವ ಕಲಾವಿದ. ಜಾನಪದದ ಹಲವಾರು ಪ್ರಕಾರಗಳಲ್ಲಿ ನಿಷ್ಣಾತರು. ಜನಪದದ ಹಾಡುಗಾರರು. ವೀರಗಾಸೆ ಕಲಾವಿದರು. ಸೋಮನ ಕುಣಿತದಲ್ಲಿ ಭಾಗಿಯಾದವರು. ಚಿಟ್ಟಿ ಮೇಳದಲ್ಲಿ ತಮಟೆ ಬಾರಿಸಿದವರು. ಕೋಲಾಟದ ಹಾಡುಗಾರರು ಹಾಗು ಕೋಲಾಟವಾಡುವವರು. ನಂದಿಧ್ವಜ ಕುಣಿಸುತ್ತಾರೆ. ಹೀಗೆ ನಾನಾ ಪ್ರಕಾರಗಳಲ್ಲಿ ಕೈಯಾಡಿಸಿದವರು. "ಗಣಪತಿ ಕಲಾ ಸಂಘ" ಎಂಬ ಸಂಘವನ್ನು ಸ್ಥಾಪಿಸಿಕೊಂಡು ಅದರ ಅಧ್ಯಕ್ಷರಾಗಿದ್ದಾರೆ. ಈ ಸಂಘದಲ್ಲಿ ಯುವಕರನ್ನು ತಂಡಗಳಾಗಿ ಕಟ್ಟಿಕೊಂಡು ಅವರಿಗೆ ಜನಪದ ಕಲೆಗಳ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ವೈಯಕ್ತಿಕವಾಗಿ ಹಾಗು ತಂಡಗಳ ಮೂಲಕ ನೀಡಿದ್ದಾರೆ.

೧೯೭೧ರಲ್ಲಿ ಅರಸೀಕೆರೆ ತಾಲೂಕು ಜಾವಗಲ್‌ನಲ್ಲಿ ನಡೆದ ತಾಲ್ಲೂಕು ಮಟ್ಟದ ಜನಪದ ಕಲಾಮೇಳದಲ್ಲಿ ೧೯೭೬ ಮತ್ತು ೧೯೮೦ ರಲ್ಲಿ ಅರಸೀಕೆರೆಯಲ್ಲಿ ನಡೆದ ಜಿಲ್ಲಾ ಮಟ್ಟದ ಯುವಜನ ಮೇಳದಲ್ಲಿ, ೧೯೯೪ರಲ್ಲಿ ಅರಸೀಕೆರೆಯಲ್ಲಿ ನಡೆದ ಕನ್ನಡ

ರಾಜ್ಯೋತ್ಸವ ಸಮಾರಂಭದಲ್ಲಿ ೧೯೯೭ರಲ್ಲಿ ರಾಜ್ಯಮಟ್ಟದ ಮಹಿಳಾ ಕ್ರೀಡಾ ಕೂಟದಲ್ಲಿ ಕೋಲಾಟ, ೧೯೯೮ರಲ್ಲಿ ತಾಲ್ಲೂಕು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ, ೧೯೯೯ರಲ್ಲಿ ಮೈಸೂರಿನಲ್ಲಿ ನಡೆದ ಜನಪದ ನಾಟಕೋತ್ಸವ, ಇದೇ ವರ್ಷ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಹಾಸನದಲ್ಲಿ ನಡೆದ ಪುಸ್ತಕ ಮೇಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ. ೧೯೯೯ರಲ್ಲಿ ಹಾಸನದಲ್ಲಿ ನಡೆದ ಹೊಯ್ಸಳ ಮಹೋತ್ಸವದಲ್ಲಿ ಕೋಲಾಟ, ೨೦೦೩ರಲ್ಲಿ ಹಾಸನದಲ್ಲಿ ಜಾನಪದ ನೃತ್ಯ, ೨೦೦೪ರಲ್ಲಿ ಹಾಸನದ ವಸ್ತು ಪ್ರದರ್ಶನದಲ್ಲಿ ಸುಗ್ಗಿ ಕುಣಿತ, ಚಿಟ್ಟಿಮೇಳ, ೨೦೦೫ರಲ್ಲಿ ಹಂಪಿ ಉತ್ಸವ, ಇದೇ ವರ್ಷದಲ್ಲಿ ಬೆಂಗಳೂರಿನ ರಾಜಾಜಿನಗರದಲ್ಲಿ ನಂದಿ ಧ್ವಜ ಕುಣಿತ, ೨೦೦೬ರಲ್ಲಿ ಸುವರ್ಣ ಕರ್ನಾಟಕ ದಿಬ್ಬಣದಲ್ಲಿ ವೀರಗಾಸೆ. ಇದೇ ವರ್ಷ ಬೆಂಗಳೂರಿನಲ್ಲಿ ಚಿಟ್ಟಿಮೇಳ, ೨೦೦೭ರಲ್ಲಿ ಅರಸೀಕೆರೆಯಲ್ಲಿ ನಡೆದ ವಿರಾಟ ಹಿಂದೂ ಸಮಾವೇಶದಲ್ಲಿ ಜನಪದ ಗೀತ ಗಾಯನ ಇದೇ ವರ್ಷ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿದ 'ದರ್ಶನ ಗ್ರಾಮೀಣ ಸಂಸ್ಕೃತಿ' ಕಾರ್ಯಕ್ರಮ, ಗೊರೂರಿನಲ್ಲಿ ನಡೆದ 'ಗ್ರಾಮೀಣ ಸಂಸ್ಕೃತಿ ಯೋಜನೆಯಡಿ ಸಾಂಸ್ಕೃತಿಕ ಕಾರ್ಯಕ್ರಮ' ಹೀಗೆ ನೂರಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಜನಪದ ಕಲಾ ಪದರ್ಶನಗಳನ್ನು ನೀಡಿದ್ದಾರೆ. ಮೈಸೂರಿನಲ್ಲಿ ನಡೆದ ದಸರಾ ಮೆರವಣಿಗೆಯ ಕಾರ್ಯಕ್ರಮದಲ್ಲಿಯೂ ಭಾಗವಹಿಸಿ ಪ್ರಶಂಸನೀಯರಾಗಿದ್ದಾರೆ.

ಇವರಿಗೆ ೧೯೯೬ ರಲ್ಲಿ ತಾಲೂಕು ಸಮಿತಿಯಿಂದ ಅರಸೀಕೆರೆಯಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಹಲವಾರು ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ. ಹಲವಾರು ಶಾಲಾ ಕಾಲೇಜುಗಳಲ್ಲಿ ಕಾರ್ಯಕ್ರಮ ನೀಡಿದಾಗ ಸನ್ಮಾನಿಸಿವೆ. ಹಲವಾರು ಪ್ರಶಂಸನೀಯ ಪತ್ರಗಳು ಇವರ ಬಳಿ ಇವೆ. ಇವರು ಜನಪದ ಕಲಾವಿದರಷ್ಟೇ ಅಲ್ಲದೆ ನಾಟಕದಲ್ಲಿಯೂ ಪಾತ್ರಧಾರಿ. ಹರಿಕಥೆ, ಶನಿಕಥೆಗಳನ್ನು ನಡೆಸಿಕೊಡುತ್ತಾರೆ. ಇವರು ಕಲಾ ಸೇವೆಯಲ್ಲಿಯೇ ತಮ್ಮ ಬದುಕನ್ನು ಸವೆಸಿದ್ದಾರೆ. ಮೂಲತಃ ಕೃಷಿಕರಾದರೂ ಕಲಾ ಸೇವೆಯ ತಿರುಗಾಟದಲ್ಲಿ ಕೃಷಿ ಬಡವಾಗಿ, ಇವರೂ ಕೂಡ ಬಡತನದಲ್ಲಿ ಬದುಕುತ್ತಿದ್ದಾರೆ. ಇವರಿಗೆ ಒಂದು ಕಣ್ಣು ಇಲ್ಲ. ಆ ಕಣ್ಣಿಗೆ ಮೇಕೆ ಕಣ್ಣನ್ನು ಜೋಡಿಸಿಕೊಂಡಿದ್ದಾರೆ. ಮಾಸಾಶನಕ್ಕೆ ಅರ್ಜಿ ಹಾಕಿಕೊಂಡು ಅದರ ನಿರೀಕ್ಷೆಯಲ್ಲಿ ಜೀವನವನ್ನು ದೂಕುತ್ತಿದ್ದಾರೆ.

ಎಂ. ಬಿ. ಗೋವಿಂದರಾಜು,
ಮುರುಂಡಿ, ಕಸಬಾ ಹೋಬಳಿ,
ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.

# ಎಂ. ಎಲ್. ಸಿದ್ದಯ್ಯ

ಕರಡೆ ವಾದ್ಯ ಮತ್ತು ಚಿಟ್ಟಿಮೇಳ ಎರಡಕ್ಕೂ ತುಂಬಾ ಸಾಮೀಪ್ಯ ಇದೆ. ಕರಡೆ ವಾದ್ಯದ ಮುಂದುವರೆದ ಭಾಗವೇ ಚಿಟ್ಟಿ ಮೇಳ ಎಂದು ಹೇಳಬಹುದು. ಎರಡು ವಾದ್ಯ ಪ್ರಕಾರಗಳಲ್ಲಿಯೂ ಒಂದೇ ರೂಪದ ವಾದ್ಯ ಪರಿಕರಗಳು ಇರುತ್ತವೆ. ಕರಡೆ ವಾದ್ಯದಲ್ಲಿ ಮಾತ್ರ ಕರಡೆ ಒಂದು ಹೆಚ್ಚಾಗಿರುತ್ತದೆ. ಈ ಎರಡು ವಾದ್ಯಗಳು ಹಾಸನ ಜಿಲ್ಲೆಯಲ್ಲಿ ವಿಶೇಷವಾಗಿವೆ. ಇಂದೂ ಕೂಡ ತನ್ನ ಪ್ರಾಬಲ್ಯವನ್ನು ಕರ್ನಾಟಕ ರಾಜ್ಯದಲ್ಲಿಯೇ ಹೆಚ್ಚಾಗಿ ಉಳಿಸಿಕೊಂಡಿರುವ ಜಿಲ್ಲೆ ಎಂದರೆ ಅದು ಹಾಸನ.

ಸಿದ್ದಯ್ಯ ಕರಡೆ ಮತ್ತು ಚಿಟ್ಟಿ ಮೇಳಗಳ ಕಲಾವಿದ. ಇವರು ಹಾಸನ ಜಿಲ್ಲೆ ಅರಿಸೀಕೆರೆ ತಾಲೂಕಿನ ಕಸಬಾ ಹೋಬಳಿಯ ಮುರುಂಡಿ ಗ್ರಾಮದವರು. ಸುಮಾರು ೬೦ ವರ್ಷ. ತಂದೆ ಕರಡೆ ಲಕ್ಕಣ್ಣ, ಕುರುಬ ಜನಾಂಗಕ್ಕೆ ಸೇರಿದವರು. ಇವರು ತನ್ನ ತಂದೆ ಲಕ್ಕಣ್ಣನವರಿಂದ ಈ ಕಲೆಯನ್ನು ಕಲಿತಿದ್ದಾರೆ. ಲಕ್ಕಣ್ಣನವರಿಗೆ ಕರಡೆ ಲಕ್ಕಣ್ಣ ಎಂದೇ ಹೆಸರು. ಕಾರಣ ಲಕ್ಕಣ್ಣ ಈ ಕಲೆಯಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿದ್ದರು. ಅರಿಸೀಕೆರೆ ತಾಲ್ಲೂಕಿನಲ್ಲಿರುವ ಕರಡೆ ವಾದ್ಯಗಾರರಿಗೆ ಬಹುಪಾಲು ಲಕ್ಕಣ್ಣನವರೆ ಗುರು ಎಂದು ಸ್ಥಳೀಯರು ಹೇಳುತ್ತಾರೆ. ಇಂತಹವರ ಮಗನಾದ ಸಿದ್ದಯ್ಯ ತನ್ನ ತಂದೆಯ ಕೀರ್ತಿ ಪತಾಕಿಯನ್ನು ಹಾರಿಸಿ ಅವರು ಹೆಸರು ಜೋಜ್ವಲ್ಯ ಮಾನ್ಯವಾಗಿ ಉಳಿಯುವಂತೆ ಈ ಕಲೆಯನ್ನು ಉಳಿಸಿ, ಬೆಳೆಸಿಕೊಂಡು ಬಂದಿದ್ದಾರೆ.

ಸಿದ್ದಯ್ಯನವರು ಹಾಸನ ಜಿಲ್ಲಾದ್ಯಂತ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಮದುವೆ, ದೇವರ ಉತ್ಸವ, ಜಾತ್ರೆ, ಜನಪದ ಕಲಾಮೇಳ, ರಾಜಕಾರಣಿಗಳ ಮೆರವಣಿಗೆ ಮುಂತಾದ ಅನೇಕ ಸಂದರ್ಭಗಳಲ್ಲಿ ತನ್ನ ಕಲಾ ಪ್ರತಿಭೆಯನ್ನು ತೋರಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಲವಾರು

ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಮೈಸೂರು ದಸರಾ, ಹಂಪಿ ಉತ್ಸವ, ಬೆಂಗಳೂರು, ಮಂಗಳೂರು ಮುಂತಾದ ಕಡೆಗಳಲ್ಲಿಯೂ ಪ್ರದರ್ಶನ ನೀಡಿದ್ದಾರೆ. ಕನ್ನಡ ರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಸುವರ್ಣ ಕರ್ನಾಟಕ ದಿಬ್ಬಣಗಳಲ್ಲಿಯೂ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದಿದ್ದಾರೆ. ಇವರೊಬ್ಬ ಅಪರೂಪದ ಕಲಾವಿದ ಎಂದರೆ ಅತಿಶಯೋಕ್ತಿಯಾಗಲಾರದು. ಇವರು ದೆಹಲಿಯವರೆಗೂ ಹೋಗಿ ತಮ್ಮ ಕಲಾಪ್ರದರ್ಶನವನ್ನು ನೀಡಿದ್ದಾರೆ.

**ಎಂ. ಎಲ್. ಸಿದ್ದಯ್ಯ**<br>
**ಮುರುಂಡಿ, ಕಸಬಾ ಹೋಬಳಿ,**<br>
**ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.**

## ಚಿದಾನಂದ ಸ್ವಾಮಿ

ಹಾಸನ ಜಿಲ್ಲೆಯಲ್ಲಿ ಚಿಟ್ಟಿಮೇಳ ತುಂಬಾ ಪ್ರಸಿದ್ಧಿಯನ್ನು ಪಡೆದಿದೆ. ಅದರಲ್ಲಿಯೂ ಹಾರನಹಳ್ಳಿಯ ಚಿಟ್ಟಿಮೇಳ ಬಹಳ ಪ್ರಸಿದ್ಧಿ. ಕಾರಣ ಅಲ್ಲಿದ್ದ ಚೆಲುವಯ್ಯ. ಈ ಚಲುವಯ್ಯನ ಶಿಷ್ಯನಾಗಿ ಬೆಳೆದು ಬಂದವರೇ ಚಿದಾನಂದ ಸ್ವಾಮಿ.

ಚಿದಾನಂದ ಸ್ವಾಮಿ ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಹಾರನಹಳ್ಳಿಯವರು ಸುಮಾರು ೬೦ ವರ್ಷ. ತಂದೆ ರಂಗಪ್ಪ. ಹರಿಜನ ಬಲಗೈ ಜನಾಂಗಕ್ಕೆ ಸೇರಿದವರು. ಇವರು ಚಿಟ್ಟಿಮೇಳ ಕಲಾವಿದರಾಗಿ ತುಂಬಾ ಹೆಸರು ಮಾಡಿರುವ ವ್ಯಕ್ತಿ. ಮದುವೆ ಮುಂತಾದ ಮಂಗಳಕಾರ್ಯದಲ್ಲಿ ಇವರು ಬೇಕೆಂದರೆ ಮುಂಚಿತವಾಗಿಯೇ ಕಾಯ್ದಿರಸಬೇಕು. ಅಷ್ಟು ಬೇಡಿಕೆ ಇವರಿಗೆ ಇದೆ. ದೇವರ ಉತ್ಸವ, ಜಾತ್ರೆ, ಪೂಜೆ ಪುನಸ್ಕಾರಗಳ ಸಂದರ್ಭದಲ್ಲೆಲ್ಲಾ ಇವರು ಭಾಗವಹಿಸುತ್ತಾರೆ.

ಕನ್ನಡ ರಾಜ್ಯೋತ್ಸವ, ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಕಲಾಮೇಳ, ರಾಜಕಾರಣಿಗಳ ಕಾರ್ಯಕ್ರಮಗಳು ಗಣೇಶನ ಮೆರವಣಿಗೆ, ನಂದಿಧ್ವಜ ಕುಣಿಸುವಾಗ, ಶಾಲಾ ಕಾಲೇಜು ಹಲವಾರು ಕಾರ್ಯಕ್ರಮಗಳಲ್ಲಿ ಚಿಟ್ಟಿಮೇಳವನ್ನು ಅತ್ಯಂತ ಯಶಸ್ವಿಯಾಗಿ ಪ್ರದರ್ಶನ ನೀಡಿ ಪ್ರಶಂಸನೀಯತೆಗೆ ಒಳಗಾಗಿದ್ದಾರೆ. ಹಾಸನ ಜಿಲ್ಲಾದ್ಯಂತ ಪ್ರದರ್ಶನ ನೀಡಿರುವುದರೊಂದಿಗೆ ಮೈಸೂರು ದಸರಾ, ಸುವರ್ಣ ಕರ್ನಾಟಕ ದಿಬ್ಬಣ, ಹಂಪಿ ಉತ್ಸವ, ಕರಾವಳಿ ಉತ್ಸವ ಮುಂತಾದ ಕಡೆಗಳಲ್ಲೆಲ್ಲಾ ಚಿಟ್ಟಿಮೇಳ ಪ್ರದರ್ಶನ ನೀಡಿದ್ದಾರೆ.

ಇತ್ತೀಚೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವತಿಯಿಂದ ಸಂಭಾವನೆ ಪಡೆದು "ಜನಪದ ಕಲಿಕಾ ಕೇಂದ್ರ"ವನ್ನು ಸ್ಥಾಪಿಸಿ ಯುವಕರಿಗೆ ಚಿಟ್ಟಿಮೇಳವನ್ನು

ಕಲಿಸಿಕೊಡುತ್ತಿದ್ದಾರೆ. ಇದು ಆಶಾದಾಯಕ ಬೆಳವಣಿಗೆಯಾಗಿದ್ದು ಮುಂದಿನ ಪೀಳಿಗೆಗೆ ಈ ಕಲೆ ಉಳಿದು ಬೆಳೆದು ಬರಲು ಸಹಾಯಕವಾಗಿದೆ. ನಮ್ಮ ಪರಂಪರಾಗತ ಸಂಸ್ಕೃತಿ ಮುಂದಿನವರಿಗೆ ತಿಳಿಯುವಂತಾಗಲು ಇಂತಹ ಕಲಿಕೆ ಅವಶ್ಯಕವೂ ಹೌದು. ಈ ನಿಟ್ಟಿನಲ್ಲಿ ಚಿದಾನಂದ ಸ್ವಾಮಿ ಅವರ ಪ್ರಯತ್ನ ಶ್ಲಾಘನೀಯ.

**ಚಿದಾನಂದಸ್ವಾಮಿ, ಹಾರನಹಳ್ಳಿ,**
**ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.**

## ಸಿದ್ದಾಚಾರಿ

ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಕಸಬಾ ಹೋಬಳಿಯ ಕಾಳನಕೊಪ್ಪಲಿನವರು ಸಿದ್ದಾಚಾರಿ. ಸುಮಾರು ೬೦ ವರ್ಷ. ಇವರು ಆಚಾರಿ ಜನಾಂಗಕ್ಕೆ ಸೇರಿದವರು. ಮೂಲತಃ ತಮ್ಮ ಕುಲ ಕಸುಬು ಕಮ್ಮಾರಿಕೆಯನ್ನು ಮಾಡಿಕೊಂಡಿದ್ದರೂ, ಅಲ್ಪಸ್ವಲ್ಪ ಜಮೀನನ್ನು ಹೊಂದಿರುವ ಕೃಷಿಕರೂ ಹೌದು. ಆದರೆ ಪ್ರವೃತ್ತಿಯಾಗಿ ಕರಡೆ ವಾದ್ಯ, ಚಿಟ್ಟಿ ಮೇಳವನ್ನು ಕಲಿತು ಪ್ರದರ್ಶನ ನೀಡುತ್ತಾ ಬಂದವರು.

ಮೇಲು ನೋಟಕ್ಕೆ ನೋಡುವುದಾದರೆ ಆಚಾರರಿಗೂ ಈ ಚರ್ಮವಾದ್ಯಕ್ಕೂ ಎಲ್ಲಿಯ ನಂಟು ಎಂದು ಕೇಳುವುದುಂಟು. ಆದರೆ ಕಲೆಗೆ ಜಾತಿ, ಧರ್ಮ ಎಂಬುದು ಇಲ್ಲ. ಎಲ್ಲವನ್ನೂ ಮೀರಿ ಬೆಳೆದು ಬಂದಿರುವಂತಹದ್ದು ಜನಪದ ಕಲೆ. ಇಂದು ಮೇಲ್ವರ್ಗದವರೂ ಕೂಡ ಕೆಳವರ್ಗದವರಲ್ಲಿದ್ದ ಅನೇಕ ಕಲೆಗಳನ್ನು ಕಲಿತು ಉತ್ತಮ ಪ್ರದರ್ಶನ ನೀಡುತ್ತಿರುವುದನ್ನು ಕಾಣುತ್ತೇವೆ. ಅಂತೆಯೇ ಸಿದ್ದಾಚಾರಿಯವರು ಕರಡೆ ವಾದ್ಯವನ್ನು ಅದ್ಭುತವಾಗಿ ಬಾರಿಸುತ್ತಾರೆ. ಇವರು ಕರಡೆಯನ್ನು ಬಾರಿಸುತ್ತಾ ನೃತ್ಯ ಮಾಡುತ್ತಿದ್ದರೆ ನೋಡಲು ಎರಡು ಕಣ್ಣು ಸಾಲುವುದಿಲ್ಲವೆಂದು ಸ್ಥಳೀಯರು ಹೇಳುತ್ತಾರೆ.

ಸಿದ್ದಾಚಾರಿಯವರು ಹಾಸನ ಜಿಲ್ಲಾದ್ಯಂತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಹೊರ ಜಿಲ್ಲೆಗಳಲ್ಲಿಯು ಪ್ರದರ್ಶನ ನೀಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಮೂಲಕ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಕನ್ನಡ ರಾಜ್ಯೋತ್ಸವ ಹಾಗು ಸ್ವಾತಂತ್ರ್ಯ ದಿನಾಚರಣೆ ಸಂದರ್ಭಗಳಲ್ಲಿ ಕರಡೆ ವಾದನವನ್ನು ಪ್ರದರ್ಶಿಸಿದ್ದಾರೆ. ದೆಹಲಿ, ಬಾಂಬೆ ಮುಂತಾದೆಡೆಗಳಲ್ಲೆಲ್ಲಾ ಪ್ರದರ್ಶನ ನೀಡಿರುವುದುಂಟು.

**ಸಿದ್ದಾಚಾರಿ ಕಾಳನ ಕೊಪ್ಪಲು, ಕಸಬಾ ಹೋಬಳಿ,**
**ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.**

# ಸಿದ್ದಯ್ಯ

ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಕಸಬಾ ಹೋಬಳಿಯ ಮುರುಂಡಿ ಗ್ರಾಮದವರು ಸಿದ್ದಯ್ಯ. ಸುಮಾರು ೬೦ ವರ್ಷ. ತಂದೆ ಮಾರಿಗಯ್ಯ. ಹರಿಜನ ಬಲಗೈ ಜನಾಂಗಕ್ಕೆ ಸೇರಿದವರು. ಮೂಲತಃ ಕೃಷಿಕಾರ್ಮಿಕರಾದ ಇವರು ಕೂಲಿ ಮಾಡಿಕೊಂಡು ಬದುಕುವುದರ ಜೊತೆಗೆ ಹವ್ಯಾಸವಾಗಿ ಸೋಮನನ್ನು ಕುಣಿಸುವಾಗ ಹಾಡುಗಳನ್ನು ಹೇಳುತ್ತಾರೆ.

ಸೋಮವನ್ನು ಕುಣಿಸುವಾಗ ಹೇಳುವ ಹಾಡುಗಳಿಗೆ ಹೊಗಳಿಕೆ ಪದಗಳೆಂದು ಕರೆಯುತ್ತಾರೆ. ಇವರು ದೇವರನ್ನು ಹೊಗಳುವುದಕ್ಕಷ್ಟೇ ತಮ್ಮ ಹಾಡುಗಳನ್ನು ಬಳಸಿಕೊಳ್ಳದೆ ದೇವರನ್ನು ತೆಗಳುವ ಹಾಡುಗಳನ್ನು ಹೇಳುತ್ತಾರೆ. ಸೋಮನನ್ನು ಕುಣಿಸುವಾಗ ಇವರು ಹೇಳುವ ಹಾಡುಗಳ ಮಧ್ಯ ಮಧ್ಯೆ ಮಾತಿನ ರೂಪದಲ್ಲಿ ಹೊಗಳುತ್ತಿರುತ್ತಾರೆ. ಇವರು ಹೊಗಳುವಾಗ ಸೋಮನ ಕುಣಿಸುವವರು ನಿಂತಿರುತ್ತಾರೆ. ಹರೆಯನ್ನು ಬಡಿಯುತ್ತಾ ಹಾಡುಗಳನ್ನು ಹೇಳುವಾಗ ಹರೆಯ ಬಡಿತಕ್ಕೆ ಅನುಗುಣವಾಗಿ ಸೋಮನನ್ನು ಹೊತ್ತವರು ಕುಣಿಯುತ್ತಾರೆ. ಹೊಗಳಿಕೆಯ ಹಾಡುಗಳನ್ನು ಹೇಳುವ ಸಿದ್ದಯ್ಯ ಒಬ್ಬ ಅಪರೂಪದ ಕಲಾವಿದ. ಇವರ ಕಲಾಪ್ರತಿಭೆ ಹಾಸನ ಜಿಲ್ಲೆಯಾದ್ಯಂತ. ಸೋಮನ ಕುಣಿಸುವ ಸಂದರ್ಭದಲ್ಲಿ ಅಭಿವ್ಯಕ್ತವಾಗಿದ್ದು, ಜನರಿಂದ ಪ್ರಶಂಸೆಗೆ ಒಳಗಾಗಿದ್ದಾರೆ.

ಸಿದ್ದಯ್ಯ,<br>
ಮುರುಂಡಿ, ಕಸಬಾ ಹೋಬಳಿ,<br>
ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.

# ಬಿ. ಸಿ. ರಾಜೇಗೌಡ

ಬಿ. ಸಿ. ರಾಜೇಗೌಡರು ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕು ಹಳೇಕೋಟೆ ಹೋಬಳಿಯ ಬಸವನಾಯಕನಹಳ್ಳಿಯವರು. ವಯಸ್ಸು ಸುಮಾರು ೬೦ ವರ್ಷ. ತಂದೆ ಚನ್ನೇಗೌಡರು. ಒಕ್ಕಲಿಗ ಜನಾಂಗಕ್ಕೆ ಸೇರಿದವರು. ಇವರು ಜನಪದ ಹಾಡುಗಳು, ಭಜನೆ, ಶನಿದೇವರ ಹಾಡುಗಳು, ನಾಟಕದ ಹಾಡುಗಳು ಮುಂತಾಗಿ ನಾನಾ ರೀತಿಯ ಹಾಡುಗಾರಿಕೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದವರಾಗಿದ್ದಾರೆ. ಪ್ರತಿನಿತ್ಯ ಸಂಜೆ ಒಂದು ಗಂಟೆಕಾಲ ಒಂದೆಡೆ ಎಲ್ಲಾ ಯುವಕರನ್ನು ಕಲೆಹಾಕಿಕೊಂಡು ಜನಪದ ಹಾಡುಗಳು, ತತ್ವಪದಗಳನ್ನು ಹಾಡುವ ರೂಢಿಯನ್ನು ಬಹಳ ಕಾಲದಿಂದಲೂ ಉಳಿಸಿಕೊಂಡು ಬಂದಿದ್ದಾರೆ. ಇವರಿಗೆ ಈ ಕಲೆಗಳು ಇವರ ತಂದೆ ತಾತರಿಂದ ಅನುವಂಶೀಯವಾಗಿ ಬಂದಿರುವಂತಹವುಗಳು. ಮೂಲತಃ ಕೃಷಿಕರಾಗಿರುವ ಇವರು ವ್ಯವಸಾಯದ ಕಾಲದಲ್ಲಿ ಪ್ರತಿದಿನ ಸಾಧ್ಯವಾಗುವುದಿಲ್ಲ. ಆಗ ವಾರಕ್ಕೊಮ್ಮೆ ಎಲ್ಲರೂ ಒಂದೆಡೆ ಸೇರಿ ಹಾಡುತ್ತಾರೆ.

ಶನಿದೇವರ ಕಥೆಯನ್ನು ಯಕ್ಷಗಾನ ಧಾಟಿಯಲ್ಲಿ ಹೇಳುತ್ತಾರೆ. ಪ್ರತಿ ವರ್ಷ ಶ್ರಾವಣ ಬಂತೆಂದರೆ ಶನಿವಾರ ಒಂದಲ್ಲಾ ಒಂದು ಮನೆಯಲ್ಲಿ ಶನಿಕಥೆಯನ್ನು ಹೇಳುತ್ತಾರೆ. ಇತರೆ ಸಂದರ್ಭಗಳಲ್ಲಿಯೂ ಆಗಾಗ ಶನಿಕಥೆ ಮಾಡಿಸುವವರಿದ್ದರೆ ಹೋಗಿ ಕಥೆ ಹೇಳಿಬರುತ್ತಾರೆ. ಜೊತೆಗೆ ಅಕ್ಕಪಕ್ಕದ ಹಳ್ಳಿಯವರು ಕರೆದಾಗಲೂ ಹೋಗುವುದುಂಟು.

ನಾಟಕಗಳಲ್ಲಿ ಪಾತ್ರಧಾರಿಯಾಗಿ ಅತ್ಯುತ್ತಮವಾಗಿ ಅಭಿನಯಿಸುವುದರೊಂದಿಗೆ ಬಹಳ ಮಾಧುರ್ಯವಾಗಿ ಹಾಡುತ್ತಾರೆ. ಹಿಂದೆ ಒಂದೆರಡು ಸಲ ಬಯಲಾಟದಲ್ಲಿಯೂ ನಟಿಸಿರುವುದಾಗಿ ನೆನಪು ಮಾಡಿಕೊಳ್ಳುತ್ತಾರೆ. ಹೀಗೆ ಇವರದು ಬಹುಮುಖ ವ್ಯಕ್ತಿತ್ವ.

ಬಿ. ಸಿ. ರಾಜೇಗೌಡ, ಬಸವನಾಯಕನಹಳ್ಳಿ,
ಮಲ್ಲೆದೇವರಪುರ ಅಂಚೆ, ಹಳೆಕೋಟೆ ಹೋಬಳಿ,
ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.

# ರಂಗಸ್ವಾಮಿ

ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಕಸಬಾ ಹೋಬಳಿಯ ಮುರುಂಡಿ ಗ್ರಾಮದವರು ರಂಗಸ್ವಾಮಿ. ವಯಸ್ಸು ಸುಮಾರು ೬೦ ವರ್ಷ, ತಂದೆ ದ್ಯಾಮಯ್ಯ ಹರಿಜನ ಬಲಗೈ ಜನಾಂಗಕ್ಕೆ ಸೇರಿದವರು, ರಂಗಸ್ವಾಮಿಯೂ ಕೂಡ ಸೋಮನನ್ನು ಕುಣಿಸುವಾಗ ಹಾಡುಗಳನ್ನು ಹೇಳುತ್ತಾರೆ. ಇವರೊಬ್ಬ ಪ್ರತಿಭಾವಂತ ಹಾಡುಗಾರರೆಂದು ಎಲ್ಲರಿಂದಲೂ ಪ್ರಶಂಸನೀಯತೆಗೆ ಒಳಗಾಗಿದ್ದಾರೆ.

ರಂಗಸ್ವಾಮಿ ಹಾಡುಗಳನ್ನು ಹೇಳುತ್ತಾ ಸೋಮನ ಹೊತ್ತು ಕುಣಿಯುವವರಿಗೆ ಹುರಿದುಂಬಿಸುತ್ತಾರೆ. ಇವರ ಹಾಡಿನ ಲಯಕ್ಕೆ ತಕ್ಕ ಹಾಗೆ ಸೋಮನ ಹೊತ್ತವರು ಕುಣಿಯುತ್ತಾರೆ. ಅಷ್ಟೇ ಅಲ್ಲದೆ ಇವರ ಹಾಡಿನ ಮೋಡಿಗೆ ಅಲ್ಲಿದ್ದವರೂ ಕೂಡ ಒಳಗಾಗಿ ಹೆಜ್ಜೆ ಹಾಕುತ್ತಿರುತ್ತಾರೆ. ಸೋಮನನ್ನು ಹೊತ್ತು ಕುಣಿಯುವವರು ವಿಶ್ರಾಂತಿಗಾಗಿ ನಿಂತಾಗ ಮಾತುಗಳ ಮೂಲಕ ದೇವರನ್ನು ಹೊಗಳುವ ಮತ್ತು ತೆಗಳುವ ಕ್ರಿಯೆಯು ಆಗಾಗ ನಡೆಯುತ್ತಿರುತ್ತದೆ.

ರಂಗಸ್ವಾಮಿಯನ್ನು ಊರಿನ ಜನರು ಹಾಗು ಸುತ್ತ ಮುತ್ತಲಿನವರು ಹೊಗಳಿಕೆ ಪದಗಾರನೆಂದೇ ಗುರುತಿಸುವುದುಂಟು. ಇವರು ತಮ್ಮ ಊರಿನಲ್ಲಿ ಮಾತ್ರವಲ್ಲದೆ ಸುತ್ತಮುತ್ತಲ ಗ್ರಾಮಗಳಲ್ಲಿಯೂ ಸೋಮನನ್ನು ಕುಣಿಸುವಾಗ ಹಾಡುಗಳನ್ನು ಹೇಳಲು ಹೋಗುತ್ತಾರೆ. ಅರಸೀಕೆರೆ ತಾಲ್ಲೂಕಿನಾದ್ಯಂತ ತಮ್ಮ ಹಾಡುಗಳ ಮೂಲಕ ಚಿರಪರಿಚಿತರಾಗಿರುವ ರಂಗಸ್ವಾಮಿ ತಮ್ಮ ವಾದ್ಯ ತಂಡಗಳ ಮೂಲಕ ಹೊರ ಜಿಲ್ಲೆಯಲ್ಲಿ ಹಾಗು ಸರ್ಕಾರಿ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿದ್ದಾರೆ.

ರಂಗಸ್ವಾಮಿ, ಮುರುಂಡಿ,
ಕಸಬಾ ಹೋಬಳಿ, ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.

# ಮರಿಯಮ್ಮ

ಮರಿಯಮ್ಮ ಹಾಸನ ಜಿಲ್ಲೆ ಹಾಸನ ತಾಲೂಕಿನ ಕಸಬಾ ಹೋಬಳಿಯ ಹಾಲುವಾಗಿಲು ಗ್ರಾಮದವರು. ವಯಸ್ಸು ೬೦ ವರ್ಷ. ಗಂಡ ಲಕ್ಷ್ಮಣಶೆಟ್ಟಿ. ಕುರುಹಿನಶೆಟ್ಟಿ ಜನಾಂಗಕ್ಕೆ ಸೇರಿದವರು. ಮೂಲತಃ ಬಟ್ಟೆ ನೇಯುವ ಕಸುಬು ಇವರದು. ಜೊತೆಗೆ ವ್ಯವಸಾಯ ಹಾಗು ಕೃಷಿ ಕಾರ್ಮಿಕರು. ಈಗ ಇವರನ್ನು ನೋಡಿಕೊಳ್ಳುವವರು ಯಾರೂ ಇಲ್ಲದೆ ಮಗಳ ಮನೆ ಹಾಸನ ತಾಲ್ಲೂಕಿನ ಹೂವಿನಹಳ್ಳಿ ಕಾವಲಿನಲ್ಲಿ ವಾಸವಾಗಿದ್ದಾರೆ.

ಮರಿಯಮ್ಮ ಹುಟ್ಟು ಕಲಾವಿದೆ. ತನ್ನ ತಾಯಿ ಹಾಗು ಬಂಧು ಬಳಗದವರಿಂದ ಜನಪದ ಹಾಡುಗಳನ್ನು ಕಲಿತವರು. ಇದು ಇವರಿಗೆ ವಂಶಪಾರಂಪರ್ಯವಾಗಿ ಬಂದಿರುವ ಕಲೆ. ಇವರು ಎಲ್ಲಾ ರೀತಿಯ ಜನಪದ ಗೀತೆಗಳನ್ನು ಮೂಲ ಧಾಟಿಯಲ್ಲಿ ಹಾಡುತ್ತಾರೆ. ಸೋಬಾನೆ ಹಾಡುಗಳು, ತ್ರಿಪದಿಗಳು, ಕಥನ ಗೀತೆಗಳು, ಬಿಡಿ ಹಾಡುಗಳು ಹೀಗೆ ನಾನಾ ರೀತಿಯ ಹಾಡುಗಳನ್ನು ಹೇಳುವಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದಾರೆ. ಇವರು ಹಾಡಲು ಕುಳಿತರೆ ದಿನಗಟ್ಟಲೆ ಮೇಲೇಳುವುದೇ ಇಲ್ಲ. ರಾಗವೂ ಕೂಡ ತುಂಬಾ ಚೆನ್ನಾಗಿದ್ದು ಕೇಳುಗರನ್ನು ಸೆರೆ ಹಿಡಿಯುವಲ್ಲಿ ಅತ್ಯಂತ ಯಶಸ್ವಿಯಾಗಿದೆ. ಮರಿಯಮ್ಮನವರ ಹಾಡುಗಳೆಂದರೆ ಜನರು ಜೇನುನೊಣ ಮುತ್ತಿಗೆ ಹಾಕುವಂತೆ ಕೇಳಲು ಮುತ್ತಿಕೊಳ್ಳುತ್ತಾರೆ.

ಮರಿಯಮ್ಮ ಆಕಾಶವಾಣಿ ಕಲಾವಿದೆ. ಇವರ ಸೋಬಾನೆ ಹಾಡುಗಳನ್ನು ಹಾಸನ ಆಕಾಶವಾಣಿಯಲ್ಲಿ ಆಗಾಗ ಪ್ರಸಾರ ಮಾಡುತ್ತಿರುತ್ತಾರೆ. ಇವರೊಂದಿಗೆ ಇನ್ನೂ ಮೂವರು ಇವರ ಊರಿನವರೇ ಸೇರಿಕೊಳ್ಳುತ್ತಾರೆ. ಹಾಸನ ನಗರದಲ್ಲಿ ನಡೆಯುವ ಹಲವಾರು ಮದುವೆಗಳಿಗೆ ಮರಿಯಮ್ಮನವರ ತಂಡವನ್ನು ಸೋಬಾನೆ ಹಾಡುಗಳನ್ನು ಹೇಳಲು ಈಗಲೂ ಆಹ್ವಾನಿಸುತ್ತಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ

ಅಕಾಡಮಿಯು ೨೦೦೪ರಲ್ಲಿ ಹಾಸನದಲ್ಲಿ ಒಂದು ವಾರ ಏರ್ಪಡಿಸಿದ್ದ "ಗೀತ ಗಾಯನ ಕಮ್ಮಟ"ದಲ್ಲಿ ಮರಿಯಮ್ಮನವರು ಯುವ ಪ್ರತಿಭೆಗಳಿಗೆ ಮೂಲ ಧಾಟಿಯ ಸೋಬಾನೆ ಹಾಡುಗಳನ್ನು ಕಲಿಸಲು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ಆಗ ಇವರನ್ನು ಅಭಿನಂದಿಸಲಾಗಿದೆ.

**ಮರಿಯಮ್ಮ,**
**ಹೂವಿನಹಳ್ಳಿ ಕಾವಲು, ಕುಪ್ಪಳ್ಳಿ ಅಂಚೆ,**
**ಕಸಬಾ ಹೋಬಳಿ, ತಾ : ಜಿ : ಹಾಸನ.**

# ರಂಗಯ್ಯ

ಚಿಟ್ಟಿಮೇಳ ಹಾಸನ ಜಿಲ್ಲೆಯಲ್ಲಿ ಪ್ರಸಿದ್ಧಿ ಪಡೆದಿದೆ. ಅದರಲ್ಲೂ ಈ ಕಲೆಯನ್ನು ಹೆಚ್ಚು ಆಕರ್ಷಿಸುತ್ತಿರುವುದು ಈ ಗುಂಪಿನಲ್ಲಿ ಮೌರಿ ಊದುವ ಕಲಾವಿದರಿಂದ. ಅಂತಹ ಆಕರ್ಷಣೀಯ ವಾದ ಮೌರಿ ಕಲಾವಿದನೆಂದು ಹೆಸರು ಪಡೆದಿರುವ ವ್ಯಕ್ತಿಯೇ ರಂಗಯ್ಯ. ಇವರು ಹಾಸನ ಜಿಲ್ಲೆ ಕಸಬಾ ಹೋಬಳಿಯ ತೇಜೂರು ಗ್ರಾಮದವರು. ವಯಸ್ಸು ೬೫ ವರ್ಷ. ತಂದೆ ಕೆಂಚಯ್ಯ. ಕೆಂಚಯ್ಯ ಹುಟ್ಟು ಕಲಾವಿದ. ಮೌರಿವಾದನಕ್ಕೆ ಸುತ್ತ ಮುತ್ತಲ ಹಳ್ಳಿಗಳಿಗೆಲ್ಲ ಪ್ರಸಿದ್ಧರಾಗಿದ್ದವರು. ಇವರ ಮಗ ರಂಗಯ್ಯ. ಈ ಎಲ್ಲಾ ಕಾರಣಗಳಿಂದ ಹುಟ್ಟಿನಿಂದಲೇ ಕಲಾವಿದರಾಗಿ ಹುಟ್ಟಿದವರು. ತಂದೆ ಗುರುವಾಗಿದ್ದರಿಂದ ಮೌರಿವಾದನ ಇವರಿಗೆ ವಂಶಪಾರಂಪರ್ಯವಾಗಿ ಬಳುವಳಿಯಾಗಿ ಬಂದಿದೆ. ಇವರು ಹರಿಜನ ಬಲಗೈ ಪಂಗಡಕ್ಕೆ ಸೇರುವವರಾಗಿದ್ದು, ಮೂಲತಃ ಕೃಷಿಕರು. ಇರುವ ಅಲ್ಪಸ್ವಲ್ಪ ಜಮೀನಿನಲ್ಲಿ ಕೃಷಿ ಮಾಡುತ್ತಾ, ಕೃಷಿ ಕಾರ್ಮಿಕರಾಗಿಯೂ ದುಡಿಯುತ್ತಾ, ಪ್ರವೃತ್ತಿಯಾಗಿ ಚಿಟ್ಟಿ ಮೇಳದ ಕಲಾವಿದರಾಗಿದ್ದಾರೆ. ಆದರೆ ಇದಾವುದು ಇವರ ಹೊಟ್ಟೆ ತುಂಬಿಸಿಲ್ಲ. ಆದರೂ ಕಲೆಯ ಮೂಲಕ ಆತ್ಮ ತೃಪ್ತಿ ಪಡೆದುಕೊಂಡವರಾಗಿದ್ದಾರೆ.

ರಂಗಯ್ಯನವರು ಹಬ್ಬ-ಹರಿದಿನ, ಮದುವೆ, ಜಾತ್ರೆ, ಉತ್ಸವ ಮುಂತಾದ ಕಾರ್ಯಕ್ರಮಗಳಲ್ಲಿ ತಮ್ಮ ಮೌರಿ ವಾದನ ಮಾಡಿದ್ದಾರೆ. ಇವರು ಮೌರಿ ಊದುತ್ತಿದ್ದರೆ ದೊಡ್ಡವರು, ಚಿಕ್ಕವರು ಎನ್ನದೆ ಎಲ್ಲರೂ ಇವರ ಕಲೆಗಾರಿಕೆಗೆ ಮಾರು ಹೋಗುತ್ತಾರೆ. ಅಂತಹ ಶೃತಿ ಇವರ ವಾದನದಿಂದ ಕೇಳಿ ಬರುತ್ತದೆ. ಜನಪದ ಹಾಡುಗಳನ್ನು ನುಡಿಸುತ್ತಿದ್ದರೆ ಕೇಳುಗರು ತಮ್ಮ ಅರಿವಿಗೆ ಬಾರದಂತೆಯೆ ಕಾಲಾಕುತ್ತಾ ಕುಣಿಯ ತೊಡುಗುತ್ತಾರೆ. ಇವರು ಹಾಸನ ಜಿಲ್ಲೆಯಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ

ಪಂಗಡಗಳ ಜನಪದ ಕಲಾ ಮೇಳದಲ್ಲಿ ಭಾಗವಹಿಸಿದ್ದಾರೆ. ಸುವರ್ಣ ಕರ್ನಾಟಕ ಸಂಸ್ಕೃತಿ ದಿಬ್ಬಣ, ರಾಜ್ಯೋತ್ಸವ ಮುಂತಾದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದು ಅದ್ಭುತ ಕಲಾವಿದರೆನಿಸಿಕೊಂಡಿದ್ದಾರೆ. ಇವರ ಮಗ ಕುಮಾರ ಈ ಕಲೆಯನ್ನು ಕರಗತ ಮಾಡಿಕೊಳ್ಳುತ್ತಿರುವುದು ಆಶಾದಾಯಕವಾಗಿದೆ.

**ರಂಗಯ್ಯ**
**ತೇಜೂರು, ಕಸಬಾ ಹೋಬಳಿ,**
**ತಾ : ಜಿ : ಹಾಸನ.**

# ಕೃಷ್ಣಯ್ಯ

ಹರಿಜನ ಬಲಗೈ, ಗುಂಪಿಗೆ ಸೇರಿದ ಕೃಷ್ಣಯ್ಯ ಹಾಸನ ಜಿಲ್ಲೆ, ಹಾಸನ ತಾಲೂಕಿನ ಕಡದರವಳ್ಳಿ ಗ್ರಾಮದವರು. ವಯಸ್ಸು ೬೦ ವರ್ಷ. ತಂದೆ ಕೋಡಯ್ಯ. ಇವರು ಚಿಟ್ಟಿ ಮೇಳದಲ್ಲಿ ಮೌರಿ ಊದುವ ಕಲಾವಿದರು. ಚಿಕ್ಕಂದಿನಿಂದಲೂ ಈ ಕಲೆಯ ಬಗ್ಗೆ ಆಸಕ್ತಿ ವಹಿಸುತ್ತಾ ಬಂದಿರುವ ಇವರಿಗೆ ಗುರು ತೇಜೂರಿನ ರಂಗಯ್ಯ. ಗುರುವಿನ ಜೊತೆಯಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಮೌರಿ ಊದುವುದನ್ನು ಕರಗತ ಮಾಡಿಕೊಂಡಿರುವ ಇವರು ಈಗ ಅದ್ಭುತ ಕಲಾವಿದರೆನಿಸಿಕೊಂಡಿದ್ದಾರೆ. ಇವರು ಮೌರಿ ಊದುವುದನ್ನು ಕೇಳುವಾಗ ಅದರ ಮಾಧುರ್ಯಕ್ಕೆ ತಲೆದೂಗದವರೆ ಇಲ್ಲ. ಅಂತಹ ಆಕರ್ಷಣೀಯವಾದ ಶಕ್ತಿ ಇವರಲ್ಲಿ ಮನೆಯಮಾಡಿಕೊಂಡಿದೆ.

ಕೃಷ್ಣಯ್ಯ ಮದುವೆ, ಹಬ್ಬ–ಹರಿದಿನಗಳು, ಜಾತ್ರೆ, ಉತ್ಸವ ಮುಂತಾದ ಹಲವಾರು ಕಾರ್ಯಕ್ರಮಗಳಲ್ಲಿ ತಮ್ಮ ಮೌರಿ ವಾದನವನ್ನು ನುಡಿಸಿದ್ದಾರೆ. ಸುತ್ತ ಮುತ್ತಲ ಹಳ್ಳಿಗಳಿಗೆಲ್ಲ ಇವರು ಪರಿಚಿತರು. ಜೊತೆಗೆ ಹಾಸನ ತಾಲ್ಲೂಕಿನ ಹೊರಭಾಗಗಳಾದ ಬೇಲೂರು, ಹಳೇಬೀಡು ಮುಂತಾದ ಊರುಗಳಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕಲಾ ಮೇಳ ಹಾಗು ಇನ್ನಿತರೆ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿದ್ದಾರೆ. ಇವರಿಗೆ ಎರಡು ಗಂಡು, ಎರಡು ಹೆಣ್ಣು ಮಕ್ಕಳಿದ್ದು, ಯಾರೂ ಈ ಕಲೆಯನ್ನು ರೂಢಿಸಿಕೊಂಡಿಲ್ಲ. ವೃತ್ತಿಯಲ್ಲಿ ಕೃಷಿಕರಾಗಿ ಅಲ್ಪಸ್ವಲ್ಪ ಜಮೀನು ಇದ್ದರೂ ಅದು ಹೊಟ್ಟೆ ಬಟ್ಟೆಗೆ ಸಾಕಾಗುವುದಿಲ್ಲ. ಕೃಷಿ ಕಾರ್ಮಿಕ ರಾಗಿಯೂ ದುಡಿಯುತ್ತಾರೆ. ಆದರೆ ಅವೆಲ್ಲಕ್ಕಿಂತ ಹೆಚ್ಚಾಗಿ ಚಿಟ್ಟಿ ಮೇಳದ ಕಲಾವಿದರಾಗಿ ಪ್ರವೃತ್ತಿಯಲ್ಲಿಯೇ ತೃಪ್ತಿಯನ್ನು ಕಂಡುಕೊಂಡವರು. ಕಲೆಯಿಂದಲೂ ಹೊಟ್ಟೆ ತುಂಬದಿದ್ದರೂ ಅದೇ ನನ್ನ ಬದುಕಿನ ಜೀವಾಳ ಎಂದು ಈಗಲೂ ನಿಟ್ಟುಸಿರು ಬಿಡುತ್ತಾರೆ.

ಕೃಷ್ಣಯ್ಯ, ಕಡದರವಳ್ಳಿ,<br>ಕಸಬಾ ಹೋಬಳಿ, ತಾ : ಜಿ : ಹಾಸನ.

## ಕಸ್ತೂರಮ್ಮ

ಹಾಸನ ಜಿಲ್ಲೆ ಚನ್ನರಾಯ ಪಟ್ಟಣ ತಾಲೂಕಿನ ಶ್ರೀನಿವಾಸಪುರದ ಜನತಾ ಕಾಲೋನಿಯಲ್ಲಿ ವಾಸಮಾಡುತ್ತಿರುವವರು ಕಸ್ತೂರಮ್ಮ. ಸುಮಾರು ೬೦ ವರ್ಷ ವಯಸ್ಸಾಗಿದೆ. ವಿಶ್ವಕರ್ಮ ಜನಾಂಗಕ್ಕೆ ಸೇರಿದವರಾಗಿದ್ದು, ಇವರ ಮೂಲ ಕಸುಬು ಕುಲುಮೆ ಕೆಲಸ. ಆದರೆ ಪ್ರವೃತ್ತಿಯಾಗಿ ಜನಪದ ಹಾಡುಗಳನ್ನು ರೂಢಿಸಿಕೊಂಡವರು. ಇವರು ಚಿಕ್ಕಂದಿನಿಂದಲೂ ತನ್ನ ಸುತ್ತ ಮುತ್ತಲಿನವರಿಂದ ಹಾಡುಗಾರಿಕೆಯನ್ನು ಕಲಿತವರು.

ಕಸ್ತೂರಮ್ಮ ತನ್ನ ಹೆಸರಿಗೆ ತಕ್ಕಂತೆ ತನ್ನ ಕಂಠ ಮಾಧುರ್ಯದಿಂದ ಇಂಪಾದ ಹಾಡುಗಳನ್ನು ಸಮಾಜಕ್ಕೆ ಕಸ್ತೂರಿಯ ಹಾಗೆ ಪಸರಿಸಿದವರು. ಇವರು ರಾಗಿ ಬೀಸುವ ಹಾಡುಗಳು, ಸೋಬಾನೆ ಹಾಡುಗಳು, ಬಿಡಿ ಗೀತೆಗಳು, ಕಥನ ಗೀತೆಗಳು ಹೀಗೆ ನಾನಾ ರೀತಿಯ ಹಾಡುಗಳನ್ನು ಹಾಡುತ್ತಾರೆ. ತನ್ನ ಊರಿನಲ್ಲಿ ಮತ್ತು ಸುತ್ತ ಮುತ್ತಲ ಗ್ರಾಮಗಳಲ್ಲಿ ನಡೆಯುವ ಮದುವೆ, ದೇವರ ಪೂಜೆ, ಉತ್ಸವ ಮುಂತಾದ ಸಂದರ್ಭಗಳಲ್ಲೆಲ್ಲಾ ಸೊಗಸಾಗಿ ಹಾಡುಗಳನ್ನು ಹಾಡುವುದುಂಟು. ಇವರನ್ನು ಹಾಡೇಳಿ ಎಂದು ಕೇಳಿದರೆ ಸಾಕು ಇವರ ಬಾಯಿಂದ ಪುಂಖಾನು ಪುಂಖವಾಗಿ ಹಾಡುಗಳು ಹೊರಡುತ್ತವೆ. ಎಷ್ಟು ಸಮಯ ಹಾಡುತ್ತೀರಿ ಎಂದು ಕೇಳಿದರೆ ದಿನಗಟ್ಟಲೆ ಹಾಡುತ್ತೇನೆ. ನನಗೆ ಹೊತ್ತಿನ ಮಿತಿ ಇರುವುದಿಲ್ಲ ಎಂದು ಹೇಳುತ್ತಾರೆ. ಇವರ ಹಾಡುಗಳನ್ನು ಆಕಾಶವಾಣಿಯವರು ಧ್ವನಿ ಮುದ್ರಣ ಮಾಡಿಕೊಂಡಿದ್ದು ಆಗಾಗ ಪ್ರಸಾರ ಮಾಡುತ್ತಾರೆ. ಇವರು ಆಕಾಶವಾಣಿ ಕಲಾವಿದರು. ಆದರೆ ನನ್ನಲ್ಲಿರುವ ಹಾಡುಗಳನ್ನು ಯಾರೂ ಕಲಿಯುತ್ತಿಲ್ಲವಲ್ಲ ಎಂಬ ಕೊರಗು ಇವರನ್ನು ಕಾಡುತ್ತಿದೆ. ಇವರು ಕೇವಲ ಜನಪದ ಹಾಡುಗಾರ್ತಿಯಲ್ಲ, ಜನಪದ ಗಣಿ ಎಂದು ಕರೆಯುವುದರಲ್ಲಿ ಯಾವ ಅತಿಶಯೋಕ್ತಿಯು ಆಗಲಾರದು.

ಕಸ್ತೂರಮ್ಮ, ಶ್ರೀನಿವಾಸಪುರ,
ಕಸಬಾ ಹೋಬಳಿ, ಚನ್ನರಾಯಪಟ್ಟಣ ಹಾಸನ ಜಿಲ್ಲೆ.

## ವೈ. ಎಚ್. ಸೋಮೇಗೌಡ

ಮಲೆನಾಡೆಂದರೆ ಸುಗ್ಗಿ ಕುಣಿತ ಎನ್ನುವಷ್ಟರ ಮಟ್ಟಿಗೆ ಈ ಕಲೆ ಪ್ರಸಿದ್ಧಿಯನ್ನು ಪಡೆದಿದೆ. ಚಿಕ್ಕಮಗಳೂರು, ಶಿವಮೊಗ್ಗ, ಉತ್ತರಕನ್ನಡ, ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕುಗಳಲ್ಲಿ ಸುಗ್ಗಿ ಕುಣಿತದ ಸಾಮ್ಯತೆಯನ್ನು ಕಾಣಬಹುದು. ಆದರೆ ಸಕಲೇಶಪುರದ ಸುಗ್ಗಿ ಕುಣಿತ ಬಹುಪಾಲು ಕೊಡಗಿನ ಸುಗ್ಗಿ ಕುಣಿತವನ್ನು ಹೋಲುತ್ತದೆ.

ಹಾಸನ ಜಿಲ್ಲೆ ಸಕಲೇಶಪುರ ತಾಲೂಕಿನ ಯಡಕೆರೆ ಗ್ರಾಮದ ವೈ. ಎಚ್. ಸೋಮೇಗೌಡರು ತಮ್ಮದೇ ಆದ ತಂಡವನ್ನು ಕಟ್ಟಿಕೊಂಡು ನಿರಂತರವಾಗಿ ಸುಗ್ಗಿ ಕುಣಿತವನ್ನು ಮಾಡಿಕೊಂಡು ಬರುತ್ತಿದ್ದಾರೆ. ಇವರಿಗೆ ೬೦ ವರ್ಷ, ತಂದೆ ಹನುಮೇಗೌಡರು, ಒಕ್ಕಲಿಗ ಜನಾಂಗಕ್ಕೆ ಸೇರಿದವರು. ವೃತ್ತಿ ವ್ಯವಸಾಯ. ಸುಗ್ಗಿ ಕುಣಿತ ಕಲೆಯನ್ನು ಹವ್ಯಾಸವಾಗಿ ಬೆಳೆಸಿಕೊಂಡು ಬಂದವರು.

ಇವರ ತಂಡ ಸುಗ್ಗಿ ಕುಣಿಯುವಾಗ ಕೊಡಗಿನ ರೀತಿಯ ವೇಷಭೂಷಣ ಇರುತ್ತದೆ. ಬಿಳಿಪ್ಯಾಂಟು, ಕಪ್ಪುಕೋಟು, ಸೊಂಟಕ್ಕೆ ನಡುಪಟ್ಟಿ, ತಲೆಗೆ ಪೇಟ, ಕೈಯಲ್ಲಿ ಕತ್ತಿ ಗುರಾಣಿ ಇರುತ್ತದೆ. ಕುಣಿಯುವಾಗ ಅಬ್ಬರ, ಆರ್ಭಟ ಇರುತ್ತದೆ. ಜೊತೆಯಲ್ಲಿರುವ ವಾದ್ಯದವರು ಬಡಿದ ಹಾಗೆಲ್ಲ ಅವರ ಗತ್ತಿಗೆ ತಕ್ಕ ಹಾಗೆ ಕಾಲುಗಳನ್ನು ಹಾಕುತ್ತಾ ಕುಣಿಯುತ್ತಿರುತ್ತಾರೆ. ಇವರು 'ಲಕ್ಷ್ಮೀಕಾಂತ ಕಲಾ ತಂಡ' ಎಂಬ ತಂಡವನ್ನು ಕಟ್ಟಿಕೊಂಡು ತಮ್ಮ ಊರಿನಲ್ಲಿ ಮಾತ್ರವಲ್ಲದೆ ಸುತ್ತ ಮುತ್ತಲ ಹಳ್ಳಿಗಳು ಹಾಗು ಸಕಲೇಶಪುರ ತಾಲ್ಲೂಕಿನಾದ್ಯಂತ ಸುಗ್ಗಿ ಕುಣಿತ ಮಾಡಿದ್ದಾರೆ. ಮೈಸೂರು ದಸರಾ, ಹಾಸನ, ಬೆಂಗಳೂರುಗಳಲ್ಲಿಯೂ ತಮ್ಮ ಪ್ರದರ್ಶನಗಳನ್ನು ನೀಡಿದ್ದಾರೆ.

ಸೋಮೇಗೌಡರೊಂದಿಗೆ ಯಡಕೆರೆಯವರಾಗಿದ್ದು, ಬೆಂಗಳೂರಿನಲ್ಲಿರುವ ಸುಗಮ ಸಂಗೀತದಲ್ಲಿ ಹೆಸರು ಮಾಡಿರುವ ನಿವೃತ್ತ ಅಧಿಕಾರಿಗಳು ಆದ ವೈ. ಕೆ.

ಮುದ್ದುಕೃಷ್ಣ ಅವರು ಊರಿಗೆ ಬಂದಾಗ ತಂಡದೊಂದಿಗೆ ಸೇರಿಕೊಂಡು ೧೨ ದಿನಗಳಕಾಲ ಸುಗ್ಗಿ ಕುಣಿತ ಕುಣಿಯುತ್ತಾರಂತೆ. ಜೊತೆಗೆ ಇದೇ ಗ್ರಾಮದವರಾದ ಕೆ. ಬಿ. ಗಂಗಾಧರ್, ವೈ. ಎಲ್. ಚಂದ್ರಶೇಖರ್, ವೈ ಎಂ. ನಾಗರಾಜು, ವೈ. ಎ. ಪುಟ್ಟರಾಜು, ವೈ. ಪಿ. ಕೆಂಚೇಗೌಡ, ಸಿ. ಕೆ. ಸುಬ್ಬೇಗೌಡ, ಕೆ. ಸಿ. ಮೊಗಣ್ಣಗೌಡ, ಹೆಚ್. ಎಂ. ಅಜಿತ್ ಮತ್ತು ಹೆಚ್. ಎಂ. ಪ್ರವೀಣ್‌ಕುಮಾರ ಸೋಮೇಗೌಡರ ತಂಡದಲ್ಲಿದ್ದಾರೆ. ಈ ತಂಡದೊಂದಿಗೆ ಮೋರಿ ಮೊಗಾರಯ್ಯನವರ ವಾದ್ಯ ಇರುತ್ತದೆ.

**ವೈ. ಎಚ್. ಸೋಮೇಗೌಡ,**
**ಯಡಕೆರೆ, ಹೆತ್ತೂರು ಹೋಬಳಿ,**
**ಸಕಲೇಶಪುರ ತಾಲೂಕು, ಹಾಸನ ಜಿಲ್ಲೆ.**

# ದ್ಯಾವಯ್ಯ

ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಹಳ್ಳಿ ಮೈಸೂರು ಹೋಬಳಿಯ ರಂಗೇನಹಳ್ಳಿ ದ್ಯಾವಯ್ಯನವರದು. ಇವರಿಗೆ ಸುಮಾರು ೫೮ ವರ್ಷ. ಹರಿಜನ ಎಡಗೈ ಜನಾಂಗಕ್ಕೆ ಸೇರಿದವರು. ಇವರು ಕೃಷಿ ಕಾರ್ಮಿಕರಾಗಿದ್ದು ಅಲ್ಪಸ್ವಲ್ಪ ಜಮೀನು ಇದೆ. ತನ್ನ ಕಾಯಕದ ಜೊತೆಯಲ್ಲಿ ತಂಬೂರಿ ಹಾಡುಗಳನ್ನು ಹಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ.

ಇವರು ಚಿಕ್ಕಂದಿನಲ್ಲಿ ಬೇರೆಯವರು ಹಾಡುತ್ತಿದ್ದಾಗ ಅವರಿಂದ ಹಾಡುಗಳನ್ನು ಕಲಿತಿರುವುದರೊಂದಿಗೆ ಇವರು ತಂಬೂರಿ ಕಲಾವಿದರೊಂದಿಗೆ ಸ್ವಲ್ಪದಿನ ಹಿಮ್ಮೇಳ ಕಲಾವಿದರಾಗಿ ಭಾಗವಹಿಸಿದ್ದಾರೆ. ತಂಬೂರಿ ಕಾವ್ಯಗಳನ್ನು ಹಾಡುವ ಇವರು ಮುಖ್ಯಗಾಯಕರಾಗಿ ಮುಂದೆ ಬರಲು ಸಾಧ್ಯವಾಗಿಲ್ಲ ಇವರನ್ನು ಬೇರೆಯವರು ಕೂಡ ಗುರುತಿಸಿಲ್ಲ. ತಮ್ಮ ಕಲಾ ಪ್ರತಿಭೆಯನ್ನು ಒಂದು ಸೀಮಿತ ವಲಯಕ್ಕಷ್ಟೇ ಪರಿಚಯಿಸುತ್ತಾ ಬೆಳೆದು ಬಂದಿರುವ ಕಲಾವಿದ. ಜೊತೆಗೆ ಇತರೆ ಜನಪದ ಹಾಡುಗಳನ್ನು ತುಂಬಾ ಚೆನ್ನಾಗಿ ಹಾಡುತ್ತಾರೆ. ಹಬ್ಬ-ಹರಿದಿನಗಳು ದೇವರ ಜಾತ್ರೆ, ಉತ್ಸವ ಮುಂತಾದ ಸಂದರ್ಭಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ತನ್ನ ಕಲಾ ಪ್ರೌಢಿಮೆಯನ್ನು ವ್ಯಕ್ತಪಡಿಸುತ್ತಾರೆ. ಇವರಲ್ಲಿರುವ ಹಿಂಜರಿಕೆ ಇವರು ಮುನ್ನುಗ್ಗಿ ಬರಲು ಸಾಧ್ಯವಾಗಿಲ್ಲ ಎಂದೆನಿಸುತ್ತದೆ.

**ದ್ಯಾವಯ್ಯ,**
**ರಂಗೇನಹಳ್ಳಿ, ಹಳ್ಳಿ ಮೈಸೂರು ಹೋಬಳಿ,**
**ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.**

## ವೆಂಕಟರಾಮು

ಚಿಟ್ಟಿಮೇಳದಲ್ಲಿ ಪ್ರಸಿದ್ಧಿ ಪಡೆದಿರುವ ವೆಂಕಟರಾಮು ಹಾಸನ ಜಿಲ್ಲೆ ಮತ್ತು ತಾಲೂಕಿನ, ದುದ್ದ ಹೋಬಳಿಯ ಕಬ್ಬಳಿ ಗ್ರಾಮದವರು. ಇವರಿಗೆ ಈಗ ೫೮ ವರ್ಷಗಳಾಗಿವೆ. ಇವರು ಕರ್ನಾಟಕದಲ್ಲಿಯೆ ತಂಬೂರಿ ಕಲೆಯಲ್ಲಿ ಪ್ರಸಿದ್ಧಿ ಪಡೆದಿದ್ದ ತಂಬೂರಿ ದಾಸಪ್ಪನವರ ಮಗ, ಅಪ್ಪ ತಂಬೂರಿಯಲ್ಲಿ ಹೆಸರಾದಂತೆ ಮಗ ಚಿಟ್ಟಿಮೇಳದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ.

ವೆಂಕಟರಾಮು ಸುಮಾರು ೩೫ ವರ್ಷಗಳಿಂದ ಈ ಕಲೆಯನ್ನು ನಡೆಸಿಕೊಂಡು ಬರುತ್ತಿದ್ದು, ತನ್ನದೇ ಆದ ತಂಡವನ್ನು ಕಟ್ಟಿಕೊಂಡಿದ್ದಾರೆ. ಇವರ ತಂಡದಲ್ಲಿ ಇವರ ಸಹೋದರರು, ಭಾವಂದಿರು ಹಾಗು ಮಗ ಇದ್ದಾರೆ. ಇವರು ಕರಡೆ ವಾದ್ಯ ಮತ್ತು ಚಿಟ್ಟಿ ಮೇಳ ಎರಡಲ್ಲೂ ಪ್ರಸಿದ್ಧಿ ಪಡೆದಿರುವುದುಂಟು. ಕರಡೆ ವಾದ್ಯದ ಮುಂದುವರಿದ ಭಾಗವೇ ಚಿಟ್ಟಿ ಮೇಳವಾದುದರಿಂದ ಎರಡು ಕಲೆಯಲ್ಲಿಯೂ ಪರಿಣಿತರಾಗಲು ಸಾಧ್ಯವಾಗಿದೆ.

ವೆಂಕಟರಾಮು ಮದುವೆಗಳಲ್ಲಿ, ಗಣಪತಿ ಉತ್ಸವಗಳಲ್ಲಿ ಹೆಚ್ಚಾಗಿ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ನಂದಿ ಧ್ವಜ ಕುಣಿತಕ್ಕೆ ವೆಂಕಟರಾಮು ಅವರ ವಾದ್ಯವೇ ಬೇಕು. ಹಾಸನಾಂಬದೇವಿಯ ಉತ್ಸವ, ಸಿದ್ದೇಶ್ವರನ ಜಾತ್ರೆಗಳಲ್ಲಿ ಇವರ ವಾದ್ಯ ಕಡ್ಡಾಯ. ಜೊತೆಗೆ ಸಾವಿನ ಸಂದರ್ಭಗಳಲ್ಲಿಯೂ ತಮ್ಮ ವಾದ್ಯ ನುಡಿಸುವುದುಂಟು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಲವಾರು ಸಭೆ, ಸಮಾರಂಭಗಳಲ್ಲಿ, ರಾಜಕಾರಣಿಗಳ ಮೆರವಣಿಗೆಗಳಲ್ಲಿಯೂ ಭಾಗವಹಿಸಿರುವುದುಂಟು. ಹಾಸನ ಜಿಲ್ಲೆಯಾದ್ಯಂತವಲ್ಲದೆ ಮಂಡ್ಯ, ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರು, ಕೊಡಗು ಜಿಲ್ಲೆಗಳಲ್ಲಿಯೂ ಪ್ರದರ್ಶನ ನೀಡಿದ್ದಾರೆ. ದೂರ ಊರುಗಳಾದ ಮುಂಬೈನಲ್ಲೂ ಪ್ರದರ್ಶಿಸಿರುವುದುಂಟು. ೨೦೦೭ರ ಜುಲೈನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ದೆಹಲಿಯಲ್ಲಿ ನಡೆಸಿದ ಸುವರ್ಣ ಕರ್ನಾಟಕ ಜಾನಪದ ಉತ್ಸವದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ್ದಾರೆ.

**ವೆಂಕಟರಾಮು, ಕಬ್ಬಳಿ, ಹಳೆಕೊಪ್ಪಲು ಅಂಚೆ,**
**ದುದ್ದು ಹೋಬಳಿ ತಾ : ಜಿ : ಹಾಸನ.**

## ಶೇಖರಯ್ಯ

ಅಡ್ಡೆ ದೇವರುಗಳು ಇದ್ದ ಊರಿನಲ್ಲಿ ಸಾಮಾನ್ಯವಾಗಿ ಸೋಮ (ಚೋಮ)ಗಳು ಇದ್ದೇ ಇರುತ್ತವೆ. ಇವು ದೇವರುಗಳಿಗೆ ಭೂತಗಳಾಗಿ ರಕ್ಷಣೆಗಾಗಿ ಇರುತ್ತವೆ ಎಂಬುದು ಪ್ರತೀತಿ, ಇಂತಹ ಸೋಮನ ಪ್ರತಿಮೆಯನ್ನು ಗಂಡು ಭೂತಾಳೆ ಮರದಿಂದ ಮಾಡಿರುತ್ತಾರೆ. ರಕ್ತ ಭೂತಾಳೆ ಮರದಿಂದಲೂ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸೋಮನ ಪ್ರತಿಮೆಯನ್ನು ತಲೆಗೆ ಹಾಕಿಕೊಳ್ಳುವಂತೆ ಮಾಡಿರುತ್ತಾರೆ. ನೋಡಲು ಮುಂದೆ ಎರಡು ಕಣ್ಣಿನ ಆಕಾರವನ್ನು ಮಾಡಿ ಕಾಣುವಂತೆ ಮಾಡಿರುತ್ತಾರೆ. ಈ ಸೋಮಗಳಲ್ಲಿ ಕೆಂಪುಸೋಮ, ಹಳದಿ ಸೋಮ, ಕಪ್ಪು ಸೋಮ ಮುಂತಾಗಿ ಇರುತ್ತವೆ. ಇವುಗಳನ್ನು ಹೊರುವವನು ಸ್ವಲ್ಪ ಗಟ್ಟಿಮುಟ್ಟಾಗಿ ಶುದ್ಧತೆಯಿಂದ ಇರಬೇಕು. ಇಲ್ಲದಿದ್ದರೆ ಸೋಮ ಕುತ್ತಿಗೆಯನ್ನು (ಮೆಟ್ರೆಯನ್ನು) ಹಿಡಿದುಕೊಳ್ಳುತ್ತದೆ ಎನ್ನುವ ನಂಬಿಕೆಯುಂಟು.

ಇಂತಹ ಸೋಮನನ್ನು ಹೊತ್ತು ಕುಣಿಯುವ ಹಾಗು ಸೋಮನ ಹಾಡುಗಳನ್ನು ಹೇಳುವ ಕಲಾವಿದರೇ ಶೇಖರಯ್ಯ. ಇವರು ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಕಸಬಾ ಹೋಬಳಿಯ ಮುರುಂಡಿ ಗ್ರಾಮದವರು. ಸುಮಾರು ೫೮ ವರ್ಷ. ತಂದೆ ಶಿವಲಿಂಗಯ್ಯ, ಲಿಂಗಾಯತ ಜನಾಂಗಕ್ಕೆ ಸೇರಿದವರು. ಶೇಖರಯ್ಯ ಸೋಮನನ್ನು ಹೊತ್ತು ಕುಣಿಯುವ ಭಂಗಿ ತುಂಬಾ ಚೆನ್ನಾಗಿರುತ್ತದೆ. ಬರಿ ಮೈಯಲ್ಲಿ ಸೊಂಟಕ್ಕೆ ಒಂದು ತುಂಡು ಪಂಚೆ, ಚಡ್ಡಿ, ಕಾಲಿಗೆ ಗೆಜ್ಜೆಕಟ್ಟಿ ಕುಣಿಯ ತೊಡಗಿದರೆ ಆ ಕುಣಿತ ನೋಡಲು ತುಂಬಾ ಅದ್ಭುತವಾಗಿರುತ್ತದೆ.

ಸಾಮಾನ್ಯವಾಗಿ ಸೋಮಗಳನ್ನು ದೇವರ ಉತ್ಸವಗಳಲ್ಲಿ ಮಾತ್ರ ಹೊರಕ್ಕೆ ತೆಗೆಯುತ್ತಾರೆ. ಸಾರ್ವಜನಿಕ ಸಭೆ, ಸಮಾರಂಭಗಳು ಹಾಗು ಕಲಾ ಮೆರವಣಿಗೆಗೆ ಬಳಸುವುದು ತುಂಬಾ ಕಡಿಮೆ. ಆದರೆ ಮುರುಂಡಿಯಲ್ಲಿರುವ ಸೋಮಗಳನ್ನು ಸರ್ಕಾರಿ ಕಾರ್ಯಕ್ರಮಗಳಲ್ಲಿ ಹಾಗು ಕಲಾಮೇಳಗಳಲ್ಲಿ ತಂದು ಪ್ರದರ್ಶನ ನೀಡುವ ಕೆಲಸವನ್ನು ಶೇಖರಯ್ಯನವರು ನಿರಂತರವಾಗಿ ನಡೆಸಿಕೊಂಡು ಬಂದಿರುವುದು ಒಳ್ಳೆಯ ಬೆಳವಣಿಗೆ.

**ಶೇಖರಯ್ಯ, ಮುರುಂಡಿ, ಕಸಬಾ ಹೋಬಳಿ, ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.**

# ಲಕ್ಷ್ಮಮ್ಮ

ತಂಬೂರಿ ಕಲೆ ಕೇವಲ ಪುರುಷರ ಕಲೆ ಎಂಬುದಾಗಿತ್ತು. ಆದರೆ ಹೆಂಗಸರೂ ಕೂಡ ತಂಬೂರಿ ಕಲೆಯಲ್ಲಿ ನಿಪುಣರು ಎಂಬುದು ಲಕ್ಷ್ಮಮ್ಮನವರಿಂದ ತಿಳಿಯುತ್ತದೆ. ಲಕ್ಷ್ಮಮ್ಮ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಮಡಬದ ಕೊಪ್ಪಲಿನವರು. ವಯಸ್ಸು ೫೮ ವರ್ಷ. ಗಂಡ ಕುಂಚರಂಗಯ್ಯ. ದೊಂಬಿದಾಸರು ಜನಾಂಗಕ್ಕೆ ಸೇರಿದವರು.

ದೊಂಬಿದಾಸರು ಮಾಡುವ ವೃತ್ತಿ ಕಲೆಯೊಂದಿಗೆ ತಂಬೂರಿ ಕಲೆಯನ್ನು ರೂಢಿಸಿಕೊಂಡಿರುವ ಲಕ್ಷ್ಮಮ್ಮ ಸೊಗಸಾದ ಹಾಡುಗಾತಿ. ಏಕತಾರಿ ಮತ್ತು ತಂಬೂರಿ ಎರಡನ್ನು ಸುಂದರವಾಗಿ ನುಡಿಸುತ್ತಾರೆ. ಎದೆಗೆ ತಂಬೂರಿ ಆನಿಸಿ ಎಡಗೈಯಲ್ಲಿ ತಾಳಹಿಡಿದು ಬಲಗೈಯಲ್ಲಿ ತಂಬೂರಿ ತಂತಿ ಮೀಟುತ್ತಾ ಹಾಡುತ್ತಾ ಕುಳಿತರೆ ಹಗಲು ರಾತ್ರಿಯೆನ್ನದೆ ಹಾಡುತ್ತಾರೆ. ಭಿಕ್ಷಾಟನೆಯೊಂದಿಗೆ ಗಣಪತಿ ಉತ್ಸವ, ಹಬ್ಬ-ಹರಿದಿನ, ಹುಣ್ಣಿಮೆ, ಜಾತ್ರೆ ಮುಂತಾದ ಸಂದರ್ಭಗಳಲ್ಲೆಲ್ಲಾ ವಿಶೇಷವಾಗಿ ಕಾರ್ಯಕ್ರಮಗಳನ್ನು ನೀಡುತ್ತಾರೆ.

ಇವರನ್ನು ಮೈಸೂರಿನ ರಂಗಾಯಣದವರು ೨೦೦೭ರಲ್ಲಿ ನವರಾತ್ರಿ ರಂಗೋತ್ಸವದ ಸಂಧರ್ಭದಲ್ಲಿ ಸನ್ಮಾನಿಸಿ ಗೌರವಿಸಿದ್ದಾರೆ.

ಲಕ್ಷ್ಮಮ್ಮ, ಮಡಬದಕೊಪ್ಪಲು,
ಎಲಿಯೂರು ಅಂಚೆ, ದಂಡಿಗನಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.

# ಮರಿಗೌಡ

ಕರಪಾಲ ಕಲೆ ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪ್ರಮುಖವಾಗಿದೆ. ಹಾಸನ ಜಿಲ್ಲೆಯ ಇಬ್ಬೀಡು ಮತ್ತು ಜಾವಗಲ್‌ನ ಸುತ್ತ ಮುತ್ತ ಕರಪಾಲ ಕಲೆ ಪ್ರಸಿದ್ಧವಾಗಿತ್ತು. ಚನ್ನರಾಯಪಟ್ಟಣ ತಾಲೂಕಿನಲ್ಲಿಯೂ ಅಲ್ಲಲ್ಲಿ ಇದ್ದು, ಇದಕ್ಕೆ ಮುಖ್ಯ ಪ್ರೇರಣೆ ಎಂದರೆ ತಿಪಟೂರು ತಾಲೂಕು ಪಕ್ಕದಲ್ಲಿಯೇ ಇದ್ದು, ಅಲ್ಲಿಯ ಪ್ರಭಾವ ಇಲ್ಲಿ ದಟ್ಟವಾಗಿ ಇದೆ.

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಬಾಗೂರು ಹೋಬಳಿಯ ಕಾಮನಾಯಕನ ಹಳ್ಳಿಯವರು ಮರಿಗೌಡರು. ಕರಪಾಲ ಕಲಾವಿದರು. ವಯಸ್ಸು ಸುಮಾರು ೫೫ ವರ್ಷ. ತಂದೆ ಮರಿಶಂಕರೇಗೌಡ. ಹಾಲುಮತದ ಕುರುಬ ಜನಾಂಗಕ್ಕೆ ಸೇರಿದವರು. ಇವರು ವೃತ್ತಿಯಲ್ಲಿ ವ್ಯವಸಾಯಗಾರರಾಗಿದ್ದು, ಪ್ರವೃತ್ತಿಯಲ್ಲಿ ಜನಪದ ಕಲಾವಿದರು. ಕರಪಾಲದ ಜೊತೆಗೆ ಭಜನೆ ಹಾಡುಗಳನ್ನು ಕೂಡ ಹೇಳುತ್ತಾರೆ.

ಇವರಿಗೆ ಗುರು ತಿಪಟೂರು ತಾಲ್ಲೂಕಿನ ಕರಪಾಲ ಸಿದ್ದಯ್ಯನವರು. ಇವರಿಂದ ಕರಪಾಲ ಕಲಿತರಂತೆ. ಕಾಮನಾಯಕನಹಳ್ಳಿಯ ನಂಜಪ್ಪನವರಿಂದ ಹಾರ್ಮೋನಿಯಂ ಕಲಿತಿದ್ದಾರೆ. ಕರಪಾಲ ಮೇಳದಲ್ಲಿ ಇವರು ಮುಖ್ಯವಾಗಿ ಕಾಡುಸಿದ್ದಮ್ಮ, ವಿಧಿವಿಲಾಸ, ಸತ್ಯ ಮಹಾನ್‌ದಾತ, ರಾಜಾವಿಕ್ರಮ, ನಲ್ಲತಂಗದೇವಿ, ರುದ್ರಶೇಖರ ಮಹಾರಾಜ ಮುಂತಾದ ಕಥೆಗಳನ್ನ ಮಾಡುತ್ತಾರೆ.

ಇವರು ಆಕಾಶವಾಣಿಯ ಕಲಾವಿದರು. ಜೊತೆಗೆ ಚನ್ನರಾಯಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ ಕಾರ್ಯಕ್ರಮಗಳು, ಸುವರ್ಣ ಕರ್ನಾಟಕ ದಿಬ್ಬಣ, ಗಣೇಶೋತ್ಸವ ಮುಂತಾದ ಕಾರ್ಯಕ್ರಮಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಹಾಸನ, ಮಂಡ್ಯ,

ತುಮಕೂರು, ಬೇಲೂರು ಮುಂತಾದ ಊರುಗಳಲ್ಲಿಯೂ ಕರಪಾಲ ಮೇಳ ನಡೆಸಿದ್ದಾರೆ. ಬೆಂಗಳೂರಿನಲ್ಲಿ ನಡೆದ ಕನಕೋತ್ಸವ, ಮೈಸೂರಿನಲ್ಲಿ ನಡೆದ ಯುವಜನ ಮೇಳಗಳಲ್ಲಿ ಕರಪಾಲ ಪ್ರದರ್ಶನ ನೀಡಿದ್ದಾರೆ. ಇವರ ಜೊತೆ ದೊಡ್ಡೇಗೌಡರು ಮತ್ತು ಚಿಕ್ಕೇಗೌಡರು ಸಹಕಲಾವಿದರಾಗಿ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ.

ಮರಿಗೌಡ,
ಕಾಮನಾಯಕನಹಳ್ಳಿ, ಬಾಗೂರು ಹೋಬಳಿ,
ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.

## ಜವರಯ್ಯ

ತಮಟೆ ಜವರಯ್ಯ ಎಂದೇ ಖ್ಯಾತಿ ಪಡೆದಿರುವ ಇವರು ಹಾಸನ ಜಿಲ್ಲೆ, ಅರಕಲಗೂಡು ತಾಲೂಕಿನ ದೊಡ್ಡಮಗ್ಗೆ ಹೋಬಳಿ ದೊಡ್ಡಹಳ್ಳಿ ಗ್ರಾಮದವರು. ತಂದೆ ನರಸಯ್ಯ. ಇವರ ಜನನ ೦೪-೦೫-೧೯೩೭ ಸುಮಾರು ೫೫ ವರ್ಷಗಳಿಂದ ತಮಟೆ ಬಾರಿಸುತ್ತಾ ಬಂದಿದ್ದಾರೆ.

ಇವರು ಯಾರಿಂದಲೂ ಈ ಕಲೆಯನ್ನು ಕಲಿತವರಲ್ಲ. ತಮ್ಮ ಸ್ವಂತ ಆಸಕ್ತಿಯಿಂದ ಸುಮಾರು ೧೫ ವರ್ಷ ಹುಡುಗನಾಗಿದ್ದಾಗ ಬೇರೆಯುವರು ಬಾರಿಸುತ್ತಿದ್ದುದನ್ನು ನೋಡಿ ಕಲಿತವರು. ಇವರು ತಮ್ಮಟೆಯ ಹತ್ತಾರು ಮಟ್ಟುಗಳನ್ನು (ವರಸೆಗಳನ್ನು) ನಿರಂತರವಾಗಿ ಬಾರಿಸುತ್ತಾ ಜನರ ಮನಸ್ಸನ್ನು ಸೂರೆಗೊಳ್ಳುತ್ತಾ ಹೋಗುತ್ತಾರೆ. ಇವರು ತಮಟೆಯನ್ನು ಬಾರಿಸುವಾಗ ಬರುವ ಕಣಿ ಕಣಿ ಶಬ್ದವಂತು ಕಿವಿಗೆ ಗಡಚಿಕ್ಕುತ್ತದೆ. ಇವರು ತಮಟೆಯನ್ನು ಬಾರಿಸುವುದಷ್ಟೇ ಅಲ್ಲದೆ, ತಮಟೆಯನ್ನು ಸ್ವತಃ ತಾವೇ ತಯಾರು ಮಾಡಿಕೊಳ್ಳುತ್ತಾರೆ. ಅದರ ಚರ್ಮ ಹದ ಮಾಡುವುದರಲ್ಲಿ ತುಂಬಾ ನಿಪುಣರು, ತಮಟೆಯ ಹುರಿಗಳನ್ನು ಬಿಗಿಯುವುದು ಇವರ ಪರಿಣತಿಯನ್ನು ಎತ್ತಿತೋರಿಸುತ್ತದೆ. ಯಾವ ರೀತಿ ಹುರಿ ಬಿಗಿಮಾಡಿದರೆ ಯಾವ ಯಾವ ರೀತಿ ಶಬ್ದ ಬರುತ್ತದೆಂಬುದನ್ನು ಸವಿವರವಾಗಿ ತಿಳಿಸುವುದಂತೂ ಯಾವ ತಾಂತ್ರಿಕ ತರಬೇತಿ ಪಡೆದವರಿಗಿಂತ ಮಿಗಿಲಾಗಿರುತ್ತದೆ.

ಇವರು ಉಯಲು ತಮಟೆ, ಅಡ್ಡ ತಮಟೆ ಎರಡನ್ನು ಬಾರಿಸುತ್ತಾರೆ. ಜೊತೆಗೆ ಹೊಗಳಿಕೆಯ ಪದಗಳನ್ನು ಹಾಡುವುದು, ಅದರ ಗತ್ತಿಗೆ ತಕ್ಕಹಾಗೆ ಕಾಲಾಕುವುದಂತೂ ವಿಸ್ಮಯವನ್ನುಂಟು ಮಾಡುತ್ತದೆ. ಜೊತೆಗೆ ಇವರ ಮೀಸೆ ಎಲ್ಲವನ್ನು ಆಕರ್ಷಿಸುವುದರೊಂದಿಗೆ ಕೆಲವರು ಮೀಸೆ ಜವರಯ್ಯ ಎಂದೂ ಕರೆಯುವುದುಂಟು.

ಈತ ತನ್ನ ಗ್ರಾಮದಲ್ಲಿ ಮಾತ್ರವಲ್ಲದೆ ಅರಕಲಗೂಡು ತಾಲ್ಲೂಕಿನ ಹತ್ತಾರು ಗ್ರಾಮಗಳಲ್ಲಿ ತಮಟೆ ಬಾರಿಸುತ್ತಾ ಜೀವನ ಸಾಗಿಸುತ್ತಿದ್ದಾರೆ. ಇವರಿಗೆ ಹೆಚ್ಚು ಜಮೀನುಕೂಡ ಇಲ್ಲ, ಕೂಲಿ ಮಾಡಿ ಬದುಕುವ ಈತ, ತನಗೆ ಎಷ್ಟೇ ಕಷ್ಟವಿರಲಿ ಹಣಕೊಡಲಿ, ಕೊಡದಿರಲಿ ತನ್ನ ಕಾಯಕವನ್ನು ನಿರಂತರವಾಗಿ ಮಾಡುತ್ತಾ ಬರುತ್ತಿದ್ದಾರೆ.

ಜವರಯ್ಯ
ದೊಡ್ಡಹಳ್ಳಿ, ಅಗ್ರಹಾರ ಅಂಚೆ, ದೊಡ್ಡಮಗ್ಗೆ ಹೋಬಳಿ,
ಅರಕಲಗೂಡು ತಾಲೂಕು, ಹಾಸನ ಜಿಲ್ಲೆ.

## ಹುಚ್ಚಯ್ಯ

ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಹಳ್ಳಿ ಮೈಸೂರು ಹೋಬಳಿಯ ನಗರನಹಳ್ಳಿಯುವರು ಹುಚ್ಚಯ್ಯ. ವಯಸ್ಸು ಸುಮಾರು ೫೫ ವರ್ಷ, ತಂದೆ ಮರಿಯಯ್ಯ ಹರಿಜನ ಬಲಗೈ ಜನಾಂಗಕ್ಕೆ ಸೇರಿದವರು, ಇವರು ಜನಪದ ಹಾಡುಗಳು ಭಜನೆ ಹಾಡುಗಳನ್ನು ಹೇಳುತ್ತಾರೆ, ಮೂಲತಃ ಕೃಷಿ ಕೆಲಸ, ಜೊತೆಗೆ ಕೂಲಿ ಕೆಲಸ. ಹವ್ಯಾಸವಾಗಿ ಈ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ.

ಹುಚ್ಚಯ್ಯನವರು ತನ್ನ ಹೆಂಡತಿ ಮಕ್ಕಳ ಸಮೇತವಾಗಿ ಏಕತಾರಿಯನ್ನು ಹಿಡಿದು ಕುಳಿತರೆ ತತ್ವ ಪದಗಳು, ಜನಪದ ತ್ರಿಪದಿಗಳು ಪುಂಖಾನುಪುಂಖವಾಗಿ ಹೊರ ಹೊಮ್ಮುತ್ತಿರುತ್ತವೆ. ಹಣೆಯಲ್ಲಿ ವಿಭೂತಿ ಧರಿಸುತ್ತಾರೆ. ಬಲಗೈಯಲ್ಲಿ ಏಕತಾರಿ ಎಡಗೈಯಲ್ಲಿ ತಾಳ ಇರುತ್ತದೆ. ಇವರ ಹಾಡಿಗೆ ಹೆಂಡತಿ, ಮಕ್ಕಳು ರಾಗ ಸೇರಿಸುತ್ತಾ ಹಾಡುತ್ತಾ ಹೋಗುವುದನ್ನು ಕಂಡರೆ ಇವರದೊಂದು ವಿಶಿಷ್ಟವಾದ ಸಂಸಾರ ಎಂದೆನಿಸುತ್ತದೆ. ಇಡೀ ಕುಟುಂಬವನ್ನು ಕಲಾವಂತರಾಗಿ ಮಾಡಿಕೊಂಡು ಜನಪದ ಕಲೆಯನ್ನು ಮುನ್ನಡೆಸಿಕೊಂಡು ಹೋಗುತ್ತಿರುವುದು ಪ್ರಶಂಸನೀಯವಾದುದೇ ಆಗಿದೆ.

ಹುಚ್ಚಯ್ಯ ತನ್ನ ಗ್ರಾಮದ ಇತರೆಯವರನ್ನೂ ಕೂಡ ತನ್ನ ವಲಯಕ್ಕೆ ಸೇರಿಸಿಕೊಂಡಿದ್ದು, ಅವರೂ ಕೂಡ ಇವರೊಂದಿಗೆ ಸೇರಿಕೊಳ್ಳುತ್ತಾರೆ. ಹಬ್ಬ-ಹರಿದಿನಗಳಲ್ಲಿ ವಿಶೇಷ ಪೂಜೆಗಳಿದ್ದ ಸಂದರ್ಭದಲ್ಲಿ ಇವರ ಹಾಡುಗಾರಿಕೆಗೆ ತುಂಬಾ ಮಹತ್ವ ಇರುತ್ತದೆ. ಇವರು ತನ್ನ ಊರಿನಲ್ಲಿ ಮಾತ್ರವಲ್ಲದೆ ಸುತ್ತ ಮುತ್ತಲ ಹಳ್ಳಿಗಳಲ್ಲಿಯೂ ಕಾರ್ಯಕ್ರಮಗಳನ್ನು ನೀಡಿದ್ದಾರೆ.

**ಹುಚ್ಚಯ್ಯ, ನಗರಹಳ್ಳಿ, ಹಳ್ಳಿ ಮೈಸೂರು ಹೋಬಳಿ,**
**ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.**

# ನಂಜಾಬೋವಿ

ಗಾರುಡಿ (ಗಾಡಿಗ) ಕುಣಿತ ದಕ್ಷಿಣ ಕರ್ನಾಟಕದಲ್ಲಿ ಅಪರೂಪವಾಗಿರುವಂತಹದ್ದು. ಇದೊಂದು ಜನಪದ ಕುಣಿತವಾಗಿದ್ದು 'ಗಾರುಡಿಗನ ಕುಣಿತ' ಎಂದೂ ಕರೆಯುವುದುಂಟು. ಕೋಲಾರ ಜಿಲ್ಲೆಯಲ್ಲಿ ಈ ಕಲೆಗೆ 'ಮಾನು ಬೊಂಬಲು' ಎಂದೂ, ಮಲೆನಾಡಿನ ಕಡೆ 'ತಟ್ಟಿರಾಯನ ಕುಣಿತ' ಎಂದೂ ಕರೆಯುತ್ತಾರೆ. ಗಾರುಡಿಯಲ್ಲಿ ಹೆಣ್ಣು ಬೊಂಬೆ, ಗಂಡು ಬೊಂಬೆಗಳು ಇರುತ್ತವೆ. ಇವುಗಳನ್ನು ಹತ್ತು ಹದಿನೈದು ಅಡಿಯ ಬಿದಿರಿನ ತಡಿಕೆಯಿಂದ ಮಾಡಿ, ಗಂಡು ಬೊಂಬೆಗೆ ಗಂಡಸಿನ ವಸ್ತ್ರಗಳನ್ನು, ಹೆಣ್ಣು ಬೊಂಬೆಗೆ ಹೆಂಗಸಿನ ವಸ್ತ್ರಗಳನ್ನು ತೊಡಿಸಿರುತ್ತಾರೆ. ಬೊಂಬೆಗಳಿಗೆ ಕೆಂಪು ಬಣ್ಣವನ್ನು ಬಳಿದಿರುತ್ತಾರೆ. ಸೊಂಟದ ತಳಭಾಗಕ್ಕೆ ಬಿದಿರಿನ ತಟ್ಟಿಯನ್ನು ವೃತ್ತಾಕಾರದಲ್ಲಿ ಭಾಗಿಸಿ ಅದಕ್ಕೆ ಲಂಗದ ಮಾದರಿಯ ಬಟ್ಟೆಯನ್ನು ಸುತ್ತಿರುತ್ತಾರೆ. ಬೊಂಬೆಯ ಒಳಗಡೆ ಸೇರಿಕೊಂಡ ಕಲಾವಿದರು ವಾದ್ಯಗಳ ಗತ್ತಿಗೆ ತಕ್ಕ ಹಾಗೆ ಕುಣಿಯುತ್ತಾರೆ. ಹಬ್ಬ-ಹರಿದಿನಗಳಲ್ಲಿ, ವಿಶೇಷವಾಗಿ ಸಂಕ್ರಾಂತಿಯ ಸಂದರ್ಭದಲ್ಲಿ, ದೇವರ ಉತ್ಸವ, ಜಾತ್ರೆಗಳಲ್ಲಿ ಈ ಗಾರುಡಿ ಪ್ರದರ್ಶನವಿರುತ್ತದೆ. ಇತ್ತೀಚಗೆ ಕಲಾಮೇಳಗಳಲ್ಲಿಯೂ ಪ್ರದರ್ಶನ ಇರುತ್ತದೆ. ಈ ಕಲೆ ಹಾಸನ ಜಿಲ್ಲೆಯಲ್ಲಿ ಆನೆ ಕೆರೆಯಲ್ಲಿ ಮಾತ್ರ ಇದೆ.

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಆನೆಕೆರೆ ಗ್ರಾಮದವರು ಶ್ರೀನಂಜಾಬೋವಿ. ವಯಸ್ಸು ೫೫ ವರ್ಷ, ತಂದೆ ಮಾಯಾಬೋವಿ, ತಾಯಿ ನಂಜಮ್ಮ. ಗಂಗಾಮತ ಜಾತಿಗೆ ಸೇರಿದವರು. ಇವರಿಗೆ ಚಿಕ್ಕಂದಿನಿಂದಲೂ ಪೂರ್ವಜರಿಂದ ಬಳುವಳಿಯಾಗಿ ಈ ಕಲೆ ಬಂದಿದೆ. ಊರಿನಲ್ಲಿ ನಡೆಯುವ ಹಬ್ಬ-ಹರಿದಿನ, ಜಾತ್ರೆ, ಉತ್ಸವಗಳಲ್ಲಿ ಗಾರುಡಿ ಬೊಂಬೆ ಕುಣಿತ ಕಡ್ಡಾಯವಾಗಿ ಇರುತ್ತದೆ. ಈ ಕಲೆಯ ಜೊತೆಗೆ ಇವರು ಸೋಮನನ್ನು ಹೊತ್ತು ಕುಣಿಯುತ್ತಾರೆ. ಈ ಎರಡು ಕಲೆಯಲ್ಲಿಯೂ

ಪ್ರಸಿದ್ಧಿಯನ್ನು ಪಡೆದು ಚನ್ನರಾಯಪಟ್ಟಣ ತಾಲೂಕಿಗೆ ಮಾತ್ರವಲ್ಲದೆ ಇಡೀ ಜಿಲ್ಲೆಗೆ ಹೆಸರು ವಾಸಿಯಾಗಿರುವ ಕಲಾವಿದರಾಗಿದ್ದಾರೆ. ಇವರೊಂದಿಗೆ ಕಾಳಪ್ಪ, ರಾಜಣ್ಣ, ಮಾಯಾಬೋವಿ, ಅಣ್ಣಯ್ಯ ಮುಂತಾದವರು ಭಾಗವಹಿಸುತ್ತಾರೆ.

ಇವರು ೧೯೯೯ರಲ್ಲಿ ಹಾಸನದಲ್ಲಿ ನಡೆದ ಜನಪದ ಕಲಾಮೇಳ, ಬೆಂಗಳೂರಿನಲ್ಲಿ ನಡೆದ ಕಲಾ ಮೇಳ, ದಸರಾ ಉತ್ಸವ ಹಾಗು ಗೊರೂರಿನಲ್ಲಿ ನಡೆದ ಜಾತ್ರಾ ಉತ್ಸವಗಳಲ್ಲಿ ಭಾಗವಹಿಸಿ ಪ್ರದರ್ಶನಗಳನ್ನು ನೀಡಿದ್ದಾರೆ.

ನಂಜಾಬೋವಿ,
ಆನೆಕೆರೆ, ದಂಡಿಗನಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲೂಕು, ಹಾಸನ ಜಿಲ್ಲೆ.

## ಗುಂಡೂರಾಜ

ಗೊಂಬೆಯಾಟ ಬಯಲಾಟದ ಒಂದು ವಿಧ. ಬಯಲಾಟದಲ್ಲಿ ನಟರಿದ್ದರೆ ಇಲ್ಲಿ ಗೊಂಬೆಗಳೇ ನಟರು. ಗೊಂಬೆಯಾಟದಲ್ಲಿ ಎರಡು ಬಗೆಗಳಿವೆ. ಒಂದು ಸೂತ್ರದ ಗೊಂಬೆಯಾಟ ಎರಡನೆಯದು ತೊಗಲುಗೊಂಬೆಯಾಟ. ಬಯಲಾಟದ ಹಾಗೆಯೇ ಇಲ್ಲಿ ಗೊಂಬೆಗಳು ಪ್ರಾರ್ಥನೆ ಮಾಡುವುದರ ಮೂಲಕ ಭಾಗವತನನ್ನು, ಜನರನ್ನು ಹರಸುತ್ತವೆ. ಒಂದು ಕಾಲಕ್ಕೆ ಸೂತ್ರದ ಗೊಂಬೆಯಾಟ ಮೇಲ್ವರ್ಗದವರ ಮನರಂಜನೆಯಾಗಿದ್ದರೆ, ತೊಗಲುಗೊಂಬೆಯಾಟ ಕೆಳವರ್ಗದವರ ಮನರಂಜನೆಯಾಗಿತ್ತು. ತೊಗಲು ಗೊಂಬೆಯಾಟವನ್ನು ಕಿಳ್ಳೇ (ಸಿಳ್ಳೆ) ಕ್ಯಾತರು ನಡೆಸುತ್ತಾರೆ. ಈ ಪ್ರದರ್ಶನದಲ್ಲಿ ಇಡೀ ಕುಟುಂಬವೇ ಭಾಗಿಯಾಗಿ ನಡೆಸುತ್ತಾರೆ. ಈ ಆಟ ಇಂದಿಗೂ ಅಲ್ಲಲ್ಲಿ ಉಳಿದುಕೊಂಡು ಬಂದಿದೆ. ಇದಕ್ಕೆ ಕ್ರಿಯಾಶೀಲವಾದ ಕಲಾವಿದರು ಹಾಗು ಉತ್ಸಾಹಭರಿತ ಪ್ರೇಕ್ಷಕರು ಇರುವುದೇ ಆಗಿದೆ.

ಹಾಸನ ಜಿಲ್ಲೆ ಹಾಗು ತಾಲೂಕಿನ, ಕಸಬಾ ಹೋಬಳಿಯ ಹೂವಿನಹಳ್ಳಿ ಕಾವಲಿನ ಗುಂಡೂರಾಜ ಹಿಮ್ಮೇಳ, ಗೊಂಬೆ ತಯಾರಿಕೆ, ಗೊಂಬೆಕುಣಿಸುವುದರಲ್ಲಿ ಎತ್ತಿದ ಕೈ. ಇವರ ತಂದೆ ಗೊಂಬೆ ರಾಮಯ್ಯ, ತಾಯಿ ಹನುಮಮ್ಮ. ಇವರು ತೊಗಲಿನ ಗೊಂಬೆಗಳಿಗೆ ಜೀವ ತುಂಬುವುದರಲ್ಲಿ ಪ್ರಮುಖರು. ಇವರ ವಂಶಸ್ಥರು ಹಲವಾರು ತಲೆಮಾರುಗಳಿಂದ ತೊಗಲು ಗೊಂಬೆಯಾಟವನ್ನು ನಡೆಸಿಕೊಂಡು ಬರುತ್ತಿದ್ದು ಇವರು ತಮ್ಮ ಐದನೆಯ ವಯಸ್ಸಿನಿಂದಲೇ ತಂದೆಯ ಜೊತೆ ಗೊಂಬೆಯಾಟದಲ್ಲಿ ತೊಡಗಿಸಿಕೊಂಡು ವರ್ಷಕ್ಕೆ ೧೫೦ ರಿಂದ ೨೦೦ ಪ್ರದರ್ಶನಗಳನ್ನು ನೀಡುತ್ತಾರೆ. ಇದುವರೆಗೂ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಗೊಂಬೆಯಾಟ ಪ್ರದರ್ಶನಗಳನ್ನು ನೀಡಿದ್ದಾರೆ.

ಹದಿನೆಂಟನೇ ಶತಮಾನದಿಂದ ಈಚಿನವರೆಗೆ ತಯಾರಿಸಿದ ಸುಮಾರು ಒಂದು ಸಾವಿರಕ್ಕಿಂತಲೂ ಹೆಚ್ಚು ತೊಗಲುಗೊಂಬೆಗಳು ಗುಂಡೂರಾಜ ಅವರ ಬಳಿ ಇವೆ. ಗೊಂಬೆಗಳ ಮೇಲೆ ಅವುಗಳನ್ನು ತಯಾರಿಸಿದ ಇಸವಿ ಕೂಡ ದಾಖಲಾಗಿದೆ. ಸ್ವತಃ ಗೊಂಬೆಗಳನ್ನು ತಯಾರು ಮಾಡುವ ಇವರು ಕೇವಲ ಪೌರಾಣಿಕ ಆಟಗಳ ಗೊಂಬೆಗಳಲ್ಲದೆ, ಆಧುನಿಕತೆಗೆ ತಕ್ಕಂತಹ, ಸರ್ಕಾರದ ಯೋಜನೆಗಳಿಗನುಗುಣವಾಗಿ ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವಂತಹ ಗೊಂಬೆಗಳನ್ನು ತಯಾರಿಸುತ್ತಿದ್ದರು. ಈಗ ಮೇಕೆ, ಕುರಿ ಚರ್ಮದಿಂದ ತಯಾರಿಸುತ್ತಾರೆ. ಹಿಂದೆ ಕೆಂಪು ಬಣ್ಣವನ್ನು ಮದರಂಗಿ ಗಿಡದಿಂದ ಹಾಗು ಕಪ್ಪು ಬಣ್ಣವನ್ನು ದೀಪದ ಕಿಟ್ಟದಿಂದ ತಯಾರು ಮಾಡಿಕೊಳ್ಳುತ್ತಿದ್ದರು. ಈಗ ಆಧುನಿಕ ಬಣ್ಣಗಳನ್ನೇ ಬಳಸುತ್ತಾ ನಿರ್ಜೀವ ತೊಗಲಿಗೆ ಬಣ್ಣದ ಮೂಲಕ ಆಕಾರ ಕೊಡುತ್ತಾ ಜೀವ ತುಂಬುತ್ತಾರೆ.

ಗುಂಡೂರಾಜ ತಯಾರಿಸಿದ ಗೊಂಬೆಗಳು ಕೇವಲ ಇವರ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗಿ ಉಳಿದಿಲ್ಲ. ಅಮೆರಿಕಾ, ಇಟಲಿ, ಇಂಗ್ಲೆಂಡ್, ಆಫ್ರಿಕಾ, ಕೊರಿಯಾ ದೇಶಗಳಿಗೂ ಪಯಣಿಸಿವೆ. ಇವರ ಊರು ಪ್ರವಾಸಿ ತಾಣವಾದ ಬೇಲೂರು ರಸ್ತೆಯಲ್ಲಿರುವುದರಿಂದ ಪ್ರವಾಸಿಗರು ಗೊಂಬೆಗಳನ್ನು ಕೊಳ್ಳಲು ಅನುಕೂಲವಾಗಿದೆ. ಕೆಲವು ವಿದೇಶಿಗರು ನಿನ್ನನ್ನು ನಮ್ಮ ದೇಶಗಳಿಗೆ ಕರೆದೊಯ್ಯುತ್ತೇವೆಂದು ಮೋಸಮಾಡಿರುವುದುಂಟು. ಅಮೆರಿಕಾದ ಏಲಿಸ್ಟನ್ ಎಂಬವರು ನಿನ್ನನ್ನು ಅಮೆರಿಕಾಕ್ಕೆ ಕರೆದೊಯ್ಯುತ್ತೇನೆಂದು ನಂಬಿಸಿ ಏಳುನೂರು ಗೊಂಬೆಗಳನ್ನು ಉಚಿತವಾಗಿ ಪಡೆದುಕೊಂಡು ಪರಾರಿಯಾದವರು ಇದುವರೆಗೂ ಪತ್ತೆ ಇಲ್ಲ. ಇದನ್ನು ಹೇಳುವಾಗ ಗುಂಡೂರಾಜ ಅವರ ಕಣ್ಣಲ್ಲಿ ನೀರಾಡತ್ತಿತ್ತು.

ಗುಂಡೂರಾಜ ಕೇವಲ ಗೊಂಬೆ ತಯಾರಿಕೆಯಲ್ಲಷ್ಟೇ ನಿಪುಣರಲ್ಲ, ತಮ್ಮದೇ ಗೊಂಬೆಗಳನ್ನು ಆಟವಾಡಿಸುವುದರಲ್ಲಿ ಇವರು ನಿಸ್ಸೀಮರು. ಭಾರತ ಸರ್ಕಾರದ ಸಂಗೀತ ಮತ್ತು ನಾಟಕ ಪ್ರಸಾರ ಸಚಿವಾಲಯದ ವತಿಯಿಂದ ಕನ್ನಡ ನಾಡಿನಲ್ಲಷ್ಟೇ ಅಲ್ಲದೆ ಕೇರಳ, ಗೋವಾ, ದೆಹಲಿ, ಹರಿಯಾಣ, ತಮಿಳುನಾಡು ಮೊದಲಾದ ಕಡೆಗಳಲ್ಲೆಲ್ಲಾ ಪ್ರದರ್ಶನ ನಡೆಸಿದ್ದಾರೆ. ಇವರು ಎರಡು ವರ್ಷಕ್ಕೊಮ್ಮೆ ಸಚಿವಾಲಯ ನಡೆಸುವ ಸಂದರ್ಶನದಲ್ಲಿ ಎಂಟು ವರ್ಷಗಳಿಂದ ಸತತವಾಗಿ 'ಎ' ಗ್ರೇಡ್ ಪಡೆದಿದ್ದಾರೆ. ದಕ್ಷಿಣ ವಲಯ ರೋಟರಿ ಸಂಸ್ಥೆಯವರು ದಕ್ಷಿಣ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಇವರಿಂದ ಕೊಡಿಸಿದ್ದಾರೆ. ಹಿಂದಿನಿಂದ ಜಹಗೀರುಗಳಾಗಿ ಬಂದಿರುವ ಐವತ್ತೆಂಟು ಹಳ್ಳಿಗಳಲ್ಲಿ ಪ್ರತಿ ವರ್ಷವೂ ತಪ್ಪದೇ ಪ್ರದರ್ಶನಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅದಕ್ಕಾಗಿ ಸ್ಥಳೀಯರಿಂದ ಹಣ ಪಡೆಯುವುದಿಲ್ಲ. ರಾಗಿ, ಭತ್ತ ತೆಗೆದುಕೊಳ್ಳುತ್ತಾರೆ.

ಇವರು ನಡೆಸುವ ಗೊಂಬೆಯಾಟಗಳೆಂದರೆ ಪೌರಾಣಿಕ ಕಥೆಗಳಾದ ರಾಮಾಯಣ, ಮಹಾಭಾರತ ಮತ್ತು ಭಾಗವತಗಳು. ಈ ಕಥೆಗಳನ್ನು ಪ್ರಸಂಗಕ್ಕನುಗುಣವಾಗಿ ಎಪ್ಪತ್ತು ಕಥೆಗಳನ್ನಾಗಿ ವಿಂಗಡಿಸಿಕೊಂಡಿದ್ದಾರೆ. ಇವರು ಒಂದೇ ದಿನದಲ್ಲಿ ಎರಡು–ಮೂರು ಪ್ರಸಂಗ ನೀಡಿರುವುದೂ ಉಂಟು. ಸಂಪೂರ್ಣ ರಾಮಾಯಣದ ಕಥೆಯಾದರೆ ಒಂಭತ್ತು ರಾತ್ರಿ, ಪೂರ್ಣ ಮಹಾಭಾರತದ ಕಥೆಯಾದರೆ ಹದಿನೆಂಟು ರಾತ್ರಿ, ಪೂರ್ಣ ಭಾಗವತ ಕಥೆಯಾದರೆ ಹತ್ತು ರಾತ್ರಿ ನಡೆಸಿಕೊಡುತ್ತಾರೆ.

ಇವರು ಜನಪದ ಕಲಾವಿದರಷ್ಟೇ ಅಲ್ಲ. ಶಾಸ್ತ್ರೀಯ ಸಂಗೀತ, ಹಾರ್ಮೋನಿಯಂ ವಾದನ ಹಾಗು ಹರಿಕಥೆ ಸಂಕೀರ್ತನೆಗಳನ್ನು ಕಲಿತಿರುವ ಪ್ರತಿಭಾವಂತ ಕಲಾವಿದ. ಪೌರಾಣಿಕ ನಾಟಕದ ನಟ, ನಿರ್ದೇಶಕ, ಹಲವಾರು ದೂರದರ್ಶನ ಕಿರುಚಿತ್ರಗಳಲ್ಲಿ ನಟ, ಸಹ ನಿರ್ದೇಶಕ ಕೂಡ. ವಾರ್ತಾ ಇಲಾಖೆಯ ಸಾಕ್ಷ್ಯ ಚಿತ್ರಣಗಳಲ್ಲಿ ನಟರಾಗಿ ಕಾಣಿಸಿಕೊಂಡಿದ್ದಾರೆ. ದೂರದರ್ಶನದಿಂದ ಪ್ರಸಾರವಾಗುತ್ತಿದ್ದ "ಸಿರಿಗಂಧ" ಕಾರ್ಯಕ್ರಮದಲ್ಲಿ ಇವರ ಬಗೆಗೆ ಸಾಕ್ಷ್ಯ ಚಿತ್ರ ಪ್ರಸಾರವಾಗಿದೆ. ಇವರ ಕಲಾಸೇವೆಯನ್ನು ಗುರುತಿಸಿ ನಾಡಿನ ಹತ್ತು ಹಲವರು ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ೨೦೦೩ನೇ ಸಾಲಿನ ಜನಪದ ಕಲಾವಿದರ ಪ್ರಶಸ್ತಿಯು ಜಾನಪದ ಪ್ರವರ್ತಕ ಎಂಬ ಹೆಸರಿನಲ್ಲಿ ದೊರಕಿದೆ. ಇವರ ಮಕ್ಕಳೂ ಕೂಡ ಮೂರನೇ ವಯಸ್ಸಿನಿಂದಲೇ ಪ್ರದರ್ಶನಕ್ಕೆ ಸಹಕಾರ ನೀಡುತ್ತಾ ತಂದೆಯ ಪರಂಪರೆಯನ್ನು ಮುಂದುವರೆಸುವ ನಿಟ್ಟಿನಲ್ಲಿ ಪ್ರಯತ್ನ ಶೀಲರಾಗಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

**ಗಂಡೂರಾಜ,**
**ಹೂವಿನಹಳ್ಳಿ ಕಾವಲು, ಕುಪ್ಪಳ್ಳಿ ಅಂಚೆ,**
**ಕಸಬಾ ಹೋಬಳಿ, ತಾ : ಜಿ : ಹಾಸನ.**


# ಕುಮಾರಯ್ಯ

ಚಿಟ್ಟಿಮೇಳ ಕಲಾವಿದರಾದ ಶ್ರೀ ಕುಮಾರಯ್ಯ ಹಾಸನ ಜಿಲ್ಲೆಯಾದ್ಯಂತ ಹೆಸರುವಾಸಿಯಾಗಿದ್ದಾರೆ. ಈತ ಕೊರಮ ಜಾತಿಗೆ ಸೇರಿದವರು. ತಮ್ಮ ಕುಲ ಕಸುಬನ್ನು ಮಾಡುವುದರೊಂದಿಗೆ ಕೂಲಿ ಕೆಲಸವನ್ನು ಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ. ಯಾವುದೇ ಕೃಷಿ ಭೂಮಿಯನ್ನು ಹೊಂದಿಲ್ಲ. ಕಲೆಯನ್ನೇ ಆಸ್ತಿಯನ್ನಾಗಿ ಮಾಡಿಕೊಂಡು ಬದುಕುತ್ತಿರುವವರು. ಇವರಿಗೆ ಚಿಟ್ಟಿಮೇಳ ಕಲೆ ವಂಶಪಾರಂಪರ್ಯವಾಗಿ ಬಂದಿದೆ. ಇವರ ತಾತ ಸಿದ್ದರಾಮಯ್ಯ ಈ ಕಲೆಯಲ್ಲಿ ಪ್ರವೀಣರಾಗಿದ್ದರು. ಇವರಿಂದ ಕಲಿತ ಇವರ ತಂದೆ ಬಸವಯ್ಯನವರೂ ಕೂಡ ಈ ಕಲೆಯಲ್ಲಿ ನಿಸ್ಸೀಮರೇ. ಆದರೆ ಕುಮಾರಯ್ಯನವರಿಗೆ ಇವರಿಬ್ಬರಿಂದಲೂ ತರಬೇತಿ ದೊರಕಿದೆ. ಇವರಿಂದ ಕಲಿತು ಕುಮಾರಯ್ಯ ತಮ್ಮ ತಂದೆಯನ್ನು ಮೀರಿಸಿ ತಮ್ಮ ತಂಡದಲ್ಲಿ ತಂದೆಯನ್ನು ಕರೆದುಕೊಂಡು ಹೊರರಾಜ್ಯಗಳಲ್ಲಿ, ಜಿಲ್ಲೆಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಚಿಟ್ಟಿಮೇಳ ತಂಡದಲ್ಲಿ ಕುಮಾರಯ್ಯನವರು ಮೌರಿಯನ್ನು ನುಡಿಸುತ್ತಾರೆ. ಅಜ್ಜನೂ ಕೂಡ ಮೌರಿಯನ್ನೇ ಊದುತ್ತಿದ್ದರಂತೆ. ತಂದೆ ಮಾತ್ರ ಶೃತಿಯನ್ನು ಹಿಡಿಯುತ್ತಿದ್ದರು. ಇವರ ಚಿಕ್ಕಪ್ಪನವರುಗಳು ಕೂಡ ಈ ಕಲೆಯಲ್ಲಿ ಪರಿಣಿತರಾಗಿದ್ದಾರೆ.

ಕುಮಾರಯ್ಯ ೧೫ ವರ್ಷದವರಿದ್ದಾಗಲೆ ಈ ಕಲಾ ವೃತ್ತಿಗೆ ಕೈ ಹಾಕಿದವರು. ಸುಮಾರು ೩೦ ವರ್ಷಗಳಿಂದಲೂ ಚಿಟ್ಟಿ ಮೇಳವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರು ಪ್ರಮುಖವಾಗಿ ಹಳ್ಳಿಸೇವೆ ಮಾಡಿಕೊಂಡು ಬಂದವರು. ಜೊತೆಗೆ ಹಾಸನ ಜಿಲ್ಲೆಯಾದ್ಯಂತ ತಮ್ಮ ಕಲಾ ಸೇವೆಯನ್ನು ಮಾಡಿಕೊಂಡು ಬಂದವರು. ದೇವರ ಉತ್ಸವ, ಗಣೇಶನ ಮೆರವಣಿಗೆ, ಮದುವೆ, ರಥೋತ್ಸವ, ಸಂಘ-ಸಂಸ್ಥೆಗಳ ಕಾರ್ಯಕ್ರಮ, ಸರ್ಕಾರಿ ಇಲಾಖಾ ಕಾರ್ಯಕ್ರಮಗಳಲ್ಲಿ ತಮ್ಮ ಕಲಾ ಸೇವೆಯನ್ನು ಮಾಡಿದ್ದಾರೆ.

ಇವರ ವಿಶೇಷ ಕಾರ್ಯಕ್ರಮಗಳೆಂದರೆ ಮೈಸೂರಿನ ರಂಗಾಯಣದಲ್ಲಿ ಎರಡು ಬಾರಿ ಚಿಟ್ಟಿಮೇಳ ನಡೆಸಿದ್ದಾರೆ. ಮೈಸೂರಿನ ದಸರಾ ಉತ್ಸವದಲ್ಲಿ ಮೆರವಣಿಗೆಯಲ್ಲಿ, ಅರಮನೆ ಮುಂಭಾಗದ ವೇದಿಕೆಯಲ್ಲಿ, ಮೈಸೂರಿನ ವಸ್ತು ಪ್ರದರ್ಶನದ ರಂಗವೇದಿಕೆಯಲ್ಲಿ, ಮಂಗಳೂರಿನ ಗಡಿನಾಡು ಉತ್ಸವ, ಬಾಗಲಕೋಟೆಯ ಪಟ್ಟದಕಲ್ಲು ಉತ್ಸವ, ಹಂಪಿ ಉತ್ಸವ, ದೆಹಲಿಯಲ್ಲಿ ಕನ್ನಡ ರಾಜ್ಯೋತ್ಸವ, ಮೈಸೂರಿನ ಕಲಾಮೇಳ ಮತ್ತು ಬೆಂಗಳೂರಿನಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಚಿಟ್ಟಿಮೇಳವನ್ನು ನಡೆಸಿದ್ದಾರೆ. ಅಕಾಡೆಮಿ ನಡೆಸಿದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಇತ್ತೀಚಿಗೆ ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನ ಗಗನ ಚುಕ್ಕಿ-ಭರಚುಕ್ಕಿಯಲ್ಲಿ ನಡೆದ ಬೆಳದಿಂಗಳ ಉತ್ಸವದಲ್ಲಿಯೂ ಭಾಗವಹಿಸಿದ್ದಾರೆ. ಚಿಕ್ಕಮಗಳೂರು, ಮಡಿಕೇರಿ, ಚಾಮರಾಜನಗರ, ಶಿವಮೊಗ್ಗ, ಧಾರವಾಡದ ಸಮತಾ ಸಂಭ್ರಮ ಕಾರ್ಯಕ್ರಮ ಮುಂತಾದೆಡೆಗಳಲ್ಲೆಲ್ಲಾ ಕಾರ್ಯಕ್ರಮ ನೀಡಿ ಯಶಸ್ವಿಯಾಗಿದ್ದಾರೆ. ಇವರಿಗೆ ಜಿಲ್ಲಾ ಪ್ರಶಸ್ತಿ ದೊರಕಿದೆ. ಕನ್ನಡ ಸಂಸ್ಕೃತಿ ಇಲಾಖೆ ಗೌರವಿಸಿದೆ. ಜೊತೆಗೆ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಈತ ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಪನ್ನಸಮುದ್ರ ಗ್ರಾಮದವರು. ಇತ್ತೀಚೆಗೆ ಮುಂಬೈನಲ್ಲಿ ನಡೆದ ಸುವರ್ಣ ಕರ್ನಾಟಕ ಜಾನಪದ ಉತ್ಸವದಲ್ಲಿ ಭಾಗವಹಿಸಿದ್ದಾರೆ. ೨೦೦೭ರ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಗೆ ಆಯ್ಕೆಯಾಗಿರುವುದು ಸಂತೋಷದ ಸಂಗತಿ.

**ಕುಮಾರಯ್ಯ,**
**ಪನ್ನಸಮುದ್ರ, ಕಸಬಾ ಹೋಬಳಿ,**
**ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ.**



ಅಕಾಡೆಮಿ ತನ್ನ ಇಪ್ಪತ್ತೈದು ವರ್ಷಗಳನ್ನು ಯಶಸ್ವಿಯಾಗಿ ದಾಟಿಬಂದು, ಬೆಳ್ಳಿಹಬ್ಬವನ್ನು ಆಚರಿಸುವ ಸಂಭ್ರಮದಲ್ಲಿದೆ. ಇಲ್ಲಿಯವರೆಗೆ ಜಾನಪದ ಕ್ಷೇತ್ರದ ಸಿದ್ಧಿ-ಸಾಧನೆಗಳನ್ನು, ಅಧ್ಯಯನದ ಮೂಲಕ ದುಡಿದು ತಾತ್ವಿಕ ಚೌಕಟ್ಟನ್ನು ರೂಪಿಸಿಕೊಟ್ಟ ವಿದ್ವಾಂಸರನ್ನು ಪರಿಚಯಿಸುವ "ಜಾನಪದ ತಲೆಮಾರು" ಹೊತ್ತಿಗೆಯ ನಾಲ್ಕು ಸಂಪುಟಗಳು ಬಂದಿರುವುದು ಸ್ತುತ್ಯ ಕಾರ್ಯವೇ ಸರಿ.

ಅದೇ ಪ್ರಕಾರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ ಜಾನಪದದ ವಿವಿಧ ಕಲಾವಿದರ ಪರಿಚಯವನ್ನು ದಾಖಲಿಸಬೇಕೆಂಬುದು ನನ್ನ ಹಂಬಲ. ಜಾನಪದ ಕಲಾಪ್ರಕಾರಗಳ ವೈವಿಧ್ಯಗಳನ್ನು ಸಹೃದಯರ ಕಣ್ಣು, ಕಿವಿ, ಮನಸ್ಸುಗಳಿಗೆ ಪ್ರತ್ಯಕ್ಷ ಬಣ್ಣಿಸುವ ಕಲಾವಿದರೂ ಅಷ್ಟೇ ಮುಖ್ಯರಾಗುತ್ತಾರೆ. ವಿದ್ವಾಂಸರ ಅಧ್ಯಯನ, ಅವಲೋಕನ, ಆಲೋಚನೆಗಳಿಗೆ ಮೂಲ ಸೆಲೆಯಾಗುವ ಇಂಥ ಕಲಾವಿದರು ಅನೇಕ ಸಲ ಪ್ರಶಸ್ತಿ, ಪುರಸ್ಕಾರ, ಗೌರವ, ಅವಕಾಶಗಳಿಂದ ವಂಚಿತರಾಗುತ್ತಾರೆ. ಇಂಥ ಕಲಾವಿದರ ಪರಿಚಯ, ವಿವರಗಳ ಸಂಗ್ರಹವಾದರೂ ಅಕಾಡೆಮಿಯಲ್ಲಿ ಲಭ್ಯವಾಗುವಂತಿದ್ದರೆ, ಅಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದು ನನ್ನ ಉದ್ದೇಶ.

**ಕೆರೆಮನೆ ಶಂಭು ಹೆಗಡೆ**
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

